● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಪ್ರಥಮ್ ಸ್ವಯಂ ಸೇವಾ ಸಂಸ್ಥೆ, ನಾಲ್ಕು ಹಳ್ಳಿಗಳಲ್ಲಿ 'ಶೈಕ್ಷಣಿಕ ಮಾದರಿ ಗ್ರಾಮ ಯೋಜನೆ' ಅನುಷ್ಠಾನ ಗೊಳಿಸಿದೆ. ಇದು ಶೈಕ್ಷಣಿಕ ಬದಲಾವಣೆಗೆ ನೂರಾರು ಕುಟುಂಬಗಳಿಗೆ ದಾರಿ ತೋರಿದೆ.



ಆಳ-ಅಗಲ ಶಿವಸೇನಾದಲ್ಲಿ ತಳಮಳ ಸಿದ್ಧಾಂತ ಬದಲಿನ ಸಂಕಟ

ಕೆಎಎಸ್ ಹುದ್ದೆ: ಆಕಾಂಕ್ಷಿಗಳಲ್ಲಿ ಹತಾಶೆ 4

ವಾಹನಗಳ ಮೇಲೆ ದಾಳಿಗೆ ಯತ್ನಿಸಿದ ಆನೆಗಳು 4

ಸುಪ್ರೀಂ ಕೋರ್ಟ್ ತೀರ್ಪು ಬಳಿಕ ಎಫ್ಐಆರ್ ದಾಖಲು

ಕ್ರಿಮಿನಲ್ ಪಿತೂರಿ ಆರೋಪ: ತೀಸ್ತಾ ಬಂಧನ 5

ಭಿನ್ನರಿಗೆ ಶಿವಸೇನಾ ಬೆದರಿಕೆ

ಮಹಾರಾಷ್ಟ್ರ ಬಿಕ್ಕಟ್ಟು 'ಸುಪ್ರೀಂ'ಗೆ ● ಶಾಸಕರ ವಿರುದ್ಧ ಕ್ರಮಕ್ಕೆ ಸೇನಾ ಚಿಂತನೆ

ಪ್ರಜಾವಾಣಿ ವಾರ್ತೆ

ಮುಂಬೈ: ಶಿವಸೇನಾದ ಬಂಡಾಯ ಶಾಸಕರ ಗುಂಪು ಮಹಾರಾಷ್ಟ್ರದ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರದಿಂದ ಹೊರಬಂದು, ಪ್ರತ್ಯೇಕ ಪಕ್ಷವಾಗಿ ಅಧಿಕೃತವಾಗಿ ಗುರುತಿಸಿಕೊಳ್ಳುವುದರತ್ತ ಮತ್ತಷ್ಟು ಹತ್ತಿರವಾಗಿದೆ. ಈ ಹೊತ್ತಿನಲ್ಲಿ, ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಮಗ ಆದಿತ್ಯ ಠಾಕ್ರೆ ಮತ್ತು ಪಕ್ಷದ ಮುಖ್ಯ ವಕ್ತಾರ ಸಂಜಯ ರಾವುತ್ ಅವರು, ಬಂಡಾಯ ಶಾಸಕರಿಗೆ ಪರೋಕ್ಷವಾಗಿ ಬೆದರಿಕೆ ಒಡ್ಡಿದ್ದಾರೆ. ಮಹಾರಾಷ್ಟ್ರದ ರಾಜಕೀಯ ಪರಿಸ್ಥಿತಿಯು ಇನ್ನಷ್ಟು ಪ್ರಕ್ಷುಬ್ಧವಾಗಲು ಇದು ಕಾರಣವಾಗಿದೆ.

ಬಂಡಾಯ ಮುಖಂಡರು ಮತ್ತು ಸಚಿವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಎಂವಿಎ ಚಿಂತನೆ ನಡೆಸಿದೆ. ಶಾಸಕ ಸ್ಥಾನದಿಂದ ಅನರ್ಹಗೊಳಿಸುವುದು, ಪಕ್ಷದಿಂದ ಅಮಾನತು ಮತ್ತು ಸಚಿವರನ್ನು ಸಂಪುಟದಿಂದ ಕೈಬಿಡುವುದು ಮುಂತಾದ ಕ್ರಮಗಳು ಇದರಲ್ಲಿ ಸೇರಿವೆ.

ಶಾಸಕರಿಗೆ ಭದ್ರತೆ: ಕೇಂದ್ರಕ್ಕೆ ರಾಜ್ಯಪಾಲರ ಪತ್ರ

ಬಂಡಾಯ ಶಾಸಕರಿಗೆ ಅಗತ್ಯ ಬಿದ್ದರೆ ಕೇಂದ್ರದ ಭದ್ರತಾ ಪಡೆಗಳಿಂದ ಭದ್ರತೆ ಒದಗಿಸಬೇಕು. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಿ ಎಂದು ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರಿಗೆ ಪತ್ರ ಬರೆದು ತಿಳಿಸಿದ್ದಾರೆ.

ತಮ್ಮ ಮನೆಗಳಿಗೆ ನೀಡಿದ್ದ ಭದ್ರತೆಯನ್ನು ಕಾನೂನುಬಾಹಿರವಾಗಿ ಹಿಂದಕ್ಕೆ ಪಡೆಯಲಾಗಿದೆ ಎಂದು ಸೇನಾದ 38 ಶಾಸಕರು, ಪ್ರಹಾರ್ ಜನಶಕ್ತಿ ಪಾರ್ಟಿಯ ಇಬ್ಬರು ಶಾಸಕರು ಮತ್ತು 7 ಪಕ್ಷೇತರ ಶಾಸಕರು ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ಈ ಕಾರಣಕ್ಕೆ ರಾಜ್ಯಪಾಲರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ.

ಶಾಸಕರು ಮತ್ತು ಅವರ ಕುಟುಂಬಗಳು ಸುರಕ್ಷಿತ ಎಂಬುದನ್ನು ಖಾತರಿಪಡಿಸಿಕೊಳ್ಳಿ ಎಂದು ಮಹಾರಾಷ್ಟ್ರದ ಪೊಲೀಸ್ ಮಹಾನಿರ್ದೇಶಕರಿಗೂ ರಾಜ್ಯಪಾಲರು ಸೂಚನೆ ನೀಡಿದ್ದಾರೆ.

ಇನ್ನಷ್ಟು ಸುದ್ದಿಗಳು | 6

ರಾಜಕೀಯ ಬಿಕ್ಕಟ್ಟು ಈಗ ಸುಪ್ರೀಂ ಕೋರ್ಟ್‌ನ ಕದ ತಟ್ಟಿದೆ. ಬಂಡಾಯ ಶಾಸಕರ ನಾಯಕ ಏಕನಾಥ ಶಿಂಧೆ ಮತ್ತು ಇತರ 15 ಶಾಸಕರ ಅನರ್ಹತೆಗೆ ಶಿವಸೇನಾ ನಡೆಸಿರುವ ಪ್ರಯತ್ನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರನ್ನು ಭೇಟಿಯಾಗುವ ಉದ್ದೇಶವನ್ನೂ ಬಂಡಾಯ ಶಾಸಕರು ಹೊಂದಿದ್ದಾರೆ. ಆದರೆ, ಪರೋಕ್ಷ ಬೆದರಿಕೆಯು ಮುಂಬೈಗೆ ಬಾರದಂತೆ ಶಾಸಕರನ್ನು ತಡೆದಿದೆ ಎನ್ನಲಾಗಿದೆ.

'ವಿಮಾನ ನಿಲ್ದಾಣದಿಂದ ವಿಧಾನ ಭವನಕ್ಕೆ ವರ್ಲಿಯನ್ನು ಹಾದೇ ಹೋಗಬೇಕು. ಈ ಶಾಸಕರು ಹೋಗಿದ್ದು ಒಳ್ಳೆಯದೇ ಆಯಿತು. ವಂಚಕರಿಗೆ ಪಕ್ಷದಲ್ಲಿ ಸ್ಥಳ ಇಲ್ಲ. ಅವರಿಗಾಗಿ ನಾವು ಏನನ್ನು ಮಾಡಿಲ್ಲ ಎಂಬುದನ್ನು ಈ ಶಾಸಕರು ವಿಧಾನಸಭೆಗೆ ಬಂದಾಗ ನಮ್ಮ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಹೇಳಬೇಕು' ಎಂದು ಯುವಸೇನಾ ಅಧ್ಯಕ್ಷ ಆದಿತ್ಯ ಠಾಕ್ರೆ ಭಾನುವಾರ ಹೇಳಿದ್ದಾರೆ.

'ಅವರ ಆತ್ಮಗಳು ಸತ್ತಿವೆ. 40 ದೇಹಗಳು ಗುವಾಹಟಿಯಿಂದ ಬರಲಿವೆ. ಅವುಗಳನ್ನು ನೇರವಾಗಿ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗುವುದು' ಎಂದು ರಾವುತ್ ಹೇಳಿದ್ದಾರೆ.

ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಸಚಿವ ಉದಯ ಸಾಮಂತ್ ಅವರು ಗುವಾಹಟಿ ತಲುಪಿದ್ದು ಬಂಡಾಯ ಶಾಸಕರ ಸಂಖ್ಯೆ ಹೆಚ್ಚಿದೆ. ಗುವಾಹಟಿಯಲ್ಲಿ ಇರುವ ಶಾಸಕರ ಸಂಖ್ಯೆ 50 ತಲುಪಿದೆ. ಇದರಲ್ಲಿ ಪಕ್ಷೇತರರೂ ಸೇರಿದ್ದಾರೆ.

ಈ ಮಧ್ಯೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಎಂವಿಎ ಮುಖಂಡರ ಜತೆಗೆ ಸಭೆ ನಡೆಸಿದ್ದಾರೆ.

6ನೇ | ಪುಟ ನೋಡಿ

'ದಾವೂದ್ ನಂಟಿದ್ದವರಿಗೆ ಬೆಂಬಲ ನೀಡಿದ್ದಕ್ಕೆ ಬಂಡಾಯ' 3A

ರಣಜಿ: ಮಧ್ಯಪ್ರದೇಶಕ್ಕೆ ಚೊಚ್ಚಲ ಕಿರೀಟ

ಬೆಂಗಳೂರು: ಮಧ್ಯಪ್ರದೇಶ ತಂಡವು ಇದೇ ಮೊದಲ ಸಲ ರಣಜಿ ಟ್ರೋಫಿ ಜಯಿಸಿತು. ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಕ್ತಾಯವಾದ ಫೈನಲ್‌ನಲ್ಲಿ ಮಧ್ಯಪ್ರದೇಶವು 6 ವಿಕೆಟ್‌ಗಳಿಂದ ಮುಂಬೈ ತಂಡವನ್ನು ಸೋಲಿಸಿತು. 11

ಒಳ ಪುಟ

ನಗರದ ಮರಗಳ ನಿರ್ವಹಣೆ ಬಿಬಿಎಂಪಿ ಡಿಸಿಎಫ್ ವ್ಯಾಪ್ತಿಗೆ 3B

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಸ್‌ಪಿ, ಎಎಪಿಗೆ ಆಘಾತ

ಬಿಜೆಪಿಗೆ ಜಯ, ಕಾಂಗ್ರೆಸ್‌ಗೆ ಸಮಾಧಾನ

ನವದೆಹಲಿ: ಲೋಕಸಭೆಯ ಮೂರು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಆಘಾತ ಅನುಭವಿಸಿವೆ. ಉತ್ತರ ಪ್ರದೇಶದಲ್ಲಿ ಎಸ್‌ಪಿ ವಿರುದ್ಧ ಬಿಜೆಪಿ ಅಭ್ಯರ್ಥಿಗಳು ಹಾಗೂ ಪಂಜಾಬ್‌ನಲ್ಲಿ ಎಎಪಿ ಅಭ್ಯರ್ಥಿ ವಿರುದ್ಧ ಅಕಾಲಿದಳ (ಅಮೃತಸರ) ಅಭ್ಯರ್ಥಿ ಗೆಲುವು ದಾಖಲಿಸಿದ್ದಾರೆ.

ಎಎಪಿಯ ಸಂಗ್ರೂರ್ ಕ್ಷೇತ್ರವು ಅಕಾಲಿದಳ (ಅಮೃತಸರ) ಪಾಲಾಗಿದ್ದರೆ, ತನ್ನ ಭದ್ರನೆಲೆಗಳಾದ ಆಜಂಗಡ ಹಾಗೂ ರಾಂಪುರ ಕ್ಷೇತ್ರಗಳನ್ನು ಎಸ್‌ಪಿ ಭಾರಿ ಮತಗಳ ಅಂತರದಿಂದ ಕಳೆದುಕೊಂಡಿದೆ.

ವಿಧಾನಸಭಾ ಉಪಚುನಾವಣೆ ನಡೆದ ಏಳು ಕ್ಷೇತ್ರಗಳ ಪೈಕಿ ತ್ರಿಪುರಾದಲ್ಲಿ 3 ಕಡೆ ಬಿಜೆಪಿ ಗೆದ್ದಿದೆ. ಕಾಂಗ್ರೆಸ್ ಪಕ್ಷವು ತ್ರಿಪುರಾ ಹಾಗೂ ಜಾರ್ಖಂಡ್‌ನಲ್ಲಿ ಒಂದೊಂದು ಕ್ಷೇತ್ರದಲ್ಲಿ ಜಯ ಗಳಿಸಿದೆ. ದೆಹಲಿಯಲ್ಲಿ ಎಎಪಿ, ಆಂಧ್ರಪ್ರದೇಶದಲ್ಲಿ ವೈಎಸ್‌ಆರ್‌ಸಿ ತಲಾ ಒಂದೊಂದು ಕ್ಷೇತ್ರವನ್ನು ಗೆದ್ದುಕೊಂಡಿವೆ.

ದೆಹಲಿಯ ರಾಜಿಂದರ್ ನಗರ ವಿಧಾನಸಭಾ ಕ್ಷೇತ್ರವನ್ನು ಎಎಪಿ ಗೆದ್ದುಕೊಂಡಿದ್ದರೂ, ಸಂಗ್ರೂರ್ ಲೋಕಸಭಾ ಕ್ಷೇತ್ರದ ಮತದಾರರು ಪಕ್ಷಕ್ಕೆ ಮಣೆ ಹಾಕಿಲ್ಲ.

6ನೇ | ಪುಟ ನೋಡಿ

ಬೆಳಗಾವಿ ಬಳಿ ಕ್ರೂಸರ್ ಭೀಕರ ಅಪಘಾತ

ಪ್ರತ್ಯೇಕ ಅಪಘಾತ: 11 ಸಾವು

ಬೆಂಗಳೂರು: ರಾಜ್ಯದಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತಗಳಲ್ಲಿ ಏಳು ಮಂದಿ ಕೂಲಿ ಕಾರ್ಮಿಕರು ಸೇರಿದಂತೆ ಒಟ್ಟು 11 ಮಂದಿ ಮೃತಪಟ್ಟಿದ್ದಾರೆ.

ಬೆಳಗಾವಿ ತಾಲ್ಲೂಕಿನ ಕಲ್ಯಾಳ್‌ದಲ್ಲಿ ಭಾನುವಾರ ಕ್ರೂಸರ್ ಪಲ್ಟಿಯಾಗಿ ಏಳು ಮಂದಿ ಮೃತಪಟ್ಟರೆ, ಮಂಡ್ಯ ಜಿಲ್ಲೆ ನಾಗಮಂಗಲ ಬಳಿ ಶನಿವಾರ ರಾತ್ರಿ ಲಾರಿ–ಕಾರು ಡಿಕ್ಕಿಯಲ್ಲಿ ಇಬ್ಬರು ಕೃಷಿ ಕಾರ್ಮಿಕರು ಸೇರಿ ಮೂವರು ಸತ್ತಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ಬಳಿ ವೀಕೆಂಡ್ ಬೈಕ್ ರೈಡಿಂಗ್‌ಗೆ ಹೊರಟಿದ್ದ ಟೆಕಿಯೊಬ್ಬರು, ವಾಹನ ತಗುಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಗವಿಮಠದ ಬಳಿ ಮೃತಪಟ್ಟರು.

ಬೆಳಗಾವಿ ವರದಿ: ತಾಲ್ಲೂಕಿನ ಕಲ್ಯಾಳ್ ಗ್ರಾಮದ ಸೇತುವೆ ಬಳಿ ಕಾರ್ಮಿಕರು ಪ್ರಯಾಣಿಸುತ್ತಿದ್ದ ಕ್ರೂಸರ್ ವಾಹನ ಪಲ್ಟಿಯಾಗಿ ಏಳು ಜನ ಮೃತಪಟ್ಟು, 11 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಮೂವರ ಸ್ಥಿತಿ ಗಂಭೀರವಾಗಿದೆ.

ಗೋಕಾಕ ತಾಲ್ಲೂಕಿನ ಅಕ್ಕ ತಂಗೇರಹಾಳದ ಅಡಿವೆಪ್ಪ ಚಿಲಬಾಂವಿ (27), ಬಸವರಾಜ ದಳವಿ (30), ಬಸವರಾಜ ಹಣಮನ್ನವರ (51), ಆಕಾಶ ಗಸ್ತಿ (21), ದಾಸನಟ್ಟಿಯ ಫಕೀರಪ್ಪ ಹರಿಜನ (55), ಮಲ್ಲಪ್ಪ ದಾಸನಟ್ಟಿ (30) ಮತ್ತು ಮಲ್ಲಾಪುರ (ಎಸ್.ಎ)ನ ಬಸವರಾಜ ಸನದಿ (35) ಮೃತಪಟ್ಟಿದ್ದಾರೆ.

6ನೇ | ಪುಟ ನೋಡಿ

ತೀಸ್ತಾ ಬಂಧನ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರನ್ನು ಬಂಧಿಸಿರುವುದನ್ನು ಖಂಡಿಸಿ ವಿವಿಧ ಸಂಘಟನೆ ಪದಾಧಿಕಾರಿಗಳು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಪುರಭವನದ ಎದುರು ಸೇರಿದ್ದ ಪ್ರತಿಭಟನಕಾರರು ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಕ್ಲಾಟ್: ಎಸ್‌ಸಿ ಕೆಟಗರಿಯಲ್ಲಿ ಜ್ಞಾನಾಂಕಿತ್‌ಗೆ ಪ್ರಥಮ ರ‍್ಯಾಂಕ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ಪ್ರಸಕ್ತ ಸಾಲಿನಲ್ಲಿ ನಡೆದ 'ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ' (ಸಿಎಲ್‌ಎಟಿ-ಕ್ಲಾಟ್) ಯಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಕೆಟಗರಿಯಲ್ಲಿ ಮೈಸೂರಿನ ಜ್ಞಾನಾಂಕಿತ್ ಜೆ.ಎ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ. ಅವರು ಅಖಿಲ ಭಾರತ ಮಟ್ಟದಲ್ಲಿ 292ನೇ ರ‍್ಯಾಂಕ್ ಪಡೆದಿದ್ದಾರೆ.

ಕ್ಲಾಟ್ ಫಲಿತಾಂಶ ಇದೇ 25ರಂದು ಪ್ರಕಟವಾಗಿದೆ. ಜ್ಞಾನಾಂಕಿತ್ ಅವರಂತೆ ರಾಜ್ಯದ ಇನ್ನೂ ಕೆಲವು ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಉನ್ನತ ರ‍್ಯಾಂಕ್ ಪಡೆದು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗಿದ್ದಾರೆ.

ಸಂಜನಾ ಎಸ್. ರಾವ್ 7ನೇ, ಶಿವರಾಮನ್ ರಘುರಾಮನ್ 12ನೇ, ಔಮಿತಾ ಮಿಶ್ರಾ 14ನೇ, ಪ್ರೇಮ್ ವಿನೋದ್ 16ನೇ ರ‍್ಯಾಂಕ್ ಪಡೆದಿದ್ದಾರೆ.

'ಒಳ್ಳೆಯ ರ‍್ಯಾಂಕ್ ನಿರೀಕ್ಷಿಸಿದ್ದೆ. ಬಹಳ ಖುಷಿ ಆಗಿದೆ. ಅಪ್ಪ ಮಿಲಿಟರಿಯಲ್ಲಿದ್ದರು. ತಾಯಿ ಪ್ರೌಢಶಾಲೆಯಲ್ಲಿ ಶಿಕ್ಷಕಿ. 10ನೇ ತರಗತಿವರೆಗೆ ನಂಜನಗೂಡಿನ ಸಿಟಿಜನ್ ಪಬ್ಲಿಕ್ ಶಾಲೆಯಲ್ಲಿ ಓದಿದೆ. ಮೈಸೂರಿನಲ್ಲಿರುವ ಡೆಮಾನ್‌ಸ್ಟ್ರೇಷನ್ ಮಲ್ಟಿಪರ್ಪಸ್ ಸ್ಕೂಲ್‌ನಲ್ಲಿ ಪಿಯುಸಿ ಮಾಡಿದೆ. ವೈದ್ಯರಾಗಿರುವ ಮಾವ ಸುರೇಶ್ ಅವರು ಕ್ಲಾಟ್ ಬರೆಯುವಂತೆ ಪ್ರೋತ್ಸಾಹಿಸಿದರು. ಮುಂದೆ ಸುಪ್ರೀಂ ಕೋರ್ಟ್ ವಕೀಲನಾಗಬೇಕು ಎಂದುಕೊಂಡಿದ್ದೇನೆ' ಎಂದು ಜ್ಞಾನಾಂಕಿತ್ ಸಂತಸ ಹಂಚಿಕೊಂಡರು.

ದೇಶದಲ್ಲಿರುವ 22 ಕಾನೂನು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕೆ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳ ಒಕ್ಕೂಟ 'ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ' ನಡೆಸುತ್ತದೆ. ಈ ವರ್ಷ ಜೂನ್ 19ರಂದು ನಡೆದಿದ್ದ ಪರೀಕ್ಷೆಗೆ 60,895 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ, 56,472 ಮಂದಿ ಪರೀಕ್ಷೆ ಬರೆದಿದ್ದರು.



ನಗರದಲ್ಲಿ ಭಾನುವಾರ ಎಂ.ಸಿ. ನರಸಿಂಹನ್ ಮತ್ತು ಕೋ. ಚೆನ್ನಬಸಪ್ಪ ಅವರ ಸ್ಮರಣಾರ್ಥ ಆಯೋಜಿಸಿದ್ದ ಶತಮಾನೋತ್ಸವದ ಕಾರ್ಯಕ್ರಮದಲ್ಲಿ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ, ಹಿರಿಯ ವಕೀಲ ಕೆ. ಸುಬ್ಬರಾವ್, ಎಂ.ಎಸ್. ಕೃಷ್ಣನ್ ಸ್ಮಾರಕ ಸಂಸ್ಥೆಯ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ, ಡಾ.ಬದರಿನಾಥ್ ರಾವ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

'ಕಾರ್ಮಿಕ ವರ್ಗ ಸರಕು ಅಲ್ಲ'

ಬೆಂಗಳೂರು: 'ಕಾರ್ಮಿಕ ವರ್ಗ ಸರಕು ಅಲ್ಲ. ಆಧುನಿಕ ತಂತ್ರಜ್ಞಾನ ಯುಗದಲ್ಲಿ ಡಿಜಿಟಲ್ ಬಂಡವಾಳಶಾಹಿಯಿಂದ ಶೋಷಣೆ ನಡೆಯುತ್ತಿದೆ' ಎಂದು ಅಮೆರಿಕದ ಕೆಟರಿಂಗ್ ವಿಶ್ವವಿದ್ಯಾಲಯದ ಸಮಾಜವಿಜ್ಞಾನ ಮತ್ತು ಏಷ್ಯನ್ ಅಧ್ಯಯನಗಳ ಸಹ ಪ್ರಾಧ್ಯಾಪಕ ಡಾ. ಬದರಿನಾಥ್ ರಾವ್ ವಿಶ್ಲೇಷಿಸಿದರು.

ಎಂ.ಎಸ್. ಕೃಷ್ಣನ್ ಸ್ಮಾರಕ ಸಂಸ್ಥೆ, ಇಂಡಿಯನ್ ಅಸೋಸಿಯೇಷನ್ ಆಫ್ ಲಾಯರ್ಸ್, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಆಶ್ರಯದಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದ ದಿವಂಗತ ಎಂ.ಸಿ. ನರಸಿಂಹನ್ ಹಾಗೂ ಸಾಹಿತಿ ದಿವಂಗತ ಕೋ. ಚೆನ್ನಬಸಪ್ಪ ಅವರ ಸ್ಮರಣಾರ್ಥ ಭಾನುವಾರ ಆಯೋಜಿಸಿದ್ದ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

'ದುಡಿಯುವ ವರ್ಗವನ್ನು ಸರಕು ಎಂದು ಪರಿಗಣಿಸಿದರೆ ಸಾಮಾಜಿಕ ಅವ್ಯವಸ್ಥೆಗಳು ಹೆಚ್ಚಾಗುತ್ತವೆ. ಹೀಗಾಗಿ, ಇಂತಹ ಅಭಿಪ್ರಾಯವನ್ನು ಬಂಡವಾಳಶಾಹಿ ಮನಃಸ್ಥಿತಿಯಿಂದ ತೆಗೆದುಹಾಕಬೇಕಾಗಿದೆ' ಎಂದು ತಿಳಿಸಿದರು.

ಚೀನಾ, ಅಮೆರಿಕ ಸೇರಿ ವಿವಿಧ ದೇಶಗಳಲ್ಲಿ ಕಾರ್ಮಿಕರ ಪರಿಸ್ಥಿತಿ ಮತ್ತು ಕಾನೂನುಗಳನ್ನು ವಿಶ್ಲೇಷಿಸಿದ ಅವರು, 'ಇಂದು ಆಧುನಿಕ ರೂಪದ ಗುಲಾಮಗಿರಿ ಹೆಚ್ಚುತ್ತಿದೆ. ಗುಲಾಮಗಿರಿ ಇಲ್ಲದ ಬಂಡವಾಳಶಾಹಿ ವ್ಯವಸ್ಥೆ ಎಲ್ಲಿಯೂ ಇಲ್ಲ. ಇಂತಹ ಗುಲಾಮಗಿರಿ ವ್ಯವಸ್ಥೆಯಲ್ಲಿ ಲಕ್ಷಾಂತರ ಮಂದಿ ಸಿಲುಕಿದ್ದಾರೆ' ಎಂದು ವಿವರಿಸಿದರು.

'ಜಗತ್ತಿನಾದ್ಯಂತ ನಿರುದ್ಯೋಗ ಹೆಚ್ಚಾಗುತ್ತಿದೆ. ಆದರೆ, ಅಧಿಕಾರದಲ್ಲಿರುವವರು ನಿರ್ಲಕ್ಷ್ಯ ಮನೋಭಾವ ಹೊಂದಿದ್ದಾರೆ. ಜಗತ್ತಿನಾದ್ಯಂತ 200 ಕೋಟಿಗೂ ಹೆಚ್ಚು ಜನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇವರ ದುಡಿಮೆಗೆ ಬೆಲೆ ಇಲ್ಲ. ಇವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದು, ಇವರ ಕಾರ್ಯವನ್ನು ಗುರುತಿಸುತ್ತಿಲ್ಲ' ಎಂದರು.

'ಅಮೆರಿಕದಲ್ಲಿ ಕಾರ್ಮಿಕ ಕಾನೂನುಗಳು ಪರಿಣಾಮಕಾರಿಯಾಗಿಲ್ಲ. ವಕೀಲರು ದುಬಾರಿ ಶುಲ್ಕ ವಿಧಿಸುತ್ತಿರುವುದರಿಂದ ತಮ್ಮ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಬಹುತೇಕ ಮಂದಿ ನ್ಯಾಯಾಲಯದ ಮೊರೆ ಹೋಗುತ್ತಿಲ್ಲ. ಹೀಗಾಗಿ, ಹಕ್ಕುಗಳಿಗೆ ಬೆಲೆ ಇಲ್ಲದಂತಾಗಿದೆ. ಕಾರ್ಮಿಕರ ಯೂನಿಯನ್‌ಗಳ ಸದಸ್ಯತ್ವವೂ ಕಡಿಮೆಯಾಗುತ್ತಿದೆ. ಕಾರ್ಮಿಕರ ಹಕ್ಕುಗಳಿಗೆ ಚ್ಯುತಿಯಾಗುತ್ತಿದೆ. ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕು' ಎಂದು ವಿವರಿಸಿದರು.

ಹಿರಿಯ ವಕೀಲ ಕೆ. ಸುಬ್ಬರಾವ್ ಮಾತನಾಡಿ, 'ಕಮ್ಯುನಿಸ್ಟ್ ಪಕ್ಷದಿಂದ ವಿಧಾನಸಭೆಗೆ ಒಬ್ಬ ಶಾಸಕರನ್ನು ಸಹ ಆಯ್ಕೆ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಎಡಪಂಥೀಯರು ಈ ಹಿಂದೆ ಮಾಡಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ದುಡಿಯುವ ವರ್ಗ ಒಗ್ಗಟ್ಟಾದರೆ ಬದಲಾವಣೆ ಸಾಧ್ಯ' ಎಂದು ಪ್ರತಿಪಾದಿಸಿದರು.



ADMISSION CORNER ಕ್ಲಾಸಿಫೈಡ್ಸ್









CONNECT ಕ್ಲಾಸಿಫೈಡ್ಸ್



ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಚರಂಡಿ ಕಾಮಗಾರಿ ಪೂರ್ಣಗೊಳಿಸಿ

ಕೆ.ಆರ್. ಪುರದ (ವಾರ್ಡ್‌ನ 52) ಹೃದಯ ಭಾಗದಲ್ಲಿರುವ ಎ.ಕೆ. ಬಡಾವಣೆಯ ಚರಂಡಿ ಅಗೆಯಲಾಗಿದೆ. ಚರಂಡಿ ಪುನರ್‌ನಿರ್ಮಾಣ ಕಾಮಗಾರಿ ಅರ್ಧದಲ್ಲೇ ಬಿಟ್ಟಿರುವುದರಿಂದ ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಸ್ಥಳೀಯ ನಿವಾಸಿಗಳ ಆಗ್ರಹ.

ಕೋದಂಡರಾಮ.ಆರ್, ಸ್ಥಳೀಯ ನಿವಾಸಿ



ಕೆ.ಆರ್‌ ಪುರದ ಚರಂಡಿ ಕಾಮಗಾರಿ ಅರ್ಧಕ್ಕೆ ನಿಲ್ಲಿಸಿರುವುದು



ಮುನಿಯಪ್ಪ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಚರಂಡಿ ನೀರು ನಿಂತಿರುವುದು

ಮುನಿಯಪ್ಪ ಬಡಾವಣೆ: ರಸ್ತೆ ಚರಂಡಿ ದುರಸ್ತಿಗೆ ಆಗ್ರಹ


ಯಶವಂತಪುರ ವಿಧಾನಸಭಾ ಕ್ಷೇತ್ರದ ಮುನಿಯಪ್ಪ ಬಡಾವಣೆ ಜಿ.ಹೊಸಹಳ್ಳಿ, ದೊಡ್ಡಕಲ್ಲಸಂದ್ರ ವಾರ್ಡ್‌ಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆ ಹದಗೆಟ್ಟಿವೆ. ವೃದ್ಧರು ಮತ್ತು ಮಕ್ಕಳ ಓಡಾಟಕ್ಕೆ ಸಮಸ್ಯೆಯಾಗಿದೆ. ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆಯಲ್ಲಿ ಕೊಳಚೆ ನೀರು ಹರಿಯುತ್ತಿದೆ. ಬಡಾವಣೆಗೆ ಹೊಂದಿಕೊಂಡಂತೆ ಇರುವ ಮಹಾವೀರ ಫಾರ್ಚ್ಯೂನ್ ಅಪಾರ್ಟ್‌ಮೆಂಟ್‌ನವರು ಚರಂಡಿ ವ್ಯವಸ್ಥೆ ಅಳವಡಿಸಿಕೊಳ್ಳದ ಕಾರಣ, ಮಳೆ ಬಂದಾಗ ನೀರೆಲ್ಲಾ ತಗ್ಗು ಪ್ರದೇಶದ ಮನೆಗಳಿಗೆ ನುಗ್ಗುತ್ತದೆ. ಅಪಾರ್ಟ್‌ಮೆಂಟ್‌ನವರು ಮಳೆನೀರು ಕೊಯ್ಲು ಪದ್ಧತಿ ಅಳವಡಿಸಿಕೊಂಡಿಲ್ಲ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಚರಂಡಿ ವ್ಯವಸ್ಥೆ ಸರಿಪಡಿಸಿ, ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎನ್‌.ಬಿ. ಅರುಣಕುಮಾರ್, ರಮ್ಯಾ, ಬೃಂದಾ, ಗಂಗಯ್ಯ, ಸ್ಥಳೀಯ ನಿವಾಸಿಗಳು


ಮೂಲಸೌಕರ್ಯ ಕಲ್ಪಿಸಲು ಒತ್ತಾಯ

ಶಂಕರಪ್ಪ ಕೆಂಚನಹಳ್ಳಿ ಬಡಾವಣೆಯಿಂದ ರಾಜಾಜಿನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಳೆದ ಹತ್ತು ವರ್ಷಗಳಿಂದ ದುರಸ್ತಿಗೊಳಿಸಿಲ್ಲ. ಈ ರಸ್ತೆ ಸಂಪೂರ್ಣ ಕಲ್ಲು ಮಣ್ಣಿನಿಂದ ಕೂಡಿದೆ. ಮಕ್ಕಳು ಮತ್ತು ವೃದ್ಧರು ಈ ರಸ್ತೆಯಲ್ಲಿ ಸಂಚರಿಸುವುದು ಕಷ್ಟ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಭಾಗದ ರಸ್ತೆ ಮತ್ತು ಚರಂಡಿ ಸೇರಿದಂತೆ ಮೂಲಸೌಕರ್ಯ ಕಲ್ಪಿಸಿಕೊಡಬೇಕು ಎಂಬುದು ಸ್ಥಳೀಯ ನಿವಾಸಿಗಳ ಆಗ್ರಹ.

ರಂಗನಾಥ, ಸ್ಥಳೀಯ ನಿವಾಸಿ



ರಾಜರಾಜೇಶ್ವರಿ ನಗರದಿಂದ ಶಂಕರಪ್ಪ ಕೆಂಚನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ



ಥಣಿಸಂದ್ರ ಮುಖ್ಯರಸ್ತೆ ಸಂಪೂರ್ಣ ಹಾಳಾಗಿರುವುದು

ಥಣಿಸಂದ್ರ ರಸ್ತೆ ಸರಿಪಡಿಸಿ

ಶೆಲ್ ಪೆಟ್ರೋಲ್ ಬಂಕ್‌ನ ಬ್ರೈಟ್ ಶಾಲೆಯ ಅಶ್ವತ್ಥನಗರಕ್ಕೆ ಸಂಪರ್ಕ ಕಲ್ಪಿಸುವ ಥಣಿಸಂದ್ರ ಮುಖ್ಯರಸ್ತೆ ಕಳೆದ ಐದು ವರ್ಷಗಳಿಂದ ಡಾಂಬರೀಕರಣಗೊಂಡಿಲ್ಲ. ಬೇಸಿಗೆ ಕಾಲದಲ್ಲಿ ಪ್ರತಿದಿನ ದೂಳಿನ ಮಜ್ಜನವಾದರೆ, ಮಳೆಗಾಲದಲ್ಲಿ ರಸ್ತೆಯೆಲ್ಲ ಕೆಸರು ಗದ್ದೆಯಂತಾಗುತ್ತದೆ. ಈ ಕುರಿತು ಶಾಸಕ ಕೃಷ್ಣ ಬೈರೇಗೌಡ ಅವರ ಗಮನಕ್ಕೆ ತಂದರೂ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೊಳಿಸಬೇಕು ಎಂಬುದು ಸ್ಥಳೀಯ ನಿವಾಸಿಗಳ ಆಗ್ರಹ.

ಪ್ರಶಾಂತ್, ಸ್ಥಳೀಯ ನಿವಾಸಿ

ಆಮೆಗತಿಯಲ್ಲಿ ಸಾಗಿದ ಕಾಮಗಾರಿ

ಸಂಪಿಗೆ ರಸ್ತೆ ಸಿಗ್ನಲ್ ಬಳಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಭಾಗದಲ್ಲಿ ಸಂಚರಿಸುವ ವಾಹನ ಸವಾರರು ಮತ್ತು ಪಾದಚಾರಿಗಳಿಗೆ ಪ್ರತಿದಿನ ದೂಳಿನ ಮಜ್ಜನ. ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಲ್ಲುವುದರಿಂದ ವಾಹನ ಸವಾರರು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ರಮೇಶ್, ಸ್ಥಳೀಯ ನಿವಾಸಿ



ಸಂಪಿಗೆ ರಸ್ತೆ ಸಿಗ್ನಲ್ ಬಳಿ ನಡೆಯುತ್ತಿರುವ ವೈಟ್ ಟಾಪಿಂಗ್ ಕೆಲಸ ಆಮೆಗತಿಯಲ್ಲಿ ಸಾಗುತ್ತಿರುವುದು



ತುಮಕೂರು ರಸ್ತೆಯಿಂದ ನೆಲಗದರನಹಳ್ಳಿಗೆ ಹೋಗುವ ಮುಖ್ಯರಸ್ತೆ ತುಂಬಾ ಹದಗೆಟ್ಟಿರುವುದು

ರಸ್ತೆ ದುರಸ್ತಿಗೊಳಿಸಿ

ತುಮಕೂರು ರಸ್ತೆಯಿಂದ ನೆಲಗದರನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಸಂಪೂರ್ಣ ಹದಗೆಟ್ಟಿದೆ. ರಕ್ಮಿಣಿನಗರ, ಎಚ್‌ಎಂಟಿ ಬಡಾವಣೆ, ಬೆಲ್ಮಾರ್ ಬಡಾವಣೆ, ಗೃಹಲಕ್ಷ್ಮಿ ಬಡಾವಣೆಗೆ ಈ ರಸ್ತೆಯ ಮೂಲಕ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಚಾಲಕರು ತಗ್ಗು ಗುಂಡಿಗಳನ್ನ ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಸಂಬಂಧ ಪಟ್ಟ ಅಧಿಕಾರಿಗಳು ರಸ್ತೆ ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಸ್ಥಳೀಯರ ಆಗ್ರಹ.

ಪಾರ್ವತಮ್ಮ.ಯು.ಎಚ್, ವಿನಾಯಕನಗರ ನಿವಾಸಿ



ಮಾಗಡಿ ಮುಖ್ಯ ರಸ್ತೆಯ ದುಃಸ್ಥಿತಿ

ಮಾಗಡಿ ಮುಖ್ಯರಸ್ತೆ: ಗುಂಡಿಗಳ ತವರೂರು

ಮಾಗಡಿ ಮೆಟ್ರೋ ಸ್ಟೇಷನ್‌ನಿಂದ ಕುಷ್ಠರೋಗ ಆಸ್ಪತ್ರೆಯವರೆಗೂ ಇರುವ ಮುಖ್ಯರಸ್ತೆ ಗುಂಡಿಗಳಿಂದ ಕೂಡಿದೆ. ಇದರಿಂದ ಪ್ರತಿದಿನ ಅಪಘಾತಗಳು ಸಂಭವಿಸುತ್ತಿವೆ. ಈ ರಸ್ತೆ ಡಾಂಬರು ಕಂಡು ದಶಕಗಳೇ ಕಳೆದಿವೆ. ಕೇವಲ ತೇಪೆ ಹಾಕುವ ಕೆಲಸ ಮಾತ್ರ ಮಾಡಲಾಗುತ್ತಿದೆ. ಸಂಬಂಧಪಟ್ಟವರ ಗಮನಸೆಳೆದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರೂ ಇತ್ತ ಗಮನಹರಿಸಿ ವಾಹನ ಸವಾರರಿಗೆ ಆಗುತ್ತಿರುವ ಅನನುಕೂಲ ಸರಿಪಡಿಸಬೇಕು.

ಎಂ.ಉಮಾಶಂಕರ ಬಾಬು, ಕೆಂಪಾಪುರ ಅಗ್ರಹಾರ

ಚಿತ್ರಕಲಾ ಪರಿಷತ್ ಅಧ್ಯಕ್ಷರಾಗಿ ಬಿ.ಎಲ್ ಶಂಕರ್ ಆಯ್ಕೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾಗಿ ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್ ಚುನಾಯಿತರಾಗಿದ್ದಾರೆ.



ಈ ಸ್ಥಾನಕ್ಕೆ ಅವರು ನಾಲ್ಕನೇ ಬಾರಿ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ಭಾನುವಾರ ಚುನಾವಣೆ ನಡೆಯಿತು. ಪರಿಷತ್ತಿನ ಆವರಣದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸದಸ್ಯರು ಮತದಾನ ಮಾಡಿದರು. ಬಿ.ಎಲ್. ಶಂಕರ್ ಅವರು 122 ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಪ್ರೊ.ಕೆ.ಇ. ರಾಧಾಕೃಷ್ಣ ಅವರು 20 ಮತಗಳನ್ನು ಪಡೆದರು. ನಾಲ್ಕನೇ ಬಾರಿ ಅಧ್ಯಕ್ಷರಾಗಿ ಚುನಾಯಿತರಾಗಿರುವ ಬಿ.ಎಲ್. ಶಂಕರ್, ಈ ಹಿಂದೆ ಎರಡು ಬಾರಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಪರಿಷತ್ತಿನ ಉಪಾಧ್ಯಕ್ಷರಾಗಿ ಪ್ರೊ.ಕೆ.ಎಸ್. ಅಪ್ಪಾಜಯ್ಯ, ಟಿ. ಪ್ರಭಾಕರ್ ಹಾಗೂ ಎ. ರಾಮಕೃಷ್ಣಪ್ಪ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಎನ್. ಶಶಿಧರ್ ಚುನಾಯಿತರಾಗಿದ್ದಾರೆ. ಸಹಾಯಕ ಕಾರ್ಯದರ್ಶಿಯಾಗಿ ಟಿ. ಚಂದ್ರಶೇಖರ್ ಮತ್ತು ಬಿ.ಎಲ್. ಶ್ರೀನಿವಾಸ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ಎನ್. ಲಕ್ಷ್ಮೀಪತಿ ಬಾಬು ಅವರು ಚುನಾಯಿತರಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಟಿ.ವಿ. ತಾರಕೇಶ್ವರಿ, ಆರ್.ಜಿ. ಭಂಡಾರಿ, ಸಿ.ಪಿ. ಉಷಾರಾಣಿ, ಬಿ.ವೈ. ವಿನೋದಾ, ಸುಬ್ರಮಣ್ಯ ಕುಕ್ಕೆ, ಅಮ್ರಿತ ವಿಮಲನಾಥನ್ ಹಾಗೂ ಪಿ. ದಿನೇಶ್ ಮಗರ್ ಅವರು ಆಯ್ಕೆಯಾಗಿದ್ದಾರೆ. ನೂತನ ಆಡಳಿತ ಮಂಡಳಿ ಮುಂದಿನ 3 ವರ್ಷ ಕಾರ್ಯನಿರ್ವಹಿಸಲಿದೆ ಎಂದು ಚುನಾವಣಾಧಿಕಾರಿ ಗಗನ ಕೆ. ತಿಳಿಸಿದ್ದಾರೆ.

ನಗರದಲ್ಲಿ ಇಂದು

ನಾಡಪ್ರಭು ಕೆಂಪೇಗೌಡ ಜಯಂತಿ: ಉಪಸ್ಥಿತಿ: ವಿ.ಸೋಮಣ್ಣ, ಶೈಲಜಾ ಸೋಮಣ್ಣ, ಅರುಣ ಸೋಮಣ್ಣ, ಬಿ.ಎಸ್. ನವೀನ್, ಪಾಲನೇತ್ರ, ಆಯೋಜನೆ: ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ: ಪಾಲಿಕೆ ಸೌಧ ಆವರಣ, ಎಂ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ 9

ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ: ಬೆಳಿಗ್ಗೆ 7.30ರಿಂದ ಜ್ಯೋತಿಗಳೊಂದಿಗೆ ಮೆರವಣಿಗೆ ಹಾಗೂ ಜಾನಪದ ಗೀತ ಗಾಯನ, ಸಮಾರೋಪ ಸಮಾರಂಭ 3.30ಕ್ಕೆ. ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಉದ್ಘಾಟನೆ: ಎಚ್‌.ಡಿ. ದೇವೇಗೌಡ, ಉಪಸ್ಥಿತಿ: ಎಸ್.ಎಂ. ಕೃಷ್ಣ, ಎಚ್‌.ಡಿ. ಕುಮಾರಸ್ವಾಮಿ, ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಸಿ.ಎನ್. ಬಾಲಕೃಷ್ಣ, ಆಯೋಜನೆ: ರಾಜ್ಯ ಒಕ್ಕಲಿಗರ ಸಂಘ, ಸ್ಥಳ: ರಾಜ್ಯ ಒಕ್ಕಲಿಗರ ಸಂಘದ ಆವರಣ, ಕೆ.ಆರ್. ರಸ್ತೆ.



ನಿರ್ಮಲಾನಂದನಾಥ ಸ್ವಾಮೀಜಿ

ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಆರ್. ಅಶೋಕ್, ವಿ. ಸುನೀಲ್ ಕುಮಾರ್, ಆಯೋಜನೆ: ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧ ಬ್ಯಾಂಕ್ವೆಟ್ ಸಭಾಂಗಣ, ಬೆಳಿಗ್ಗೆ 11

ಕೆಂಪೇಗೌಡ ಜಯಂತಿ: ಉದ್ಘಾಟನೆ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸನಾಯಕ, ಉಪಸ್ಥಿತಿ: ಎಂ.ಪ್ರಕಾಶಮೂರ್ತಿ, ಕೆ.ಧನಪಾಲ್, ಆಯೋಜನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸರ್ಕಾರಿ ಕಲಾ ಕಾಲೇಜು, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಸರ್.ಎಂ. ವಿಶ್ವೇಶ್ವರಯ್ಯ ಸೆಂಟ್ರಲ್ ಕಾಲೇಜು ಮೆಟ್ರೋ ನಿಲ್ದಾಣ, ಅಂಬೇಡ್ಕರ್ ಬೀದಿ, ಬೆಳಿಗ್ಗೆ: 11.

59ನೇ ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆ: ಉದ್ಘಾಟನೆ : ಬೇಲೂರು ರಘುನಂದನ್, ಅಧ್ಯಕ್ಷತೆ: ಎ.ಎಚ್. ರಾಮರಾವ್, ಮುಖ್ಯ ಅತಿಥಿಗಳು: ಪ್ರೊ.ಎಸ್.ಎನ್. ನಾಗರಾಜ ರೆಡ್ಡಿ, ಪಿ.ಸದಾನಂದ ಮಯ್ಯ, ಆಯೋಜನೆ: ನ್ಯಾಷನಲ್ ಕಾಲೇಜು, ಬಸವನಗುಡಿ, ಸ್ಥಳ: ಗಾಂಧಿ ನೆಹರೂ ರಂಗಮಂದಿರ, ಮಧ್ಯಾಹ್ನ: 3.45

ವಿಶ್ವ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ದಿನಾಚರಣೆ: ಉದ್ಘಾಟನೆ: ಗುಂಜನ್ ಕೃಷ್ಣ, ಸತ್ಯಭಾಮಾ.ಸಿ, ಉಪಸ್ಥಿತಿ: ಐ.ಎಸ್. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 4

ಸಣ್ಣ ಮತ್ತು ಮಧ್ಯಮ ಕೈಗಾರಿಕಾ ದಿನಾಚರಣೆ: ಅತಿಥಿಗಳು: ಮುರಗೇಶ ನಿರಾಣಿ, ಶ್ರೀನಿವಾಸ.ಟಿ, ಮುರಳಿಕೃಷ್ಣ.ಬಿ., ಆಯೋಜನೆ: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ದಕ್ಷಿಣ ಭಾರತದ ಪ್ರಾಂತೀಯ ಮಂಡಳಿ, ಪೀಣ್ಯಾ ಕೈಗಾರಿಕಾ ಒಕ್ಕೂಟ, ಸ್ಥಳ: ಪೀಣ್ಯಾ ಮೊದಲನೇ ಹಂತ, ಕೈಗಾರಿಕಾ ಪ್ರದೇಶ, ಸಂಜೆ: 5

ಕೃಷಿ ಹೊಂಡದಲ್ಲಿ ಮುಳುಗಿ ಬೆಂಗಳೂರಿನ ಸ್ನೇಹಿತರಿಬ್ಬರು ಸಾವು

ಚನ್ನಪಟ್ಟಣ: ಭಾನುವಾರದ ರಜೆ ಕಳೆಯಲು ಬೆಂಗಳೂರಿನಿಂದ ತಾಲ್ಲೂಕಿನ ತೌಟನಹಳ್ಳಿಗೆ ಬಂದಿದ್ದ ಸ್ನೇಹಿತರಿಬ್ಬರು ಕೃಷಿ ಹೊಂಡದಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಬೆಂಗಳೂರಿನ ಎಚ್.ಎಸ್.ಆರ್. ಲೇಔಟ್ ನಿವಾಸಿ ಶ್ರುತಿಪ್ ಕುಮಾರ್ (30) ಮತ್ತು ಹರೀಶ್ (22) ಮೃತಪಟ್ಟವರು. ಶ್ರುತಿಪ್ ಕುಮಾರ್ ತಮ್ಮ ನಾಲ್ವರು ಸ್ನೇಹಿತರೊಂದಿಗೆ ತೌಟನಹಳ್ಳಿಯ ಚಿಕ್ಕಪ್ಪನ ಮನೆಗೆ ಬಂದಿದ್ದರು. ಮಧ್ಯಾಹ್ನ ಊಟದ ನಂತರ ಸ್ನೇಹಿತರೊಂದಿಗೆ ಗ್ರಾಮದ ಹೊರವಲಯದಲ್ಲಿ ಚಿಕ್ಕಪ್ಪನ ತೋಟದಲ್ಲಿದ್ದ ಕೃಷಿ ಹೊಂಡಕ್ಕೆ ಈಜಲು ತೆರಳಿದಾಗ ಈ ದುರಂತ ನಡೆದಿದೆ.

ಕೃಷಿಹೊಂಡದ ಆಳ ಅಗಲ ಅರಿಯದ ಐವರು ಮೇಲಿನಿಂದ ನೀರಿಗೆ ಧುಮಕಿದ್ದರು. ಶ್ರುತಿಪ್ ಹಾಗೂ ಹರೀಶ್ ಮೇಲೆ ಬರಲು ಸಾಧ್ಯವಾಗದೇ ನೀರಿನಲ್ಲಿ ಮುಳಗಿದ್ದಾರೆ. ಮೂವರು ಈಜಿ ಹೊರಬಂದಿದ್ದಾರೆ. ಇಬ್ಬರನ್ನು ಕಾಪಾಡಲು ಯತ್ನಿಸಿದರೂ ಸಾಧ್ಯವಾಗಿಲ್ಲ. ಹರೀಶ್ ಸ್ಥಳದಲ್ಲೇ ಮೃತಪಟ್ಟರೆ, ಶ್ರುತಿಪ್ ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕವಸ್ತು ಸೇವನೆ ಹಾಗೂ ಸಾಗಣೆ ವಿರೋಧಿ ದಿನಾಚರಣೆ

₹ 67.40 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಲಾಗಿದ್ದ ₹ 67.40 ಕೋಟಿ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ಪೊಲೀಸರು ಭಾನುವಾರ ನಾಶಪಡಿಸಿದರು.

ಅಂತರರಾಷ್ಟ್ರೀಯ ಮಾದಕವಸ್ತು ಸೇವನೆ ಹಾಗೂ ಸಾಗಣೆ ವಿರೋಧಿ ದಿನದ ಅಂಗವಾಗಿ ರಾಜ್ಯದ ಕಮಿಷನರೇಟ್ ಹಾಗೂ ಆಯಾ ಜಿಲ್ಲೆಗಳಲ್ಲಿ ಪೊಲೀಸರು ಜಾಗೃತಿ ಕಾರ್ಯಕ್ರಮ ಆಯೋಜಿಸಿದ್ದರು. ಡ್ರಗ್ಸ್ ಪ್ರದರ್ಶನಕ್ಕೆ ಇರಿಸಿ, ನಂತರ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಕೊಂಡೊಯ್ದು ಕಾನೂನುಬದ್ಧವಾಗಿ ಸುಟ್ಟು ಹಾಕಿದರು.

ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ರಾಜ್ಯದಾದ್ಯಂತ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, 12 ತಿಂಗಳ ಅವಧಿಯಲ್ಲಿ (2021ರ ಮೇ ತಿಂಗಳಿನಿಂದ 2022ರ ಮೇ) 14,776 ಪ್ರಕರಣ ದಾಖಲಿಸಿಕೊಂಡಿದ್ದರು.



ಬೆಂಗಳೂರು ಪೊಲೀಸರು ಭಾನುವಾರ ಪ್ರದರ್ಶನಕ್ಕೆ ಇರಿಸಿದ್ದ ಮಾದಕ ವಸ್ತು ಪೊಟ್ಟಣಗಳನ್ನು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ವೀಕ್ಷಿಸಿದರು. ಹೆಚ್ಚುವರಿ ಪೊಲೀಸ್ ಕಮಿಷನರ್ ಎ. ಸುಬ್ರಹ್ಮಣ್ಯೇಶ್ವರ ರಾವ್, ಸಿಸಿಬಿ ಜಂಟಿ ಕಮಿಷನರ್ ರಮಣ್ ಗುಪ್ತ, ಡಿಸಿಪಿ ಎಸ್‌.ಡಿ. ಶರಣಪ್ಪ ಇದ್ದರು

15,861 ಆರೋಪಿಗಳನ್ನು ಬಂಧಿಸಿ, ₹ 67.40 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು.

ಸಮಾಜಕ್ಕೆ ಮಾರಕವಾದ ಡ್ರಗ್ಸ್ ನಾಶಪಡಿಸಲು ಅನುಮತಿ ಕೋರಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಮಾನ್ಯ ಮಾಡಿದ್ದ ನ್ಯಾಯಾಲಯ, ಡ್ರಗ್ಸ್ ನಾಶಪಡಿಸಲು ಒಪ್ಪಿಗೆ ನೀಡಿತ್ತು. ಹೀಗಾಗಿ, ಅಂತರರಾಷ್ಟ್ರೀಯ ಮಾದಕವಸ್ತು ಸೇವನೆ ಹಾಗೂ ಸಾಗಣೆ ವಿರೋಧಿ ದಿನದಂತೆ ರಾಜ್ಯವ್ಯಾಪಿ ಡ್ರಗ್ಸ್ ನಾಶ ಮಾಡಲಾಗಿದೆ.

‘ಹೊರ ರಾಜ್ಯ ಹಾಗೂ ವಿದೇಶದಿಂದ ಡ್ರಗ್ಸ್ ತಂದು ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದ ಜಾಲಗಳು ಹೆಚ್ಚಿವೆ. ಇದರ ವಿರುದ್ಧ ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಲಾಗಿದ್ದ ಡ್ರಗ್ಸ್ ನಾಶಪಡಿಸಲಾಗಿದೆ. ಇದರ ಜೊತೆಯಲ್ಲೇ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರಿನಲ್ಲಿ ₹ 41.80 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ರಾಜಧಾನಿ ಬೆಂಗಳೂರಿನಲ್ಲೂ ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸಿರುವ ಪೊಲೀಸರು, 12 ತಿಂಗಳ ಅವಧಿಯಲ್ಲಿ ₹ 41.80 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಇದನ್ನೆಲ್ಲ, ದಾಬಸ್‌ಪೇಟೆ ಬಳಿಯ ರಾಮ್ಕಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಭಾನುವಾರ ನಾಶಪಡಿಸಿದರು.

‘ದೆಹಲಿ, ಪಂಜಾಬ್, ಕೇರಳ, ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶದಿಂದ ನಗರಕ್ಕೆ ಡ್ರಗ್ಸ್ ತಂದು ಮಾರಲಾಗುತ್ತಿದೆ. ಇಂಥ ಜಾಲಗಳನ್ನು ಭೇದಿಸಿ ಗಾಂಜಾ, ಅಫೀಮು, ಎಂಡಿಎಂಎ, ಎಕ್ಸ್‌ಟೆಸಿ, ಎಲ್‌ಎಸ್‌ಡಿ ಕಾಗದ ಚೂರು ಸೇರಿದಂತೆ ವಿವಿಧ ಪ್ರಕಾರದ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಬೆಂಗಳೂರು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

‘ಡಾರ್ಕ್‌ನೆಟ್ ಮೂಲಕ ಅಂತರರಾಷ್ಟ್ರೀಯ ಪೆಡ್ಲರ್‌ಗಳನ್ನು ಸಂಪರ್ಕಿಸಿ ಕ್ರಿಪ್ಟೊ ಕರೆನ್ಸಿ ಪಾವತಿಸಿ ಡ್ರಗ್ಸ್ ಖರೀದಿಸುತ್ತಿದ್ದಾರೆ. ಹಲವೆಡೆ ಪಾರ್ಟಿಗಳಲ್ಲಿ ಡ್ರಗ್ಸ್ ಪೂರೈಕೆಯಾಗುತ್ತಿದೆ. ಇದರ ವಿರುದ್ಧ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ’ ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಇ– ಆಡಳಿತ ಕಚೇರಿಯಲ್ಲಿದ್ದ ಕಂಪ್ಯೂಟರ್ ಕಳ್ಳತನ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಇ-ಆಡಳಿತ ವಿಭಾಗದ ಕಚೇರಿಯಲ್ಲಿದ್ದ ಕಂಪ್ಯೂಟರ್ ಕಳ್ಳತನವಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿಭಾಗದ ಅಧಿಕಾರಿ ಸುಶೀಲಾ ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿ.ವಿ. ಟವರ್‌ನ ಮೂರನೇ ಮಹಡಿಯಲ್ಲಿ ಇ-ಆಡಳಿತ ಕಚೇರಿ ಇದೆ. ಜೂನ್ 13ರಂದು ಸಂಜೆ ಕೆಲಸ ಮುಗಿಸಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಚೇರಿಗೆ ಬೀಗ ಹಾಕಿ ಮನೆಗೆ ಹೋಗಿದ್ದರು. ಮರುದಿನ ಬೆಳಿಗ್ಗೆ 10.30ರ ಸುಮಾರಿಗೆ ಕಚೇರಿಗೆ ಬಂದು ನೋಡಿದಾಗ, ಸಿಪಿಯು ಹಾಗೂ ಎರಡು ಮಾನಿಟರ್‌ಗಳು ಸ್ಥಳದಲ್ಲಿ ಇರಲಿಲ್ಲ.’

‘ಕಚೇರಿ ಉಪಯೋಗಕ್ಕೆಂದು ಇರಿಸಿದ್ದ ಕಂಪ್ಯೂಟರ್‌ಗಳನ್ನು ಯಾರೋ ಅಪರಿಚಿತರು ಕದ್ದಿರುವುದಾಗಿ ದೂರುದಾರರು ಆರೋಪಿಸಿದ್ದಾರೆ. ಕಚೇರಿ ಬಗ್ಗೆ ಗೊತ್ತಿದ್ದವರೇ ಕೃತ್ಯ ಎಸಗಿರುವ ಅನುಮಾನವಿದ್ದು, ಹಲವರನ್ನು ವಿಚಾರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿವೆ.

ದುಶ್ಚಟಕ್ಕೆ ಹಣ ಹೊಂದಿಸಲು ಕಳವು



ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕೀರ್ತಿ, ಸಂಜಯ್ ಹಾಗೂ ದರ್ಶನ್ ಬಂಧಿತರು. ಇವರಿಂದ ₹ 4 ಲಕ್ಷ ಮೌಲ್ಯದ 10 ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಮೂವರೂ ಆರೋಪಿಗಳು ಸ್ನೇಹಿತರು. ದುಶ್ಚಟಗಳಿಗೆ ಹಣ ಹೊಂದಿಸಲು ಕಳ್ಳತನಕ್ಕೆ ಇಳಿದಿದ್ದರು. ನಗರದಲ್ಲಿ ಸಂಚರಿಸುತ್ತಿದ್ದ ಇವರು, ಲಾಕ್ ಮುರಿದು ದ್ವಿಚಕ್ರ ವಾಹನ ಕದಿಯುತ್ತಿದ್ದರು. ಅವುಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು’ ಎಂದು ತಿಳಿಸಿದರು.

‘ಕೆಂಗೇರಿ, ರಾಜಗೋಪಾಲನಗರ ಸೇರಿ ವಿವಿಧ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದರು.

ಹೆಚ್ಚುವರಿ ಸುಂಕ ಇಳಿಕೆಗೆ ಆಗ್ರಹ

ಬೆಂಗಳೂರು: ಪ್ರೀಮಿಯಂ ಮದ್ಯ ಉತ್ಪನ್ನಗಳ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ರದ್ದು ಮಾಡುವಂತೆ ಇಂಟರ್‌ನ್ಯಾಷನಲ್ ಸ್ಪಿರಿಟ್ಸ್ ಹಾಗೂ ವೈನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಐಎಸ್‌ಡಬ್ಲ್ಯುಎಐ, ಪ್ರೀಮಿಯಂ ಆಲ್ಕೋಬೆವ್ ಉದ್ಯಮದ ಉನ್ನತ ಸಂಸ್ಥೆ. ದುಬಾರಿ ಅಬಕಾರಿ ಸುಂಕ ವಿಧಿಸುವುದರಿಂದ ಪ್ರೀಮಿಯಂ ದರ್ಜೆಯ ಉತ್ಪನ್ನಗಳ ಮಾರಾಟಕ್ಕೆ ಹಿನ್ನಡೆ ಆಗಿದೆ. ಸರ್ಕಾರದ ಆದಾಯ ಕುಂಠಿತಗೊಳ್ಳಲಿದೆ ಎಂದು ಸಂಸ್ಥೆ ತಿಳಿಸಿದೆ.

ಹೆಚ್ಚು ಪ್ರೀಮಿಯಂ ಮದ್ಯ ಸೇವನೆಯಲ್ಲಿ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕ ಸಹ ಒಂದು. ಪ್ರಸ್ತುತ ರಾಜ್ಯದಲ್ಲಿ ಇರುವ ತೆರಿಗೆ ವ್ಯವಸ್ಥೆಯಿಂದ ಅಗ್ಗದ ಬ್ರ್ಯಾಂಡ್‌ಗಳು ಹೆಚ್ಚು ಅಗ್ಗವಾಗಿದ್ದು, ಪ್ರೀಮಿಯಂ ದರ್ಜೆಯ ಮದ್ಯ ದುಬಾರಿಯಾಗಿದೆ. ಇದೀಗ ಹೆಚ್ಚುವರಿ ಅಬಕಾರಿ ಸುಂಕ ವಿಧಿಸುವುದರಿಂದ ಈ ಪ್ರೀಮಿಯಂ ದರ್ಜೆಯ ಮದ್ಯದ ಬೆಲೆ ಮತ್ತಷ್ಟು ಹೆಚ್ಚಳವಾಗಲಿದೆ. ಇದರಿಂದ ರಾಜ್ಯದಲ್ಲಿ ಪ್ರೀಮಿಯಂ ದರ್ಜೆಯ ಮದ್ಯದ ಸೇವನೆ ಪ್ರಮಾಣ ಕುಸಿದು ಸರ್ಕಾರದ ಬೊಕ್ಕಸಕ್ಕೆ ಆದಾಯದ ಕೊರತೆ ಉಂಟಾಗಲಿದೆ ಎಂದು ಅಸೋಸಿಯೇಷನ್ ತಿಳಿಸಿದೆ. ಕಡಿಮೆ ಪ್ರೀಮಿಯಂ ದರ್ಜೆಯ ಮದ್ಯ ಸೇವನೆ ಮಾಡುವ ರಾಜ್ಯಗಳ ಆದಾಯ ಕರ್ನಾಟಕಕ್ಕಿಂತ ಹೆಚ್ಚಾಗಿದೆ ಎಂದು ಐಎಸ್‌ಡಬ್ಲ್ಯುಎಐ ತಿಳಿಸಿದೆ.

‘ರಾಜ್ಯದಲ್ಲಿ 4-5 ವರ್ಷಗಳಿಂದ ಪ್ರೀಮಿಯಂ ದರ್ಜೆಯ ಮದ್ಯದ ಉತ್ಪನ್ನಗಳ ಸೇವನೆಯಲ್ಲಿ ಗಣನೀಯ ಇಳಿಕೆ ಕಂಡುಬರುತ್ತಿದೆ. ಕರ್ನಾಟಕದಲ್ಲಿ ಅತ್ಯಧಿಕ ತೆರಿಗೆ ದರವಿದೆ. ಐಎಸ್‌ಡಬ್ಲ್ಯುಎಐ ಅಬಕಾರಿ ಇಲಾಖೆ ಅಧಿಕಾರಿಗಳೊಂದಿಗೆ ನಿರಂತರವಾಗಿ ಚರ್ಚೆ ನಡೆಸುತ್ತಿದೆ. ಪ್ರೀಮಿಯಂ ದರ್ಜೆಯ ಮದ್ಯ ಮಾರಾಟಕ್ಕೆ ಅನುಕೂಲಕರ ಕ್ರಮಗಳ ಆಯ್ಕೆಗಳ ಬಗ್ಗೆ ಚರ್ಚಿಸುತ್ತಿದೆ’ ಎಂದು ಸಿಇಒ ನೀತಾ ಕಪೂರ್ ತಿಳಿಸಿದ್ದಾರೆ. ಐಎಸ್‌ಡಬ್ಲ್ಯುಎಐ ಪ್ರಧಾನ ಕಾರ್ಯದರ್ಶಿ ಸುರೇಶ್ ಮೆನನ್ ಮಾತನಾಡಿ, ‘ರಾಜ್ಯದಲ್ಲಿ ನಮ್ಮ ಸದಸ್ಯರು ಅತ್ಯಧಿಕ ತೆರಿಗೆ ನೀಡುತ್ತಿದ್ದಾರೆ. ಇದೇ ಉತ್ಪನ್ನಗಳಿಗೆ ಮಹಾರಾಷ್ಟ್ರ, ದೆಹಲಿ, ಪಶ್ಚಿಮ ಬಂಗಾಳ, ಒಡಿಶಾ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಎಂಆರ್‌ಪಿ ದರ ಅತ್ಯಂತ ಕಡಿಮೆಯಿದೆ’ ಎಂದು ತಿಳಿಸಿದ್ದಾರೆ.

ಬೋಸ್ ಕಣ್ಮರೆಯಾದ ಇತಿಹಾಸ ಪುನರ್ ಪರಿಶೀಲನೆಯಾಗಲಿ: ಅನುಜ್ ಧರ್

‘ಗುಮ್ನಾಮಿ ಬಾಬಾರೇ ನೇತಾಜಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನೇಕ ರಾಜಕೀಯ ಕಾರಣಗಳಿಂದ ಸುಭಾಷ್ ಚಂದ್ರ ಬೋಸ್‌ರ ಜೀವನ ನಿಗೂಢವಾಗಿದೆ. ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂಬ ಸಾರ್ವಜನಿಕ ನಂಬಿಕೆ ಸತ್ಯವಲ್ಲ ಎಂದು ಸಂಶೋಧಕರಾದ ಅನುಜ್ ಧರ್ ಮತ್ತು ಚಂದ್ರಚೂಡ್ ಘೋಷ್ ಅಭಿಪ್ರಾಯ ವ್ಯಕ್ತಪಡಿಸಿದರು.

‘ಮಿಥಿಕ್ ಸೊಸೈಟಿಯಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್‌ರ 125ನೇ ಜನ್ಮ ದಿನಾಚರಣೆ ಅಂಗವಾಗಿ ಭಾನುವಾರ ನಡೆದ ‘ನೇತಾಜಿ ಸುಭಾಷ್‌ಚಂದ್ರ ಬೋಸ್–ಹೊಸ ಶೋಧದ ಅಂಶಗಳು’ ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೇತಾಜಿ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಅವರು 1945ರ ಆಗಸ್ಟ್ 18ರಂದು ತೈವಾನ್‌ನಲ್ಲಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದ್ದರು ಎನ್ನುವುದು ಕಟ್ಟು ಕಥೆ. ಸ್ವಾತಂತ್ರ್ಯಾ ನಂತರ 1985ರ ವರೆಗೂ ಗುಮ್ನಾಮಿ ಬಾಬಾ ಹೆಸರಿನಲ್ಲಿ ವೇಷ ಮರೆಸಿಕೊಂಡು ಅಯೋಧ್ಯದಲ್ಲಿ ಜೀವಿಸಿದ್ದರು ಎಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ’ ಎಂದು ಮಾಹಿತಿ ನೀಡಿದರು.



ನಗರದ ದಿ ಮಿಥಿಕ್ ಸೊಸೈಟಿಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್–ಹೊಸ ಶೋಧದ ಅಂಶಗಳ ವಿಚಾರ ಸಂಕಿರಣದಲ್ಲಿ (ಎಡದಿಂದ) ಅನುಜ್ ಧರ್, ದಿ ಮಿಥಿಕ್ ಸೊಸೈಟಿ ಅಧ್ಯಕ್ಷ ಪ್ರೊ. ಕೃ.ನರಹರಿ, ಲೇಖಕ ಚಂದ್ರಚೂಡ್ ಘೋಷ್, ಇತಿಹಾಸಕಾರ ಡಾ.ಜಿ. ಬಿ.ಹರೀಶ್ ಇದ್ದರು —ಪ್ರಜಾವಾಣಿ ಚಿತ್ರ

‘ನೇತಾಜಿಯವರ ಜೀವನ ಮತ್ತು ಅವರು ಸ್ಥಾಪಿಸಿದ್ದ ಭಾರತೀಯ ರಾಷ್ಟ್ರೀಯ ಸೇನೆಗೆ ಸಂಬಂಧಿಸಿ 70,000ಕ್ಕೂ ಅಧಿಕ ಪುಟಗಳು ಸರ್ಕಾರ ವಿವಿಧ ವಿಭಾಗಗಳಲ್ಲಿ ವಿಮೋಚನೆಗಾಗಿ ಕಾಯುತ್ತಿವೆ. ಈ ದಾಖಲೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿದರೆ ನೇತಾಜಿಯವರಿಗೆ ಸಂಬಂಧಿಸಿದ ಅನೇಕ ವಿಷಯಗಳ ಸಂಶೋಧನೆಗೆ ಅನುಕೂಲವಾಗಲಿದೆ ಎಂದರು’.

‘ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿಯವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅಂತಹ ಮಹನೀಯರ ಸಾವಿನ ಕುರಿತು ತನಿಖೆ ಕೈಗೊಳ್ಳದೇ ಮುಚ್ಚಿಹಾಕಿದ್ದಾರೆ. ಅವರ ಡಿಎನ್‌ಎಯನ್ನು ವಿಧಿ ವಿಜ್ಞಾನ ಪರೀಕ್ಷೆಗೊಳಪಡಿಸದಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ’ ಎಂದು ಆರೋಪಿಸಿದರು.

ಡಾ.ಜಿ.ಬಿ. ಹರೀಶ್ ಮಾತನಾಡಿದರು. ಮಿಥಿಕ್ ಸೊಸೈಟಿ ಅಧ್ಯಕ್ಷ ಪ್ರೊ.ಕೃ.ನರಹರಿ, ವಿ.ನಾಗರಾಜ್, ಎಸ್.ರವಿ, ಎಂ.ಆರ್.ಪ್ರಸನ್ನಕುಮಾರ್ ಇದ್ದರು.

ದಾವೂದ್‌ನೊಂದಿಗೆ ನಂಟಿದ್ದವರಿಗೆ ಬೆಂಬಲ ನೀಡಿದ್ದಕ್ಕೆ ಬಂಡಾಯ: ಶಿಂಧೆ

ಮುಂಬೈ (ಪಿಟಿಐ): ಶಿವಸೇನಾ ನಾಯಕತ್ವದ ವಿರುದ್ಧ ಮತ್ತೆ ವಾಗ್ದಾಳಿ ನಡೆಸಿರುವ ಬಂಡಾಯ ಶಾಸಕರ ಮುಖಂಡ ಏಕನಾಥ ಶಿಂಧೆ, ಭೂಗತ ಪಾತಕಿ ದಾವೂದ್ ಇಬ್ರಾಹಿಂ ಜತೆ ಸಂಪರ್ಕ ಹೊಂದಿದವರಿಗೆ ಪಕ್ಷ ಬೆಂಬಲಿಸಿದ್ದನ್ನು ವಿರೋಧಿಸಿ ಬಂಡಾಯ ಎದ್ದಿರುವುದಾಗಿ ಭಾನುವಾರ ಹೇಳಿದ್ದಾರೆ.

‘ಬಾಳಾಸಾಹೇಬ್ ಠಾಕ್ರೆ ಅವರು ಸ್ಥಾಪಿಸಿರುವ ಶಿವಸೇನಾ ಪಕ್ಷವನ್ನು ಉಳಿಸಬೇಕಿದೆ. ಈ ಪ್ರಯತ್ನದಲ್ಲಿ ನನ್ನ ಪ್ರಾಣ ಹೋದರೂ ಚಿಂತೆ ಇಲ್ಲ’ ಎಂದು ಹೇಳಿದ್ದಾರೆ.

ಪರೋಕ್ಷವಾಗಿ ಎನ್‌ಸಿಪಿ ನಾಯಕ, ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸದ್ಯ ಜೈಲಿನಲ್ಲಿರುವ ನವಾಬ್ ಮಲಿಕ್ ಉದ್ದೇಶಿಸಿ ಅವರು ಈ ಟ್ವೀಟ್ ಮಾಡಿದ್ದಾರೆ. ಹಣ ಅಕ್ರಮ ವರ್ಗಾವಣೆಯಲ್ಲಿ ದಾವೂದ್ ಇಬ್ರಾಹಿಂ ಸಂಬಂಧಿಕರು ಶಾಮೀಲಾಗಿದ್ದಾರೆ ಎಂಬ ಆರೋಪಗಳಿವೆ.

ಕಬ್ಬನ್ ಪಾರ್ಕ್‌ನಲ್ಲಿ ಸಾಕುನಾಯಿ ಪ್ರವೇಶ ನಿಷೇಧಿಸಲು ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್‌ನಲ್ಲಿ ಸಾಕುನಾಯಿಗಳ ಪ್ರವೇಶ ನಿಷೇಧಿಸುವ ಬಗ್ಗೆ ಪ್ರಸ್ತಾವ ಸಲ್ಲಿಸಲಾಗಿದೆ.

ನಾಯಿಗಳು ಪದೇ ಪದೇ ತೊಂದರೆ ನೀಡುತ್ತಿರುವ ಬಗ್ಗೆ ವಾಯುವಿಹಾರಿಗಳಿಂದ ದೂರುಗಳು ಸಲ್ಲಿಕೆಯಾಗಿರುವುದರಿಂದ ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರನ್ನೊಳಗೊಂಡ ಉನ್ನತ ಮಟ್ಟದ ಸಮಿತಿಗೆ ಈ ಪ್ರಸ್ತಾವ ಸಲ್ಲಿಸಲಾಗಿದೆ.

ಉದ್ಯಾನಗಳು ಮತ್ತು ಸಾರ್ವಜನಿಕ ಸ್ಥಳಗಳ ನಿಯಮಾವಳಿಗಳ ಅನ್ವಯ ನಿಷೇಧ ಹೇರುವ ಕುರಿತು ಉನ್ನತ ಮಟ್ಟದ ಸಮಿತಿಯು ಮುಂದಿನ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಉನ್ನತ ಮಟ್ಟದ ಸಮಿತಿಯ ಹಿಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿದ್ದರೂ ನಿರ್ಧಾರ ಕೈಗೊಂಡಿರಲಿಲ್ಲ.

‘ಸಾಕುನಾಯಿಗಳಿಗೆ ಕಡ್ಡಾಯವಾಗಿ ಸರಪಳಿ ಹಾಕಬೇಕು ಮತ್ತು ಅವುಗಳ ತ್ಯಾಜ್ಯವನ್ನು ಮಾಲೀಕರೇ ಸ್ವಚ್ಛಗೊಳಿಸಬೇಕು. ಉದ್ಯಾನದ ಹುಲ್ಲು ಹಾಸಿನ ಮೇಲೆ ಸಾಕುನಾಯಿಗಳ ಓಡಾಟ ನಿರ್ಬಂಧಿಸಲಾಗಿದೆ’ ಎನ್ನುವ ಸೂಚನಾ ಫಲಕಗಳನ್ನು ಉದ್ಯಾನದಲ್ಲಿ ಅಳವಡಿಸಲಾಗಿದೆ.



ಸಾಂದರ್ಭಿಕ ಚಿತ್ರ

‘ನಿಯಮಗಳನ್ನು ಯಾರೂ ಪಾಲಿಸುತ್ತಿಲ್ಲ. ನಾಯಿಗಳಿಂದ ತೊಂದರೆ ಅನುಭವಿಸಿದ್ದೇವೆ. ಹೀಗಾಗಿ, ಲಾಲ್ ಬಾಗ್ ರೀತಿಯಲ್ಲಿ ಇಲ್ಲಿಯೂ ಸಾಕು ನಾಯಿಗಳಿಗೆ ನಿಷೇಧ ವಿಧಿಸಬೇಕು’ ಎಂದು ವಾಯುವಿಹಾರಿಗಳು ಒತ್ತಾಯಿಸಿದ್ದಾರೆ.

‘ನಿಯಮಾವಳಿಗಳನ್ನು ಪಾಲಿಸುವಂತೆ ಸಾರ್ವಜನಿಕರಿಗೆ ತಿಳಿವಳಿಕೆ ನೀಡಲಾಗಿದೆ. ಆದರೆ, ಕೆಲವರು ಮಾತ್ರ ಪಾಲಿಸುತ್ತಾರೆ. ಸ್ವಚ್ಛತೆ ಕಾಪಾಡುತ್ತಿಲ್ಲ. ನಾಯಿಗಳಿಗೆ ಬೆಲ್ಟ್ ಹಾಕುತ್ತಿಲ್ಲ ಮತ್ತು ಎಲ್ಲೆಂದರಲ್ಲಿ ಗಲೀಜು ಮಾಡಿ ಪರಿಸರವನ್ನು ಹಾಳು ಮಾಡಲಾಗುತ್ತಿದೆ. ನಾಯಿಗಳಿಂದ ತೊಂದರೆಗೊಳಗಾದ 70ಕ್ಕೂ ಹೆಚ್ಚು ಮಂದಿ ದೂರು ನೀಡಿದ್ದಾರೆ. ಹೀಗಾಗಿಯೇ ಉದ್ಯಾನದಲ್ಲಿ ನಾಯಿಗಳ ಪ್ರವೇಶವನ್ನು ನಿಷೇಧಿಸುವ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ತೋಟಗಾರಿಕೆ ಇಲಾಖೆಯ (ಕಬ್ಬನ್ ಉದ್ಯಾನ) ಉಪನಿರ್ದೇಶಕ ಎಚ್‌.ಟಿ. ಬಾಲಕೃಷ್ಣ ತಿಳಿಸಿದ್ದಾರೆ.

ನಿಷೇಧದ ಪ್ರಸ್ತಾವಕ್ಕೆ ಪ್ರಾಣಿಪ್ರಿಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ‘ದಯವಿಟ್ಟು ನಾಯಿಗಳಿಗೆ ನಿಷೇಧ ಹೇರಬೇಡಿ’ ಎಂದು ಪ್ರಾಣಿಪ್ರಿಯರು ಸಾಮಾಜಿಕ ಜಾಲತಾಣಗಳ ಮೂಲಕ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಪಟ್ಟಣದ ವಿಜಯಪುರ ರಸ್ತೆಯಲ್ಲಿರುವ ಕನಕಶ್ರೀ ಪಿ.ಯು. ಕಾಲೇಜಿನ ಆವರಣದಲ್ಲಿರುವ ಕೃಷಿ ಹೊಂಡಕ್ಕೆ ಭಾನುವಾರ ವಿದ್ಯಾರ್ಥಿಯೊಬ್ಬ ಬಿದ್ದು ಮೃತಪಟ್ಟಿದ್ದಾನೆ.

ಹಾವೇರಿಯ ಹನುಮಂತು (17) ಮೃತ ಯುವಕ. 25 ದಿನಗಳ ಮುನ್ನ ಕಾಲೇಜಿಗೆ ದಾಖಲಾಗಿ, ಕಾಲೇಜು ಆವರಣದಲ್ಲಿದ್ದ ವಸತಿನಿಲಯದಲ್ಲಿ ತಂಗಿದ್ದ. ಆತ ಬಟ್ಟೆ ತೊಳೆಯಲು ಕೃಷಿ ಹೊಂಡಕ್ಕೆ ಹೋದ ಸಂದರ್ಭದಲ್ಲಿ ಘಟನೆ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಮೃತರ ಪಾರ್ಥಿವ ಶರೀರವನ್ನು ಪಟ್ಟಣದ ಆಕಾಶ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಕಾಲೇಜು ಆಡಳಿತ ಮಂಡಳಿಯಿಂದ ಪೋಷಕರಿಗೆ ಮಾಹಿತಿ ನೀಡಲಾಗಿದೆ. ದೇವನಹಳ್ಳಿ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ಘಟನಾ ಸ್ಥಳವು ಜಿ.ಕೆ. ಕೃಷ್ಣಪ್ಪ ಎಂಬುವವರಿಗೆ ಸೇರಿರುವ ಕೃಷಿ ಜಮೀನಾಗಿದ್ದು, ಆ ಜಾಗವನ್ನು ಉಮೇಶ್ ಎಂಬುವವರು ಗುತ್ತಿಗೆ ಪಡೆದು 5-6 ವರ್ಷಗಳಿಂದ ಕಾಲೇಜು ನಡೆಸುತ್ತಿದ್ದಾರೆ. ಕೃಷಿಭೂಮಿಯಲ್ಲಿ ಕಾಲೇಜು ನಿರ್ಮಾಣ ಮಾಡಿದ ಮೇಲೆ ಕೃಷಿ ಹೊಂಡ ಮುಚ್ಚದೆ, ಪ್ರತಿನಿತ್ಯ ನೀರು ತುಂಬಿಸಿ ಅದನ್ನು ಬಳಕೆ ಮಾಡಿಕೊಳ್ಳುತ್ತಿದ್ದರು. ಅದಕ್ಕೆ ತಂತಿಬೇಲಿಯಾಗಲಿ ಅಥವಾ ಯಾವುದೇ ತಡೆ ಗೋಡೆ ಇಲ್ಲದ ಕಾರಣ ಆಚಾತುರ್ಯ ನಡೆದಿರಬಹುದು ಎಂದು ಶಂಕಿಸಲಾಗಿದೆ.



ದೇವನಹಳ್ಳಿಯ ಕನಕಶ್ರೀ ಪಿ.ಯು. ಕಾಲೇಜಿನ ಆವರಣದಲ್ಲಿರುವ ಕೃಷಿ ಹೊಂಡ

> ಘಟನೆ ಗಮನಕ್ಕೆ ಬಂದಿದ್ದು, ಕಾಲೇಜಿಗೆ ಸಂಬಂಧಿಸಿದಂತೆ ಎಲ್ಲ ರೀತಿಯ ಪರಿಶೀಲನೆ ನಡೆಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು
> **ರಾಮಕೃಷ್ಣಯ್ಯ**, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂ. ಗ್ರಾಮಾಂತರ ಜಿಲ್ಲೆ

> ಕಾಲು ಜಾರಿ ಹೊಂಡಕ್ಕೆ ಬಿದ್ದ ವಿದ್ಯಾರ್ಥಿ ರಕ್ಷಣೆಗೆ ಸಹಪಾಠಿಗಳು ಮುಂದಾಗಿದ್ದರೂ ಸಾಧ್ಯವಾಗಿಲ್ಲ. ವಸತಿ ನಿಲಯದ ಮೇಲ್ವಿಚಾರಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು
> **ಉಮೇಶ್**, ಕನಕಶ್ರೀ ವಿದ್ಯಾಸಂಸ್ಥೆ

ತೆರೆದ ಸಂಪ್: ಕಾಲೇಜು ಕಟ್ಟಡದ ಪಕ್ಕದಲ್ಲಿಯೇ ಮತ್ತೊಂದು ಆಳವಾದ ಅಪಾಯಕಾರಿ ತೆರದ ಸಂಪ್ ಇದ್ದು, ಕಾಲೇಜು ಆಡಳಿತ ಮಂಡಳಿಯ ಬೇಜವಾಬ್ದಾರಿತನದಿಂದ ಮುಚ್ಚದೇ ಹಾಗೆಯೇ ಬಿಟ್ಟಿದ್ದಾರೆ. ತಕ್ಷಣವೇ ಅಪಾಯಕಾರಿ ಸಂಪ್‌ನ್ನು ಮುಚ್ಚಿ ಮತ್ತೊಂದು ಅನಾಹುತ ಆಗದಂತೆ ತಡೆಯಬೇಕಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ವಸತಿನಿಲಯಕ್ಕಿಲ್ಲ ಅನುಮತಿ: ಕಾಲೇಜು ಆವರಣದಲ್ಲಿರುವ ವಸತಿನಿಲಯಕ್ಕೆ ಯಾವುದೇ ರೀತಿಯ ಪರವಾನಗಿ ಅಥವಾ ಅನುಮತಿಯಲ್ಲ, ತಾತ್ಕಾಲಿಕವಾಗಿ ಮಾತ್ರವೇ ವಿದ್ಯಾರ್ಥಿಗಳು ಕಾಲೇಜಿನ ಕಟ್ಟಡದಲ್ಲಿ ತಂಗಿದ್ದರು. ಅವರ ಆರೈಕೆಗೆ ಪೂರ್ಣ ಪ್ರಮಾಣದ ವಾರ್ಡನ್ ಸಹ ಇರಲಿಲ್ಲ ಎಂಬ ಮಾಹಿತಿ ದೊರೆತಿದೆ. ಘಟನೆಯ ನಂತರವೂ ಸಹ ಉಳಿದ ವಿದ್ಯಾರ್ಥಿಗಳನ್ನು ಲಭ್ಯ ಸರ್ಕಾರಿ ವಸತಿ ನಿಲಯಕ್ಕೆ ಸ್ಥಳಾಂತರಿಸುವ ಗೋಜಿಗೆ ಯಾವ ಅಧಿಕಾರಿಯೂ ಮುಂದಾಗಿಲ್ಲ ಎಂದು ದೂರಲಾಗಿದೆ.



ನಗರದ ಕಬ್ಬನ್ ಪಾರ್ಕ್‌ನ ಬಾಲಭವನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಅಂಗವಿಕಲಸ್ನೇಹಿ ಉದ್ಯಾನದಲ್ಲಿ ಸೇರಿದ್ದ ಮಕ್ಕಳು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವ ಹಾಲಪ್ಪ ಆಚಾರ್, ಚಿಕ್ಕಮ್ಮ ಬಸವರಾಜ್ ಇದ್ದರು

ಅಂಗವಿಕಲ ಸ್ನೇಹಿ ಉದ್ಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಂಡ್‌ಟ್ರೀ ಮತ್ತು ಬಾಲಭವನ ಸೊಸೈಟಿ ವತಿಯಿಂದ ನಗರದ ಕಬ್ಬನ್ ಪಾರ್ಕ್‌ನ ಬಾಲಭವನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ರಾಜ್ಯದ ಮೊದಲ ಅಂಗವಿಕಲ ಸ್ನೇಹಿ ಉದ್ಯಾನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶನಿವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ರಾಜ್ಯಪಾಲರು, ‘ಬಾಲಭವನ ಮತ್ತು ಸ್ಮಾರ್ಟ್ ಸಿಟಿ ಸಹಯೋಗದಲ್ಲಿ ಮೈಂಡ್‌ಟ್ರೀ ಸಂಸ್ಥೆ ಅಂಗವಿಕಲರ ಅನುಕೂಲಕ್ಕೆ ಈ ಉದ್ಯಾನವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಅಂಗವಿಕಲ ಮಕ್ಕಳು ಆಟವಾಡಲು ಸಾಧ್ಯವಾಗಲಿದೆ. ಲಕ್ಷಾಂತರ ಮಕ್ಕಳು ಈ ಉದ್ಯಾನದ ಪ್ರಯೋಜನ ಪಡೆಯಲಿದ್ದಾರೆ’ ಎಂದು ಹೇಳಿದರು.

‘ಅಂಗವಿಕಲರ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅಂಗವಿಕಲರ ಕ್ರೀಡಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಅನೇಕ ಯೋಜನೆಗಳ ಮೂಲಕ ಅಂಗವಿಕಲ ಸಬಲೀಕರಣ ಮಾಡುತ್ತಿದೆ. ಈ ಸೌಲಭ್ಯಗಳು ಅವರಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು’ ಎಂದು ಕರೆ ನೀಡಿದರು.

‘ಅಂಗವಿಕಲರ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಖಾಸಗಿ ಸಂಸ್ಥೆಗಳ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಂಗವಾಗಿರುವ ಮೈಂಡ್‌ಟ್ರೀ ಫೌಂಡೇಶನ್, ಹಿಂದುಳಿದ ಮಕ್ಕಳ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಉತ್ತೇಜಿಸುವ ಗುರಿ ಹೊಂದಿದೆ. ಉದ್ಯೋಗ ಮತ್ತು ಉದ್ಯಮಶೀಲತೆಯ ಅವಕಾಶಗಳಿಗೆ ಅಗತ್ಯವಾದ ಕೌಶಲ ಒದಗಿಸುತ್ತಿರುವುದು ಶ್ಲಾಘನೀಯ’ ಎಂದರು.

‘ಕೇಂದ್ರ ಸರ್ಕಾರದ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯ ಎಡಿಐಪಿ ಯೋಜನೆಯಡಿ ಅಂಧರಿಗೆ ಸ್ಮಾರ್ಟ್ ಫೋನ್, ಡಿಜಿಪ್ಲೇಯರ್ ಮತ್ತು ವಾಕಿಂಗ್ ಸ್ಟಿಕ್ ಮತ್ತು ಸ್ಮಾರ್ಟ್ ಕೇನ್ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಶ್ರವಣದೋಷವುಳ್ಳ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ 6 ಲಕ್ಷದವರೆಗೆ ಶಸ್ತ್ರಚಿಕಿತ್ಸೆಗೆ ಅವಕಾಶವಿದೆ’ ಎಂದು ವಿವರಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವ ಹಾಲಪ್ಪ ಆಚಾರ್, ಬಾಲಭವನ ಸೊಸೈಟಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಎಂ.ಟಿ. ರೇಜು, ನಿರ್ದೇಶಕಿ ಪ್ರಿಯಾಂಕ ಮೇರಿ ಫ್ರಾನ್ಸಿಸ್, ಮೈಂಡ್ ಟ್ರೀ ಸಂಸ್ಥೆ ಸಿಇಒ ದೇಬಾಶಿಸ್ ಚಟರ್ಜಿ ಇದ್ದರು.

‘ಅಗ್ನಿಪಥ’ ಹಿಂಪಡೆಯಬೇಕು’

ಬೆಂಗಳೂರು: ‘ಯುವಜನತೆಯ ಕನಸುಗಳ ಜೊತೆ ಚೆಲ್ಲಾಟವಾಡುವ ಅಗ್ನಿಪಥ ಯೋಜನೆಯನ್ನು ಕೇಂದ್ರ ಸರ್ಕಾರ ತಕ್ಷಣ ಹಿಂಪಡೆಯಬೇಕು’ ಎಂದು ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಪಲ್ಲಂ ರಾಜು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿ, ‘ಯುವಕರ ಮಾತು ಕೇಳಲು ಪ್ರಧಾನಿ ತಯಾರಿಲ್ಲ. ಇದೇ ರೀತಿಯ ಸೊಕ್ಕಿನಿಂದ ಚಳವಳಿನಿರತ 700 ರೈತರನ್ನು ಕಳೆದುಕೊಳ್ಳಬೇಕಾಯಿತು. ದೇಶದ ಹಿತಾಸಕ್ತಿ, ಭದ್ರತೆ, ಭವಿಷ್ಯದ ದೃಷ್ಟಿಯಿಂದ ಇತಿಹಾಸ ಮರುಕಳಿಸಬಾರದು’ ಎಂದರು.

‘ಮೋದಿ ನೇತೃತ್ವದ ತುಘಲಕ್ ಸರ್ಕಾರ ಮೊದಲು ಏನಾದರೂ ಮಾಡುತ್ತದೆ. ನಂತರ ಚಿಂತಿಸುತ್ತದೆ. ಯುವಕರು, ಮಾಜಿ ಯೋಧರು, ರಕ್ಷಣಾ ತಜ್ಞರು ಸೇರಿ ಎಲ್ಲ ವಲಯದವರು ಅಗ್ನಿಪಥ ಯೋಜನೆಯನ್ನು ವಿರೋಧಿಸಿದ್ದಾರೆ. ಸೇವಾನಿರತ ಅಧಿಕಾರಿಗಳೂ ಖಾಸಗಿಯಾಗಿ ಆತಂಕ ವ್ಯಕ್ತಪಡಿಸಿದ್ದಾರೆ’ ಎಂದ ಅವರು, ‘ಸೇನೆಯ ಕಲ್ಯಾಣ ನಮ್ಮ ಕಾಳಜಿ’ ಎಂದರು.

ಸೋಷಿಯಲ್ ಬಾರ್ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಚರ್ಚ್‌ಸ್ಟ್ರೀಟ್‌ನಲ್ಲಿರುವ ಸೋಷಿಯಲ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರುತ್ತಿದ್ದ ಆರೋಪದಡಿ ವ್ಯವಸ್ಥಾಪಕ ಸೇರಿ ಮೂವರನ್ನು ವಶಕ್ಕೆ ಪಡೆದಿದ್ದಾರೆ.

‘ಸೋಷಿಯಲ್ ಬಾರ್‌ನಲ್ಲಿ ಹಲವು ದಿನಗಳಿಂದ ಅಪ್ರಾಪ್ತ ವಯಸ್ಸಿನವರಿಗೆ ಮದ್ಯ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಜೂನ್ 24ರಂದು ಸಂಜೆ ಬಾರ್ ಮೇಲೆ ದಾಳಿ ಮಾಡಿ ಪುರಾವೆ ಸಮೇತ ಅಕ್ರಮವನ್ನು ಪತ್ತೆ ಮಾಡಲಾಯಿತು. ವ್ಯವಸ್ಥಾಪಕ ಓಂ ಪ್ರಕಾಶ್, ಸಿಬ್ಬಂದಿ ಪ್ರಭಾಸ್ ಹಾಗೂ ರಾಕೇಶ್ ದೇವನಾಥ್ ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ವಶಕ್ಕೆ ಪಡೆದಿರುವ ಆರೋಪಿಗಳು ಹಾಗೂ ಮದ್ಯ ಮಾರಾಟಕ್ಕೆ ಪರವಾನಗಿ ಪಡೆದಿದ್ದ ಉಮೇಶ್ ಶೆಟ್ಟಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದೂ ತಿಳಿಸಿವೆ.

ಇಬ್ಬರು ಬಾಲಕರು ಪತ್ತೆ: ‘21 ವರ್ಷದೊಳಗಿನ ಬಾಲಕ–ಬಾಲಕಿಯರಿಗೆ ಮದ್ಯ ಸರಬರಾಜು ಮಾಡುವುದು ಅಬಕಾರಿ ಕಾಯ್ದೆ ಪ್ರಕಾರ ನಿಯಮ ಬಾಹಿರ. ಇದು ಗೊತ್ತಿದ್ದರೂ ಸೋಷಿಯಲ್ ಬಾರ್‌ನಲ್ಲಿ ಚಿಕ್ಕ ವಯಸ್ಸಿನವರಿಗೆ ಮದ್ಯ ಸರಬರಾಜು ಮಾಡಲಾಗುತ್ತಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ದಾಳಿ ವೇಳೆ ಗ್ರಾಹಕರ ವಯಸ್ಸಿನ ದಾಖಲೆಗಳನ್ನು ಪರಿಶೀಲಿಸಲಾಯಿತು. 19 ವರ್ಷದ ಬಾಲಕ ಹಾಗೂ ಬಾಲಕಿ ಪತ್ತೆಯಾದರು. ಆರೋಪಿಗಳು ಅವರಿಗೆ ಮದ್ಯ ಸರಬರಾಜು ಮಾಡಿದ್ದರು’ ಎಂದೂ ತಿಳಿಸಿವೆ.

ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ ಪೋಷಕರು


ಹಿಮಾಲಯ ಚಾರಣಕ್ಕೆ ಹೋಗಿದ್ದ ವೈದ್ಯ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಮಾಲಯ ಪರ್ವತದ ಚಾರಣಕ್ಕೆಂದು ಒಂಟಿಯಾಗಿ ನೇಪಾಳಕ್ಕೆ ಹೋಗಿದ್ದ ಮಣಿಪಾಲ್ ಆಸ್ಪತ್ರೆ ವೈದ್ಯ ಡಾ. ಎಸ್. ಚಂದ್ರಮೋಹನ್ (31) ಅನುಮಾನಾಸ್ಪದ ರೀತಿಯಲ್ಲಿ ನಾಪತ್ತೆಯಾಗಿದ್ದು, ಈ ಬಗ್ಗೆ ನಗರದ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಸಂತನಗರ ನಿವಾಸಿ ಚಂದ್ರಮೋಹನ್, ಸರ್ಜಾಪುರ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅವರು ನಾಪತ್ತೆಯಾದ ಬಗ್ಗೆ ತಂದೆ ಶಿವನಾಥ್ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹಿರಿಯ ಅಧಿಕಾರಿಗಳ ಮೂಲಕ ನೇಪಾಳ ಪೊಲೀಸರನ್ನು ಸಂಪರ್ಕಿಸಿ, ಮಾಹಿತಿ ರವಾನಿಸಲಾಗಿದೆ. ಸ್ಥಳೀಯ ಪೊಲೀಸರು ಚಂದ್ರಮೋಹನ್ ಅವರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಪೋಷಕರು ಹಾಗೂ ಸಹೋದರ ಸಹ ನೇಪಾಳಕ್ಕೆ ಹೋಗಿದ್ದಾರೆ. ಅಗತ್ಯವಿದ್ದರೆ ಬೆಂಗಳೂರಿನಿಂದ ಪೊಲೀಸರ ತಂಡ ಕಳುಹಿಸಲಾಗುವುದು’ ಎಂದು ತಿಳಿಸಿದರು.



ವೈದ್ಯ ಚಂದ್ರಮೋಹನ್ ಅವರು ಮೇ 20ರಂದು ಪೋಷಕರಿಗೆ ಕಳುಹಿಸಿದ್ದ ಫೋಟೊ

ಫೋಟೊ ಕಳುಹಿಸಿ ಮೊಬೈಲ್ ಸ್ವಿಚ್ ಆಫ್: ‘ಹಿಮಾಲಯ ಪರ್ವತಕ್ಕೆ ಹೋಗಲು ತೀರ್ಮಾನಿಸಿದ್ದ ಚಂದ್ರಮೋಹನ್, ಬೆಂಗಳೂರಿನಿಂದ ವಿಮಾನದಲ್ಲಿ ನೇಪಾಳದ ಕಠ್ಮಂಡುವಿಗೆ ಮೇ 3ರಂದು ಹೋಗಿದ್ದರು. ಈ ಬಗ್ಗೆ ಪೋಷಕರಿಗೂ ವಿಷಯ ತಿಳಿಸಿದ್ದರು’ ಎಂದು ಅಧಿಕಾರಿ ಹೇಳಿದರು.

‘ಕೆಲ ದಿನ ನೇಪಾಳದ ಹಲವು ಪ್ರೇಕ್ಷಣೀಯ ಸ್ಥಳಗಳಿಗೆ ವೈದ್ಯ ಭೇಟಿ ನೀಡಿದ್ದರು. ಹಿಮಾಲಯ ಪರ್ವತಕ್ಕೆ ಹೋಗಲೆಂದು ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿ ತಂಗಿದ್ದರು. ಮೇ 20ರಂದು ಬೆಳಿಗ್ಗೆ ವಾಟ್ಸ್‌ಆ್ಯಪ್ ಮೂಲಕ ಫೋಟೊ ಹಾಗೂ ಸಂದೇಶ ಕಳುಹಿಸಿದ್ದರು. ಅದಾದ ನಂತರ ಚಂದ್ರಮೋಹನ್ ಮೊಬೈಲ್ ಸ್ವಿಚ್ ಆಫ್ ಆಗಿದೆ. ಪೋಷಕರು ಎಷ್ಟೇ ಪ್ರಯತ್ನಿಸಿದರೂ ಸಂಪರ್ಕಿಸಲು ಸಾಧ್ಯವಾಗಿಲ್ಲ’ ಎಂದು ತಿಳಿಸಿದರು.

‘ಚಂದ್ರಮೋಹನ್ ಒಂಟಿಯಾಗಿ ನೇಪಾಳಕ್ಕೆ ಹೋಗಿದ್ದಾರೆ. ಅವರೊಬ್ಬರೇ ಹಿಮಾಲಯ ಪರ್ವತ ಏರಲು ತೆರಳಿರುವ ಸಾಧ್ಯತೆ ಇದೆ. ಅವರನ್ನು ಪತ್ತೆಹಚ್ಚುವುದು ಸವಾಲಾಗಿದೆ’ ಎಂದು ಹೇಳಿದರು.

‘ದೇವರ ಧ್ಯಾನ ಮಾಡುತ್ತಿದ್ದ ವೈದ್ಯ’

‘ವೈದ್ಯಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಚಂದ್ರಮೋಹನ್ ಹಲವು ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ. ಆಸ್ಪತ್ರೆಯಲ್ಲಿ ವಿಶ್ರಾಂತಿ ಸಿಕ್ಕಾಗ ಹಾಗೂ ಮನೆಯಲ್ಲಿ ಹಲವು ಬಾರಿ ದೇವರ ಧ್ಯಾನ ಮಾಡುತ್ತಿದ್ದರೆಂಬುದು ಗೊತ್ತಾಗಿದೆ. ದೇವರ ಮೇಲಿನ ಭಕ್ತಿಯಿಂದ ಅವರು ಹಿಮಾಲಯ ಪರ್ವತಕ್ಕೆ ಹೋಗಿರುವ ಅನುಮಾನವಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



‘ಡೆಕ್ಕನ್ ಹೆರಾಲ್ಡ್’ ಮತ್ತು ಎಬಿಸಿ ಇಂಡಿಯಾ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ ‘ವಿಶ್ವ ಮೋಟರ್ ಸೈಕಲ್ ದಿನ –2022’ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಇಂಡಿಯನ್ ಆಯಿಲ್ ಕಾರ್ಯನಿರ್ವಾಹಕ ನಿರ್ದೇಶಕ (ರಿಟೇಲ್ ಸೇಲ್ಸ್) ಗುರ್ ಪ್ರಸಾದ್, ಶಾಸಕ ರಿಜ್ವಾನ್ ಅರ್ಷದ್ ಪಾಲ್ಗೊಂಡರು



ಬೈಕ್ ರ‍್ಯಾಲಿಗೆ ಗ್ಲೋಬಲ್ ಮಾಲ್ ಬಳಿ ಚಾಲನೆ ನೀಡಲಾಯಿತು. ರಾಯಲ್ ಎನ್‌ಫೀಲ್ಡ್ ಮಾರ್ಕೆಟಿಂಗ್ ಮ್ಯಾನೇಜರ್ ದೀಪ್ತಿ ಪಾಂಡೆ, ಐಒಸಿಎಲ್ ಕಾರ್ಪೊರೇಟ್ ಕಮ್ಯುನಿಕೇಷನ್ಸ್ ಮ್ಯಾನೇಜರ್ ರಾಜಶೇಖರ್ ರಾಜಾರಾಂ, ಕೆ.ಪ್ರಸಾದ್ ಸಿಜಿಎಂ–ಲ್ಯೂಬ್ಸ್ (ಐಒಸಿಎಲ್), ವೆಟ್ರಿಸೆಲ್ವಕುಮಾರ್ ಸಿಜಿಎಂ, ಕಾರ್ಪೊರೇಟ್ ಕಮ್ಯುನಿಕೇಷನ್ (ಐಒಸಿಎಲ್), ಕೆ.ರಘು, ಡಿವಿಷನಲ್ ರಿಟೇಲ್ ಮುಖ್ಯಸ್ಥ (ಐಒಸಿಎಲ್) ಮತ್ತು ಗ್ಲೋಬಲ್ ಮಾಲ್ಸ್ ಡೆಪ್ಯುಟಿ ಮ್ಯಾನೇಜರ್ (ಆಪರೇಷನ್ಸ್) ವರುಣ್ ಸಿಂಗ್ ಪಾಲ್ಗೊಂಡರು. ಇಂಡಿಯನ್ ಆಯಿಲ್ ಎಕ್ಸ್‌ಪಿ 95 ಪ್ರಸ್ತುತಪಡಿಸಿದ ಕಾರ್ಯಕ್ರಮಕ್ಕೆ ಸಿಯೆಟ್ ಟೈರ್ಸ್, ಸುಜುಕಿ, ದಿ ರೋಡ್‌ಸ್ಟರ್‌ಲೈಫ್, ಲುಲು ಗ್ರೂಪ್ ಇಂಟರ್‌ನ್ಯಾಷನಲ್, ರಾಯಲ್ ಎನ್‌ಫೀಲ್ಡ್, ಮಣಿಪಾಲ್ ಹಾಸ್ಪಿಟಲ್ಸ್, 6 ಮೈಲ್ ಟು ಐಲ್ ಆಫ್ ಮ್ಯಾನ್, ಕೊಕಾ ಕೋಲಾ ಮತ್ತು ಯುನಿಬಿಕ್ ಸ್ನಾಕ್ಸ್ ಸಹಯೋಗ ನೀಡಿದವು

–ಪ್ರಜಾವಾಣಿ ಚಿತ್ರಗಳು

‘ವಿಶ್ವ ಮೋಟರ್ ಸೈಕಲ್ ದಿನ –2022’ ಕಾರ್ಯಕ್ರಮ

ನಗರದಲ್ಲಿ ಬೈಕರ್‌ಗಳ ದರ್ಬಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೊಂಯ್.. ರೊಂಯ್.. ಎಂದು ಜೋರಾಗಿ ಶಬ್ದ ಹೊರಡಿಸುವ ಬೈಕ್‌ಗಳು ಅಲ್ಲಿದ್ದವು. ₹ 5 ಲಕ್ಷದಿಂದ ₹ 8 ಲಕ್ಷ ಬೆಲೆ ಬಾಳುವ ಸ್ಪೋರ್ಟ್ಸ್ ಬೈಕ್‌ಗಳನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಬೈಕಿಂಗ್ ಸೂಟು ಧರಿಸಿದ್ದ ನೂರಾರು ಹವ್ಯಾಸಿ ಬೈಕರ್‌ಗಳು ನೆರೆದಿದ್ದರು.

‘ಡೆಕ್ಕನ್ ಹೆರಾಲ್ಡ್’ ಮತ್ತು ಎಬಿಸಿ ಇಂಡಿಯಾ (ಅಸೋಸಿಯೇಷನ್ ಆಫ್ ಬೈಕಿಂಗ್ ಕಮ್ಯುನಿಟಿ) ಸಹಯೋಗದಲ್ಲಿ ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಭಾನುವಾರ ನಡೆದ ‘ವಿಶ್ವ ಮೋಟರ್ ಸೈಕಲ್ ದಿನ –2022’ ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯಗಳಿವು.


ಉದ್ಯಾನನಗರಿಯ ಬೈಕರ್‌ಗಳ ಸಮಾಗಮಕ್ಕೆ ಈ ಕಾರ್ಯಕ್ರಮ ವೇದಿಕೆಯೊದಗಿಸಿತು. ಎಬಿಸಿ ಇಂಡಿಯಾ 80ಕ್ಕೂ ಹೆಚ್ಚು ಬೈಕಿಂಗ್ ಕ್ಲಬ್‌ಗಳನ್ನು ಒಳಗೊಂಡ ಸಂಸ್ಥೆಯಾಗಿದೆ. ಬೆಂಗಳೂರು ಅಲ್ಲದೆ ತುಮಕೂರು, ಮೈಸೂರು, ಹುಬ್ಬಳ್ಳಿ ಮತ್ತು ನೆರೆಯ ರಾಜ್ಯ ಕೇರಳದಿಂದ ಬಂದ ಸಾವಿರಕ್ಕೂ ಅಧಿಕ ಸದಸ್ಯರು ಪಾಲ್ಗೊಂಡರು. ಮಹಿಳಾ ಬೈಕರ್‌ಗಳೂ ಬಹಳಷ್ಟು ಸಂಖ್ಯೆಯಲ್ಲಿದ್ದರು.

ತಮ್ಮಲ್ಲಿರುವ ಹೊಸ ವಿನ್ಯಾಸದ, ಅಧಿಕ ಸಾಮರ್ಥ್ಯದ ಬೈಕ್‌ಗಳನ್ನು ಹೆಮ್ಮೆಯಿಂದ ಪ್ರದರ್ಶಿಸಲಿಕ್ಕಾಗಿಯೇ ಹಲವರು ಬಂದಿದ್ದರು. ಬೈಕರ್‌ಗಳಿಗಾಗಿ ವಿವಿಧ ಸ್ಪರ್ಧೆಗಳು ಮತ್ತು ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಯಿತು. ಹೊಸ ಬೈಕ್‌ಗಳ ಅನಾವರಣ, ಫ್ಯಾಷನ್ ಶೋ ಸಮಾರಂಭದ ಕಳೆ ಹೆಚ್ಚಿಸಿತು. ಬೈಕ್‌ಗಳ ಮುಂದೆ ನಿಂತು ಫೋಟೊ, ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಪಟ್ಟರು. ಸಂಗೀತಕ್ಕೆ ನೃತ್ಯಮಾಡಿ ಖುಷಿಪಟ್ಟರು.

ಮಳಿಗೆಗಳು: ಬೈಕಿಂಗ್ ಮಾಡಲು ಅಗತ್ಯವಿರುವ ಪರಿಕರಗಳ ಪ್ರದರ್ಶನ ಹಾಗೂ ಮಾರಾಟದ ಮಳಿಗೆಗಳನ್ನು ತೆರೆಯಲಾಗಿತ್ತು. ಹೆಲ್ಮೆಟ್, ಜಾಕೆಟ್, ಮೊಣಕೈ, ಮಂಡಿಯ ಪ್ಯಾಡ್‌ಗಳು, ಕೈಗವಸು, ಬೈಕಿಂಗ್ ಬೂಟುಗಳು ಮತ್ತು ಬೈಕಿಂಗ್ ಸೂಟುಗಳ ಮಳಿಗೆಗಳ ಮುಂದೆ ಜನಸಂದಣಿ ಕಂಡುಬಂತು. ಆಹಾರ ಮಳಿಗೆಗಳೂ ಅಲ್ಲಿದ್ದವು.

ಸಂವಾದ: ‘ಟ್ರಾಫಿಕ್ ಶಿಸ್ತು, ನಿಯಮ ಪಾಲಿಸಿ’ ವಿಷಯದ ಸಂವಾದ ನಡೆಯಿತು. ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಬೈಕರ್ ರಜಿನಿ ಕೃಷ್ಣನ್, ರೈಡರ್ ಹೇಮಂತ್ ಮುದ್ದಪ್ಪ ಪಾಲ್ಗೊಂಡರು.

ಬೈಕ್‌ಗಳ ನಿರ್ವಹಣೆ, ಇಂಧನ ಉಳಿತಾಯ, ನೂರಾರು ಕಿ.ಮೀ. ಪ್ರಯಾಣಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆಯೂ ಮಾಹಿತಿ ನೀಡಲಾಯಿತು. ಬೈಕ್‌ನಲ್ಲಿ ದೇಶ ಪರ್ಯಟನೆ ಮಾಡಿದ ರೈಡರ್‌ಗಳು ತಮ್ಮ ಅನುಭವ ಹಂಚಿಕೊಂಡರು.



‘ವಿಶ್ವ ಮೋಟರ್ ಸೈಕಲ್ ದಿನ –2022’ ಕಾರ್ಯಕ್ರಮದಲ್ಲಿ ವಿವಿಧ ಬೈಕಿಂಗ್ ಕ್ಲಬ್‌ಗಳ ನೂರಾರು ಸದಸ್ಯರು ಪಾಲ್ಗೊಂಡರು

ಜಾಗೃತಿ ಜಾಥಾ

ರಸ್ತೆ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಬೈಕ್ ರ‍್ಯಾಲಿ ನಡೆಯಿತು.

ರಾಜಾಜಿನಗರದ ಗ್ಲೋಬಲ್ ಮಾಲ್ ಬಳಿ ಬೆಳಿಗ್ಗೆ 6ಕ್ಕೆ ರ‍್ಯಾಲಿಗೆ ಚಾಲನೆ ನೀಡಲಾಯಿತು. ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ರ‍್ಯಾಲಿ ಜಯಮಹಲ್ ಪ್ಯಾಲೇಸ್‌ನಲ್ಲಿ ಕೊನೆಗೊಂಡಿತು. ಸುಮಾರು 500 ಬೈಕರ್‌ಗಳು ಪಾಲ್ಗೊಂಡರು.



ಫ್ಯಾಷನ್ ಶೋನಲ್ಲಿ ಗಮನ ಸೆಳೆದ ರೂಪದರ್ಶಿಗಳು

ಮಾದಕವಸ್ತು ಸೇವನೆ ವಿರುದ್ಧ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕವಸ್ತು ಸೇವನೆ ವಿರುದ್ಧ ಜಾಗೃತಿ ಮೂಡಿಸುವುದಕ್ಕಾಗಿ ಅಬಕಾರಿ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಗಳ ಜಂಟಿ ಸಹಭಾಗಿತ್ವದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ನಡಿಗೆಯಲ್ಲಿ ಚಿತ್ರನಟರು, ಸರ್ಕಾರಿ ನೌಕರರು, ಯುವಜನರು ಸೇರಿದಂತೆ ನೂರಾರು ಮಂದಿ ಹೆಜ್ಜೆ ಹಾಕಿದರು.

ಕಂಠೀರವ ಕ್ರೀಡಾಂಗಣದಲ್ಲಿ ಆರಂಭವಾದ ಜಾಗೃತಿ ನಡಿಗೆ ಕಬ್ಬನ್ ಉದ್ಯಾನದ ಮಾರ್ಗವಾಗಿ ಮಹಾತ್ಮ ಗಾಂಧಿ ರಸ್ತೆ ಮೂಲಕ ಟ್ರಿನಿಟಿ ವೃತ್ತ ತಲುಪಿತು. ಅಲ್ಲಿ ತಿರುಗಿ ಮಹಾತ್ಮ ಗಾಂಧಿ ರಸ್ತೆಯಲ್ಲಿ ಸಾಗಿದ ನಡಿಗೆ ಕಸ್ತೂರಬಾ ರಸ್ತೆಯ ಮಾರ್ಗವಾಗಿ ಪುನಃ ಕಂಠೀರವ ಕ್ರೀಡಾಂಗಣಕ್ಕೆ ತಲುಪಿ, ಕೊನೆಗೊಂಡಿತು. ಇದೇ ಕಾರ್ಯಕ್ರಮದ ಭಾಗವಾಗಿ ಬೈಕ್ ರ‍್ಯಾಲಿಯೂ ನಡೆಯಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ಹಾಗೂ ಅಬಕಾರಿ ಸಚಿವ ಕೆ. ಗೋಪಾಲಯ್ಯ, ಜಾಗೃತಿ ನಡಿಗೆಗೆ ಚಾಲನೆ ನೀಡಿದರು. ಚಿತ್ರನಟ ನೀನಾಸಂ ಸತೀಶ್, ಚಿತ್ರನಟಿ ಭಾವನಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ನಡಿಗೆಗೆ ಚಾಲನೆ ನೀಡಿ ಮಾತನಾಡಿದ ನಾರಾಯಣ ಗೌಡ, ‘ಮಾದಕವಸ್ತು ಸೇವನೆಯ ದುಶ್ಚಟಕ್ಕೆ ಯುವ ಸಮೂಹ ಬಲಿಯಾಗುತ್ತಿದೆ. ಒಮ್ಮೆ ಮಾದಕವಸ್ತು ಸೇವನೆಯ ವ್ಯಸನ ಅಂಟಿಸಿಕೊಂಡವರು ಅದರಿಂದ ಹೊರ ಬರಲಾಗದೇ ನರಳುತ್ತಾರೆ. ಮಾನಸಿಕ, ದೈಹಿಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಈ ಕುರಿತು ಯುವ ಜನರಲ್ಲಿ ಜಾಗೃತಿ ಮೂಡಿಸುವುದು ನಾಗರಿಕ ಸಮಾಜದ ಹೊಣೆ. ಈ ಕೆಲಸದಲ್ಲಿ ಎಲ್ಲರೂ ಕೈಜೋಡಿಸಬೇಕು’ ಎಂದು ಮನವಿ ಮಾಡಿದರು.



‘ಅಂತರರಾಷ್ಟ್ರೀಯ ಮಾದಕ ಅರಿವು ದಿನಾಚರಣೆ’ ಅಂಗವಾಗಿ ಅಬಕಾರಿ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಭಾನುವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಬೈಕ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದವರು ಮಹಾತ್ಮ ಗಾಂಧಿ ರಸ್ತೆಯನ್ನು ಹಾದು ಹೋಗುತ್ತಿರುವುದು – ಪ್ರಜಾವಾಣಿ ಚಿತ್ರ

‘ಮಾದಕ ವ್ಯಸನದ ವಿರುದ್ಧ ಅಭಿಯಾನ’



ಡಾ.ವಿಶಾಲ್ ರಾವ್

ಬೆಂಗಳೂರು: ‘ಮಾದಕ ವ್ಯಸನಕ್ಕೆ ಗಾಂಜಾ ಪ್ರವೇಶ ಕಲ್ಪಿಸುತ್ತದೆ. ಯೌವ್ವನದಲ್ಲಿ ಆರಂಭವಾಗುವ ಈ ವ್ಯಸನಗಳು, ಜೀವನದ ಉದ್ದಕ್ಕೂ ಮುಂದುವರಿಯುತ್ತವೆ. ಆದ್ದರಿಂದ ಮಾದಕ ವ್ಯಸನದ ವಿರುದ್ಧ ಅಭಿಯಾನ ಕೈಗೊಳ್ಳಲಾಗುತ್ತಿದೆ’ ಎಂದು ಕ್ಯಾನ್ಸರ್ ತಜ್ಞ ಡಾ.ವಿಶಾಲ್ ರಾವ್ ತಿಳಿಸಿದ್ದಾರೆ.

‘ಯುವ ಸಬಲೀಕರಣ ಇಲಾಖೆ ನೇತೃತ್ವದಲ್ಲಿ ಈ ಅಭಿಯಾನ ನಡೆಯಲಿದೆ. ಬಿಬಿಎಂಪಿ ಮತ್ತು ರೋಟರಿ ಕ್ಲಬ್ ಜೊತೆಗೆ ಎನ್‌ಎಸ್‌ಎಸ್, ಎನ್‌ಸಿಸಿ ಮತ್ತು ಸ್ಕೌಟ್ಸ್ ಸ್ವಯಂ ಸೇವಕರೂ ಪಾಲ್ಗೊಳ್ಳುತ್ತಾರೆ. ಶಾಲೆಗಳಲ್ಲಿಯೂ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ಅಭಿಯಾನದಲ್ಲಿ ಭಾಗವಹಿಸಬೇಕು’ ಎಂದು ಮನವಿ ಮಾಡಿಕೊಂಡಿದ್ದಾರೆ.

‘ಗಾಂಜಾ ಸೇವನೆ ವ್ಯಸನಕ್ಕೆ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಒಳಪಡುತ್ತಿದ್ದಾರೆ. ಖುಷಿ, ಮನರಂಜನೆಗಾಗಿ ಹೆಚ್ಚಿನವರು ಇದನ್ನು ತೆಗೆದುಕೊಳ್ಳುತ್ತಾರೆ. ಇದು ದೇಹ ಹಾಗೂ ಮಿದುಳಿನ ಮೇಲೆ ಬಲವಾದ ಪರಿಣಾಮ ಬೀರುತ್ತದೆ. ಗಾಂಜಾ ಸೇದಿದಾಗ ಅದರಲ್ಲಿರುವ ಟಿ.ಎಚ್.ಸಿ. ರಾಸಾಯನಿಕ, ಶ್ವಾಸಕೋಶಗಳಿಂದ ರಕ್ತ ಸೇರುತ್ತದೆ. ರಕ್ತ ಮಿದುಳಿಗೆ ಹಾಗೂ ದೇಹದ ಇತರ ಭಾಗಗಳಿಗೆ ರಾಸಾಯನಿಕವನ್ನು ಒಯ್ಯುತ್ತದೆ. ಇದರಿಂದ ಮಿದುಳು ದುರ್ಬಲವಾಗುತ್ತದೆ. ಹೆಚ್ಚಿನವರಿಗೆ ಇದರ ಸೇವನೆಯಿಂದ ನರ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ವ್ಯಕ್ತಿ ಮಾನಸಿಕವಾಗಿಯೂ ಕುಗ್ಗುತ್ತಾ ಹೋಗುತ್ತಾನೆ’ ಎಂದು ತಿಳಿಸಿದ್ದಾರೆ.

‘ತಂಬಾಕು ಉತ್ಪನ್ನಗಳ ಸೇವೆಯನ್ನು ದೇಶದಲ್ಲಿ ಕಾನೂನುಬದ್ಧಗೊಳಿಸಲಾಗಿದೆ. ಇದರ ಪರಿಣಾಮ ದೇಶದಲ್ಲಿ ಶೇ 80ಕ್ಕಿಂತ ಅಧಿಕ ಮಂದಿ ಮಾದಕ ವ್ಯಸನವನ್ನು ತಂಬಾಕಿನಿಂದಲೇ ಪ್ರಾರಂಭಿಸುತ್ತಾರೆ. ಯುವಜನರಿಗೆ ಗಾಂಜಾದಿಂದ ಉಂಟಾಗುವ ಅಪಾಯಗಳ ಬಗ್ಗೆ ಅರಿವು ನೀಡಬೇಕು. ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಿದರೆ, ಗಾಂಜಾ ಸೇವನೆಗೂ ತಡೆ ಒಡ್ಡಲು ಸಾಧ್ಯ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಜಿ.ರಾಜಶೇಖರ್ ಆಸ್ಪತ್ರೆಗೆ ದಾಖಲು

ಉಡುಪಿ: ಚಿಂತಕ ಜಿ.ರಾಜಶೇಖರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು ನಗರದ ಆದರ್ಶ ಆಸ್ಪತ್ರೆಗೆ ದಾಖಲಿಸಲಾಗಿದೆ.

2019ರಲ್ಲಿ ಜಿ.ರಾಜಶೇಖರ್ ಅವರಿಗೆ ಪ್ರೊಗ್ರೆಸಿವ್ ಸುಪ್ರ ನ್ಯೂಕ್ಲಿಯರ್ ಪಾಲ್ಸಿ ಎಂಬ ಪಾರ್ಕಿನ್‌ಸನ್ಸ್ ಕಾಯಿಲೆ ಇರುವುದು ದೃಢಪಟ್ಟಿತ್ತು. ನಂತರ ನೆನಪಿನ ಶಕ್ತಿ ಕುಂದುತ್ತಾ ಹೋಗಿ, ಹೋರಾಟಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಈಗ ನಡೆಯಲೂ ಸಾಧ್ಯವಾಗದ ಹಾಗೂ ಆಹಾರವನ್ನು ನುಂಗಲಾಗದ ಸ್ಥಿತಿಗೆ ತಲುಪಿದ್ದಾರೆ ಎಂದು ಪುತ್ರ ವಿಷ್ಣು ರಾಜಶೇಖರ್ ಮಾಹಿತಿ ನೀಡಿದ್ದಾರೆ.

ಉಕ್ಕು ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ನಿಧನ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಉದ್ದಿಮೆ ಭಾರತೀಯ ಉಕ್ಕುಪ್ರಾಧಿಕಾರದ (ಎಸ್‌ಎಐಎಲ್) ಮಾಜಿ ಅಧ್ಯಕ್ಷ ವಿ.ಕೃಷ್ಣಮೂರ್ತಿ (97) ಅವರು ಚೆನ್ನೈನಲ್ಲಿ ಭಾನುವಾರ ನಿಧನರಾದರು.

ಅವರು ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು. ಅಂತ್ಯಕ್ರಿಯೆ ಸೋಮವಾರ ನೆರವೇರಲಿದೆ ಎಂದು ಮೂಲಗಳು ಹೇಳಿವೆ.



ಸಚಿವ ಗೋವಿಂದ ಕಾರಜೋಳ ಅವರ ಪುತ್ರ ಅರುಣ ಕಾರಜೋಳ ಅವರ ಜನ್ಮ ದಿನ ಸಮಾರಂಭದಲ್ಲಿ ಸಮವಸ್ತ್ರ ಧರಿಸಿ ಶುಭ ಕೋರಿದ ಪೊಲೀಸ್ ಸಿಬ್ಬಂದಿ

ಸಮವಸ್ತ್ರದಲ್ಲೇ ಶುಭ ಕೋರಿದ ಪೊಲೀಸ್: ಚರ್ಚೆ

ಬಾಗಲಕೋಟೆ: ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರ ಪುತ್ರ ಅರುಣ ಕಾರಜೋಳ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಸಮವಸ್ತ್ರ ಧರಿಸಿರುವ ಪೊಲೀಸ್ ಸಿಬ್ಬಂದಿ ಭಾಗವಹಿಸಿರುವುದು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದೆ. ಫೋಟೊಗಳು ಜಾಲತಾಣದಲ್ಲಿ ವೈರಲ್ ಆಗಿದ್ದು, ಪರ ಮತ್ತು ವಿರೋಧದ ಅಭಿಪ್ರಾಯಗಳು ವ್ಯಕ್ತವಾಗಿವೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜನ್ಮದಿನದ ಕಾರ್ಯಕ್ರಮದಲ್ಲಿ ಮುಧೋಳದ ಸಿಪಿಐ ಅಯ್ಯನಗೌಡ ಪಾಟೀಲ, ಪಿಎಸ್‌ಐ ಸಂಗಮೇಶ ಹೊಸಮನಿ ಹಾಗೂ ಲೋಕಾಪುರ ಪಿಎಸ್‌ಐ ಶಿವಶಂಕರ್ ಮುಕರಿ ಸಮವಸ್ತ್ರದಲ್ಲೇ ಭಾಗವಹಿಸಿ ಶುಭ ಕೋರಿದ್ದರು. ಈ ಫೋಟೊಗಳನ್ನು ಅರುಣ ಕಾರಜೋಳ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಾಕಿಕೊಂಡಿದ್ದಾರೆ.

ನಗರದ ಮರಗಳ ನಿರ್ವಹಣೆ ಬಿಬಿಎಂಪಿ ಡಿಸಿಎಫ್ ವ್ಯಾಪ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಮರಗಳ ರಕ್ಷಣೆ ಮತ್ತು ಹಸಿರೀಕರಣದ ಜವಾಬ್ದಾರಿಯನ್ನು ಬಿಬಿಎಂಪಿಯ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ (ಡಿಸಿಎಫ್) ಅವರಿಗೆ ವಹಿಸಲಾಗಿದೆ.

ಇದುವರೆಗೆ ರಸ್ತೆ ಬದಿ ಮತ್ತು ಉದ್ಯಾನಗಳಲ್ಲಿನ ಮರಗಳ ನಿರ್ವಹಣೆಯ ಜವಾಬ್ದಾರಿಯನ್ನು ಮಾತ್ರ ಬಿಬಿಎಂಪಿ ಡಿಸಿಎಫ್ ಅವರಿಗೆ ನೀಡಲಾಗಿತ್ತು.

ನಗರದಲ್ಲಿನ ಮರಗಳ ನಿರ್ವಹಣೆಯ ಜವಾಬ್ದಾರಿಯನ್ನು ಈಗ ಅರಣ್ಯ ಇಲಾಖೆಯಿಂದ ಪಡೆಯುವ ಬಗ್ಗೆ ಜೂನ್ 13ರಂದು ಸರ್ಕಾರ ಆದೇಶ ಹೊರಡಿಸಿದೆ. ತುರಹಳ್ಳಿ ಮತ್ತು ಜಾರಕಬಂಡೆ ಅರಣ್ಯ ಪ್ರದೇಶಗಳ ನಿರ್ವಹಣೆಯ ಜವಾಬ್ದಾರಿಯನ್ನು ಅರಣ್ಯ ಇಲಾಖೆಯೇ ವಹಿಸಿಕೊಳ್ಳಲಿದೆ.



‘ತೇಗ, ಶ್ರೀಗಂಧ ಮುಂತಾದ ಮರಗಳು ಹಾಗೂ ವನ್ಯಜೀವಿಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಬೆಂಗಳೂರು ನಗರ ಜಿಲ್ಲೆಯ ಅರಣ್ಯ ಇಲಾಖೆಯ ಡಿಸಿಎಫ್ ಅವರೇ ಕೈಗೊಳ್ಳಲಿದ್ದಾರೆ. ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳನ್ನು ಎಂದಿನಂತೆ ತೋಟಗಾರಿಕೆ ಇಲಾಖೆಯೇ ನಿರ್ವಹಿಸಲಿದೆ. ನಗರದಲ್ಲಿ ಮರಗಳನ್ನು ಕಡಿಯುವ ಸಂಬಂಧದ ವಿಷಯಗಳ ಬಗ್ಗೆ ಬಿಬಿಎಂಪಿ ಡಿಸಿಎಫ್ ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಆಡಳಿತದಲ್ಲಿ ವಿಕೇಂದ್ರೀಕರಣವನ್ನು ಸ್ವಾಗತಿಸಬೇಕು. ಆದರೆ, ಇಲ್ಲಿ ಹಿತಾಸಕ್ತಿ ಸಂಘರ್ಷವೂ ಇರುವ ಸಾಧ್ಯತೆ ಇದೆ. ಬಿಬಿಎಂಪಿ ಡಿಸಿಎಫ್ ಅವರು ಮುಖ್ಯ ಆಯುಕ್ತರಿಗೆ ವರದಿ ಮಾಡಿಕೊಳ್ಳಬೇಕು. ಮುಖ್ಯ ಆಯುಕ್ತರ ಉಸ್ತುವಾರಿಯಲ್ಲೇ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ. ಆದ್ದರಿಂದ, ಈ ಬದಲಾವಣೆ ಯಾವ ರೀತಿಯಲ್ಲಿ ಕೈಗೊಳ್ಳಲಾಗುತ್ತದೆ ಎನ್ನುವುದು ಸಹ ಮುಖ್ಯ’ ಎಂದು ಸಾಮಾಜಿಕ ಕಾರ್ಯಕರ್ತ ದತ್ತಾತ್ರೇಯ ಪ್ರತಿಕ್ರಿಯಿಸಿದ್ದಾರೆ.

ಬ್ಯುಯಾಂತ್ ಕಂಪನಿ ಆಡಳಿತಾಧಿಕಾರಿಯಾಗಿ ನ್ಯಾಯಮೂರ್ತಿ ಆನಂದ ಬೈರಾ ರೆಡ್ಡಿ

ಬೆಂಗಳೂರು: ಮಂತ್ರಿ ಡೆವಲಪರ್ಸ್ ಸಮೂಹದ ಬ್ಯುಯಾಂತ್ ಟೆಕ್ನಾಲಜಿ ಕಾನ್‌ಸ್ಟೆಲ್ಲೇಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಆಡಳಿತಾಧಿಕಾರಿಯನ್ನಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆನಂದ ಬೈರಾ ರೆಡ್ಡಿ ಅವರನ್ನು ನೇಮಿಸಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಶನಿವಾರ ಆದೇಶ ಹೊರಡಿಸಿದೆ.

ಈಗಿನ ಬ್ಯುಯಾಂತ್ ಟೆಕ್ನಾಲಜಿ ಕಾನ್‌ಸ್ಟೆಲ್ಲೇಷನ್ಸ್ ಪ್ರೈವೇಟ್ ಲಿಮಿಟೆಡ್ ಈ ಹಿಂದೆ ಮಂತ್ರಿ ಟೆಕ್ನಾಲಜಿ ಕಾನ್‌ಸ್ಟೆಲ್ಲೇಷನ್ಸ್ ಎಂಬ ಹೆಸರಿನಲ್ಲಿ ಕಾರ್ಯಾಚರಣೆ ಮಾಡುತ್ತಿತ್ತು. ಈ ಹಿಂದೆ ಸೆಂಟ್ರಾ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರು ಹೊಂದಿದ್ದ ಈಗಿನ ವಾಟರ್‌ವಾಕ್ ಅಪಾರ್ಟ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್, ಬ್ಯುಯಾಂತ್‌ನಲ್ಲಿ ಶೇಕಡ 50.23ರಷ್ಟು ಪಾಲು ಹೊಂದಿದೆ. ಮಾರಿಷಿಯಸ್‌ನಲ್ಲಿರುವ ಎರಡು ಹಾಗೂ ಸಿಪ್ರಸ್‌ನಲ್ಲಿರುವ ಎರಡು ಕಂಪನಿಗಳ ಮಾಲೀಕತ್ವ ಹೊಂದಿರುವ ಕ್ವಾಂಡರ್ ಸಮೂಹ ಶೇ 49.77ರಷ್ಟು ಪಾಲು ಹೊಂದಿದೆ. ಬ್ಯುಯಾಂತ್ ಕಂಪನಿ ಆಡಳಿತದ ವಿಚಾರದಲ್ಲಿ ವಾಟರ್‌ವಾಕ್ ಕಂಪನಿ ಹಾಗೂ ಕ್ವಾಂಡರ್ ಕಂಪನಿ ಸಮೂಹದ ನಡುವೆ ಸಂಘರ್ಷ ಉಂಟಾಗಿತ್ತು. ವಾಟರ್‌ವಾಕ್ ಕಂಪನಿ ಪ್ರಮುಖ ಪಾಲುದಾರರಾಗಿರುವ ಮಂತ್ರಿ ಡೆವಲಪರ್ಸ್ ನಿರ್ದೇಶಕ ಸುಶೀಲ್ ಪಾಂಡುರಂಗ ಮಂತ್ರಿ ಮತ್ತು ಇತರರು ಕ್ವಾಂಡರ್ ಸಮೂಹವೂ ಸೇರಿ ಬ್ಯುಯಾಂತ್ ಕಂಪನಿ ಆಡಳಿತ ಮಂಡಳಿ ವಿರುದ್ಧ ದಾವೆ ಹೂಡಿದ್ದರು.

ಅರ್ಜಿದಾರರು ಮತ್ತು ಪ್ರತಿವಾದಿಗಳ ವಾದ ಆಲಿಸಿದ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರು ಪೀಠದ ನ್ಯಾಯಾಂಗ ಸದಸ್ಯ ಅಜಯ್ ಕುಮಾರ್ ವಾತ್ಸವಾಯಿ ಮತ್ತು ತಾಂತ್ರಿಕ ಸದಸ್ಯ ಮನೋಜ್ ಕುಮಾರ್ ದುಬೆ ಅವರನ್ನೊಳಗೊಂಡ ಪೀಠ, ಆನಂದ ಬೈರಾ ರೆಡ್ಡಿ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

ಬ್ಯುಯಾಂತ್ ಕಂಪನಿಯ ಸಂಪೂರ್ಣ ಆಡಳಿತ ನಿರ್ವಹಣೆ ಅಧಿಕಾರವನ್ನು ಆಡಳಿತಾಧಿಕಾರಿಗೆ ನೀಡಲಾಗಿದೆ. ಅಗತ್ಯವಿರುವ ಸಿಬ್ಬಂದಿ, ಸಲಹೆಗಾರರ ನೇಮಕಕ್ಕೂ ಅವಕಾಶ ನೀಡಲಾಗಿದೆ. ಆಡಳಿತ ನಿರ್ವಹಣೆ ವೆಚ್ಚವನ್ನು ಕಂಪನಿಯ ಪಾಲುದಾರರೇ ಭರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೋವಿಡ್: ವಾರದಲ್ಲಿ 4,238 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಂದು ವಾರದಲ್ಲಿ 1.09 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 4,238 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಎರಡು ದಿನಗಳಿಂದ ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದೆ. ಶನಿವಾರ 236 ಮಂದಿ ಕೋವಿಡ್ ಪೀಡಿತರಾದರೆ, ಭಾನುವಾರ 131 ಮಂದಿ ಸೋಂಕಿತರಾಗಿದ್ದಾರೆ. ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕಿತರಲ್ಲಿ ಮತ್ತೆ 517 ಮಂದಿ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 17.99 ಲಕ್ಷ ದಾಟಿದೆ. ಸೋಂಕಿತರಲ್ಲಿ ಈವರೆಗೆ 17.77 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ನಗರದಲ್ಲಿ 4,211 ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ ಸದ್ಯ 69 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. 58 ಮಂದಿ ಸಾಮಾನ್ಯ ಹಾಸಿಗೆ, 10 ಮಂದಿ ಐಸಿಯು ಹಾಸಿಗೆ ಹಾಗೂ ಒಬ್ಬರು ಎಚ್‌ಡಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ 17 ಸಾವಿರ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 4ರ ಗಡಿಯೊಳಗೆ ಇದೆ. ಒಂದು ವಾರದ ಅವಧಿಯಲ್ಲಿ 4,323 ಮಂದಿ ಚೇತರಿಸಿಕೊಂಡಿದ್ದಾರೆ. ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಈ ತಿಂಗಳ ಮೊದಲ ವಾರದಲ್ಲಿ ಸೋಂಕು ದೃಢ ಪ್ರಮಾಣ ಶೇ 2ರ ಗಡಿಯೊಳಗಿತ್ತು.

ವಾರದಿಂದ ಬೆಳ್ಳಂದೂರು (57), ಕಾಡುಗೋಡಿ (31), ದೊಡ್ಡ ನೆಕ್ಕುಂದಿ (28), ವರ್ತೂರು (23), ಹಗದೂರು (17), ಎಚ್‌ಎಸ್‌ಆರ್ ಲೇಔಟ್ (15), ಹೊರಮಾವು (14), ಹೂಡಿ (11), ಬೇಗೂರು (11) ಹಾಗೂ ಗರುಡಾಚಾರ್ ಪಾಳ್ಯದಲ್ಲಿ (10) ದೈನಂದಿನ ಪ್ರಕರಣಗಳ ಸರಾಸರಿ ಅಧಿಕವಿದೆ. ಈ ವಾರ್ಡ್‌ಗಳಲ್ಲಿ ನೂರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.



7 ದಿನಗಳ ಕೋವಿಡ್ ಪ್ರಕರಣಗಳು

ದಿನಾಂಕ	ಪ್ರಕರಣಗಳು	ಗುಣಮುಖರು	ಮರಣ ಪ್ರಕರಣ
ಜೂನ್ 21	698	602	00
ಜೂನ್ 22	626	780	00
ಜೂನ್ 23	820	666	01
ಜೂನ್ 24	776	665	00
ಜೂನ್ 25	236	598	00
ಜೂನ್ 26	131	487	00

‘ಸ್ವಾತಿ ಮುತ್ತುಗಳು’ ಬಿಡುಗಡೆ: ಸಾಹಿತಿ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಅಭಿಮತ

‘ಸಮಕಾಲೀನ ಸಂದರ್ಭಕ್ಕೆ ಲೇಖಕ ಸ್ಪಂದಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೇಖಕನಾದವನು ಸಮಕಾಲೀನ ಸಂದರ್ಭಕ್ಕೆ ಸ್ಪಂದಿಸಬೇಕು. ಇಲ್ಲವಾದರೆ ಅವನ ಬರಹ ಜೊಳ್ಳು’ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ತಿಳಿಸಿದರು.

ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೃಷ್ಣಕವಿ ಅವರ ‘ಸ್ವಾತಿ ಮುತ್ತುಗಳು’ ಮುಕ್ತಕ ಸಂಕಲನ ಬಿಡುಗಡೆ ಮಾಡಿ, ಮಾತನಾಡಿದರು.

‘ಬದುಕಿನ ಎಲ್ಲ ಕ್ಷೇತ್ರದಲ್ಲಿ ರುವ ವಿಷಯಗಳನ್ನು ಮುಕ್ತಕಗಳಿಗೆ ವಸ್ತುವಾಗಿಸಿಕೊಳ್ಳಬಹುದು. ಅವು ಪ್ರತಿ ಕ್ರಿಯಾತ್ಮಕ ಹಾಗೂ ಪ್ರತಿಮಾತ್ಮಕವಾಗಿ ಇರುತ್ತವೆ. ಪ್ರತಿಕ್ರಿಯಾರೂಪದ ಮುಕ್ತಕಗಳು ಕ್ಷಣಿಕವಾಗಿರುತ್ತವೆ. ಪ್ರತಿಮಾತ್ಮಕ ರೂಪದವು ಶಾಶ್ವತವಾಗಿ ಉಳಿಯುತ್ತವೆ. ಮುಕ್ತಕ ಬರೆಯುವವರೆಲ್ಲರೂ ವೈಜ್ಞಾನಿಕ ಮನೋಧರ್ಮ, ವೈಚಾರಿಕ ದೃಷ್ಟಿಕೋನ ಹೊಂದಿರುತ್ತಾರೆ ಎನ್ನಲು ಸಾಧ್ಯವಿಲ್ಲ. ತತ್ವ-ಸಿದ್ಧಾಂತ ಹೇಳುವಾಗ ಕರ್ಮ ಸಿದ್ಧಾಂತವನ್ನೂ ಕೆಲವರು ಹೇಳುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ ಡಿ.ವಿ. ಗುಂಡಪ್ಪ ಅವರ ‘ಮಂಕುತಿಮ್ಮನ ಕಗ್ಗ’ ಎಂದು ಸಿದ್ಧರಾಮಯ್ಯ ಅವರು ಹೇಳಿದರು.

‘ಈ ಕೃತಿಯಲ್ಲಿನ ಎಷ್ಟೋ ಕವನಗಳು ಪ್ರಸ್ತುತ ಬದುಕಿಗೆ ಕನ್ನಡಿ ಹಿಡಿಯುವಂತಿವೆ. ಕೋವಿಡ್, ಶೈಕ್ಷಣಿಕ ವ್ಯವಸ್ಥೆ ಬಗ್ಗೆಯೂ ಹೇಳಲಾಗಿದೆ. ಮಾನವ ಸಿದ್ಧಾಂತಗಳನ್ನು ಪ್ರತಿಪಾದಿಸುವ ಅನೇಕ ಮುಕ್ತಕಗಳಿವೆ’ ಎಂದು ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮುಕ್ತಕಗಳ ರಚನೆಕಾರ ಕೃಷ್ಣಕವಿ, ‘ಡಿವಿಜಿ ಅವರ ‘ಮಂಕುತಿಮ್ಮನ ಕಗ್ಗ’ ಓದಿದ ಬಳಿಕ ಮುಕ್ತಕಗಳನ್ನು ಬರೆಯುವ ಆಸೆ ಗರಿಗೆದರಿತ್ತು. ಆದರೆ, ಆ ಆಸೆ ಇತ್ತೀಚೆಗೆ ಪೂರ್ಣಗೊಂಡಿತು. ನನ್ನ ಮುಕ್ತಕಗಳನ್ನು ಓದಿದವರೆಲ್ಲಾ ಬಹಳವಾಗಿ ಮೆಚ್ಚಿ, ಅವುಗಳನ್ನು ಕೃತಿಯ ರೂಪದಲ್ಲಿ ತರುವಂತೆ ಪ್ರೋತ್ಸಾಹಿಸಿದರು. ಅವರ ಮೆಚ್ಚುಗೆ ಮತ್ತು ಪ್ರೀತಿಯೇ ಈ ಸ್ವಾತಿ ಮುತ್ತುಗಳು’ ಕೃತಿ ಹೊರಬರಲು ಕಾರಣ’ ಎಂದು ಅವರು ಹೇಳಿದರು.

ಬಳಿಕ ಆರ್ಯವೈಶ್ಯ ಸಮಾಜದ ಲೇಖಕರು, ಗಾಯಕರು ಹಾಗೂ ಸಾಹಿತ್ಯಾಸಕ್ತರಿಂದ ‘ಅಕ್ಷರ ಮಿಲನ’ ಕಾರ್ಯಕ್ರಮ ನಡೆಯಿತು.



ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಅವರು ‘ಸ್ವಾತಿ ಮುತ್ತುಗಳು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಕೃಷ್ಣಕವಿ, ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಲ್. ನಟರಾಜ್, ಪತ್ರಕರ್ತ ರಾಜಾ ಶೈಲೇಶಚಂದ್ರ ಗುಪ್ತ, ಪರಿಷತ್ತಿನ ಗೌರವಾಧ್ಯಕ್ಷ ಟಿ.ಎ.ಪಿ. ನಾಗರಾಜ್ ಇದ್ದಾರೆ – ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- **ಪುಸ್ತಕ:** ಸ್ವಾತಿ ಮುತ್ತುಗಳು
- **ಲೇಖಕ:** ಕೃಷ್ಣಕವಿ
- **ಪ್ರಕಾಶಕರು:** ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು
- **ಪುಟಗಳು:** 168
- **ಬೆಲೆ:** ₹150

ಪಕ್ಷದ ಪರ ಸೃಷ್ಟಿಯಾಗದ ವಾತಾವರಣ: ಮೂರು ಪ್ರತ್ಯೇಕ ಆಂತರಿಕ ಸಮೀಕ್ಷೆ ವರದಿ

ಹೆಚ್ಚದ ಬಲ: ಬಿಜೆಪಿ ವರಿಷ್ಠರಿಗೆ ಚಿಂತೆ

• ಎಸ್‌.ರವಿಪ್ರಕಾಶ್

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಗೆ 8– 10 ತಿಂಗಳು ಬಾಕಿ ಇದ್ದರೂ ಪಕ್ಷದ ಸಂಘಟನೆ ಅಥವಾ ಸರ್ಕಾರ ನಿರೀಕ್ಷೆಗೆ ತಕ್ಕಂತೆ ಚುನಾವಣೆಗೆ ಸಿದ್ಧತೆ ನಡೆಸಿಲ್ಲ ಎಂಬುದು ಬಿಜೆಪಿ ನಡೆಸಿದ ಆಂತರಿಕ ಸಮೀಕ್ಷೆಯ ವರದಿಯಲ್ಲಿ ವ್ಯಕ್ತವಾಗಿದೆ. ಇದೇ ಸ್ಥಿತಿ ಮುಂದುವರಿದರೆ ಚುನಾವಣೆಯಲ್ಲಿ 70– 75 ಸ್ಥಾನಗಳ ಗಡಿ ದಾಟುವುದು ಕಷ್ಟವಾಗಬಹುದು ಎಂಬ ವರದಿ ಪಕ್ಷದ ವರಿಷ್ಠರನ್ನು ಚಿಂತೆಗೀಡು ಮಾಡಿದೆ.

ಪ್ರಧಾನಿ ಮೋದಿ ಕಳೆದ ವಾರ ಮತ್ತು ಗೃಹ ಸಚಿವ ಅಮಿತ್‌ ಶಾ ಅವರು ಈಗಾಗಲೇ ರಾಜ್ಯಕ್ಕೆ ಎರಡು ಬಾರಿ ಭೇಟಿ ನೀಡಿ, ಚುನಾವಣೆಗೆ ಪಕ್ಷವನ್ನು ಸನ್ನದ್ಧಗೊಳಿಸುವ ಮತ್ತು ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸುವ ಕೆಲಸ ಮಾಡಿದ್ದಾರೆ. ಪಕ್ಷದ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಅವರೂ ಭೇಟಿ ನೀಡಿ ಚುರುಕು ಮುಟ್ಟಿಸಿದ್ದಾರೆ.

ಆದರೆ, ಅದಕ್ಕೆ ತಕ್ಕಂತೆ ಬಿಜೆಪಿ ರಾಜ್ಯ ಘಟಕವಾಗಲಿ, ಸರ್ಕಾರದಲ್ಲಿರುವವರಾಗಲಿ ಜನರ ಮಧ್ಯೆ ಹೋಗಿ ಪಕ್ಷದ ಪರವಾಗಿ ವಾತಾವರಣ ಸೃಷ್ಟಿಸುತ್ತಿಲ್ಲ ಎಂಬುದು ವರಿಷ್ಠರ ಚಿಂತೆಗೆ ಕಾರಣ ಎಂದು ಮೂಲಗಳು ಹೇಳಿವೆ.

ಈವರೆಗೆ ಪಕ್ಷ, ಸ್ವತಂತ್ರ ಸಂಸ್ಥೆ ಹಾಗೂ ಅಮಿತ್‌ ಶಾ ಕಡೆಯಿಂದ ಸೇರಿ ಮೂರು ಸಮೀಕ್ಷೆಗಳು ನಡೆದಿವೆ. ಅವುಗಳ ಪ್ರಕಾರ, ಸದ್ಯಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್‌ ಮಧ್ಯೆ ಸಮಬಲ ಕಂಡುಬರುತ್ತಿದೆ. ಜೆಡಿಎಸ್‌ ಕೂಡಾ ಗಣನೀಯ ಸಂಖ್ಯೆ ಸ್ಥಾನಗಳನ್ನು ಗೆಲ್ಲಲಿದ್ದು, ಪಕ್ಷೇತರರೂ ಕೆಲ ಸ್ಥಾನಗಳನ್ನು ಗೆಲ್ಲಲಿದ್ದಾರೆ ಎಂದು ಹೇಳಲಾಗಿದೆ.

‘ಬಿಜೆಪಿ ರಾಜ್ಯ ಘಟಕಕ್ಕೆ ಅಮಿತ್‌ ಶಾ 150 ಸ್ಥಾನ ಗಳಿಸುವ ಗುರಿ ನೀಡಿದ್ದಾರೆ. ರಾಜ್ಯದ ಕೆಲವು ನಾಯಕರು ವೇದಿಕೆಗಳಲ್ಲಿ ಅದನ್ನು ಜಪಿಸುವುದು ಬಿಟ್ಟರೆ, ಆ ನಿಟ್ಟಿನಲ್ಲಿ ಯಾವುದೇ ಕೆಲಸ ಆಗದಿರುವುದನ್ನು ವರಿಷ್ಠರು ಗಮನಿಸಿದ್ದಾರೆ. ಪಕ್ಷದೊಳಗೆ ಒಗ್ಗಟ್ಟೂ ಕಂಡು ಬರುತ್ತಿಲ್ಲ.



ಚುನಾವಣೆ ಬಂದಾಗ ವರಿಷ್ಠರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ ಎಂಬ ಭಾವನೆ ಬಹುತೇಕರಲ್ಲಿದೆ. ಹೆಚ್ಚಿನ ಶಾಸಕರು ತಮ್ಮ ಕ್ಷೇತ್ರಗಳನ್ನು ಭದ್ರಪಡಿಸಿಕೊಳ್ಳಲು ಏನೆಲ್ಲ ಮಾಡಬೇಕೋ ಅದರಲ್ಲಿ ಮಗ್ನರಾಗಿದ್ದಾರೆ’ ಎಂದು ಬಿಜೆಪಿ ಮೂಲಗಳು ಹೇಳಿವೆ.

‘ಪಕ್ಷದಲ್ಲಿ ಬಿ.ಎಸ್‌.ಯಡಿಯೂರಪ್ಪ ಈಗಲೂ ಪ್ರಭಾವಿ ಶಕ್ತಿ ಆಗಿದ್ದಾರೆ. ಆದರೆ, ಬಿಎಸ್‌ವೈ ಮತ್ತು ದೆಹಲಿಯಲ್ಲಿ ಪಕ್ಷದ ಪ್ರಮುಖ ಹುದ್ದೆಯಲ್ಲಿದ್ದು, ರಾಜ್ಯ ಬಿಜೆಪಿ ಮೇಲೆ ಹಿಡಿತ ಹೊಂದಿರುವ ನಾಯಕರ ಮಧ್ಯೆ ಹೊಂದಾಣಿಕೆ ಇಲ್ಲದೇ ಇರುವುದು ಕೂಡ ಪಕ್ಷದ ಓಟಕ್ಕೆ ತೊಡಕಾಗಿದೆ. ಇತ್ತೀಚೆಗೆ ನಡೆದ ವಿಧಾನ ಪರಿಷತ್‌ ಚುನಾವಣೆಯ ಫಲಿತಾಂಶದಲ್ಲಿ ಇದು ನಿಚ್ಚಳವಾಗಿ ಗೋಚರವಾಗಿದೆ. ಅಭ್ಯರ್ಥಿ ಆಯ್ಕೆ ಎಲ್ಲವೂ ದೆಹಲಿ ನಾಯಕರ ಮಾತಿನಂತೆಯೇ ನಡೆದಿತ್ತು. ಆದರೆ, ಸ್ಥಳೀಯವಾಗಿ ಸಹಕಾರ ದೊರಕದ ಕಾರಣ ಎರಡು ಸ್ಥಾನಗಳಲ್ಲಿ ಸೋಲಬೇಕಾಯಿತು’ ಎಂದು ಬಿಜೆಪಿ ನಾಯಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಪಕ್ಷದಲ್ಲಿ ಎಸ್‌.ಸಿ ಮೋರ್ಚಾ, ಒಬಿಸಿ, ರೈತ ಮತ್ತು ಅಲ್ಪಸಂಖ್ಯಾತರ ಮೋರ್ಚಾ ಕ್ರಿಯಾಶೀಲವಾಗಿವೆ. ಉಳಿದ ಮೋರ್ಚಾಗಳು ಅಷ್ಟು ಸಕ್ರಿಯವಾಗಿಲ್ಲ. ಹಿಂದೆ ಪಕ್ಷ ಅಧಿಕಾರ ಹಿಡಿಯಲು ಎಲ್ಲ ಮೋರ್ಚಾಗಳು ಸಕ್ರಿಯವಾಗಿ ಶ್ರಮ ಹಾಕುತ್ತಿದ್ದವು. ಈಗ ಸಂಘಟಿತ ಯತ್ನದ ಕೊರತೆ ಕಾಣುತ್ತಿದೆ ಎಂದೂ ಹೇಳಿದ್ದಾರೆ.

ಆರ್‌ಟಿಪಿಎಸ್‌: ಆರು ಘಟಕಗಳಲ್ಲಿ ವಿದ್ಯುತ್‌ ಉತ್ಪಾದನೆ ಸ್ಥಗಿತ

ಶಕ್ತಿನಗರ (ರಾಯಚೂರು ಜಿಲ್ಲೆ): ವಿದ್ಯುತ್‌ಗೆ ಬೇಡಿಕೆ ಇಲ್ಲದ ಕಾರಣ ಇಲ್ಲಿನ ಆರ್‌ಟಿಪಿಎಸ್‌ನ ಒಟ್ಟು 6 ವಿದ್ಯುತ್‌ ಘಟಕಗಳ ಉತ್ಪಾದನೆ ಕಾರ್ಯ ಸ್ಥಗಿತಗೊಂಡಿದೆ.

4ನೇ ಮತ್ತು 6ನೇ ಘಟಕದಲ್ಲಿ ಮಾತ್ರ 210 ಮೆಗಾವಾಟ್‌ ವಿದ್ಯುತ್‌ ಉತ್ಪಾದನೆ ಯಾಗುತ್ತಿದೆ ಎಂದು ಆರ್‌ಟಿಪಿಎಸ್‌ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಶಶಿಕಾಂತ್‌ ತಿಳಿಸಿದ್ದಾರೆ.

‘ಕರ್ನಾಟಕದಲ್ಲಿ ಪ್ರಸ್ತುತ 7 ಸಾವಿರ ಮೆಗಾವಾಟ್‌ ವಿದ್ಯುತ್‌ ಬೇಡಿಕೆ ಇದೆ. ಉತ್ತಮ ಮಳೆಯಾಗಿರುವುದರಿಂದ ಪವನ ವಿದ್ಯುತ್‌ನಿಂದ 3 ಸಾವಿರ ಮೆಗಾ ವಾಟ್‌, ಸೌರವಿದ್ಯುತ್‌ನಿಂದ 2 ಸಾವಿರ ಮೆಗಾವಾಟ್‌ ವಿದ್ಯುತ್‌ ಉತ್ಪಾದನೆ ಆಗುತ್ತಿದೆ. ಮಳೆಯಿಂದಾಗಿ ಬೇಡಿಕೆ ಇಲ್ಲದ ಕಾರಣ ಆರ್‌ಟಿಪಿಎಸ್‌ನ 6 ಘಟಕಗಳಲ್ಲಿ ತಾತ್ಕಾಲಿಕವಾಗಿ ವಿದ್ಯುತ್‌ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ’ ಎಂದಿದ್ದಾರೆ.

ಸುದ್ದಿ 2 ನಿಮಿಷ


‘ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ: ಇದೇ ವರ್ಷ ಕಾಮಗಾರಿ ಆರಂಭ’

ಹುಬ್ಬಳ್ಳಿ: ‘ನನೆಗುದಿಗೆ ಬಿದ್ದಿದ್ದ, ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಕಾಮಗಾರಿ ಇದೇ ವರ್ಷ ಆರಂಭವಾಗುವ ಎಲ್ಲ ಸಾಧ್ಯತೆ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಘಂಟಿಕೇರಿಯ ಸರ್ಕಾರಿ ಶಾಸಕರ ಮಾದರಿ ಶಾಲೆ ನಂ. 5ರಲ್ಲಿ ಭಾನುವಾರ ಸ್ಮಾರ್ಟ್‌ ಸಿಟಿ ಯೋಜನೆಯಡಿ ಮುಕ್ತಾಯಗೊಂಡ ವಿವಿಧ ಕಾಮಗಾರಿಗಳನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

‘ವಾಣಿಜ್ಯ ನಗರಿ ಹುಬ್ಬಳ್ಳಿ ಅಭಿವೃದ್ಧಿಗೆ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆ ಜಾರಿ ಅಗತ್ಯ. ಅದರಿಂದ ಬೆಲೆಕೇರಿ ಬಂದರು ಸಹ ಅಭಿವೃದ್ಧಿಯಾಗಲಿದೆ. ಯೋಜನೆಗಿದ್ದ ತೊಡಕುಗಳು ನಿವಾರಣೆಯಾಗುವ ಸಾಧ್ಯತೆಯಿದ್ದು, ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅನುಮತಿ ದೊರೆಯುವ ಅಂತಿಮ ಹಂತಕ್ಕೆ ಬಂದಿದೆ’ ಎಂದರು.

‘ರಾಜ್ಯದಲ್ಲಿ ಕೈಗೆತ್ತಿಕೊಂಡಿರುವ ಸ್ಮಾರ್ಟ್‌ ಸಿಟಿ ಯೋಜನೆ ಎರಡು ವರ್ಷದ ಹಿಂದೆಯೇ ಮುಗಿಯಬೇಕಿತ್ತು. ವಿಳಂಬವಾಗಿದೆ. ಏನೇ ಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ ಕಂಡುಕೊಂಡು, ಮಾರ್ಚ್‌ 31ರ ಒಳಗೆ ಎಲ್ಲ ಕಾಮಗಾರಿ ಮುಗಿಸಬೇಕು’ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.



ಬಿಜೆಪಿ ಮುಸಲ್ಮಾನರ ವೋಟು ಅವಲಂಬಿಸಿಲ್ಲ: ಈಶ್ವರಪ್ಪ

ಶಿವಮೊಗ್ಗ: ‘ಆರ್‌ಎಸ್‌ಎಸ್‌ ಬೈದರೆ ಸ್ವರ್ಗಕ್ಕೆ ಹೋಗಬಹುದೆಂದು ಭಾವಿಸಿರುವ ಕುಮಾರಸ್ವಾಮಿ, ವೃಥಾ ಆರೋಪ ಮಾಡುತ್ತಿದ್ದಾರೆ. ಅವರು ಸ್ವರ್ಗಕ್ಕೇ ಹೋಗಲಿ ಎಂಬುದೇ ನಮ್ಮ ಆಸೆ’ ಎಂದು ಶಾಸಕ ಕೆ.ಎಸ್‌.ಈಶ್ವರಪ್ಪ ಲೇವಡಿ ಮಾಡಿದರು.

ಬಿಜೆಪಿ ಸರ್ಕಾರಗಳ ರಚನೆಗೆ ಆರ್‌ಎಸ್‌ಎಸ್‌ ಪರ್ಸೆಂಟೇಜ್‌ ರೂಪದಲ್ಲಿ ಹಣ ಸಂಗ್ರಹಿಸುತ್ತಿದೆ ಎಂದು ಜೆಡಿಎಸ್‌ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಾಡಿದ್ದ ಆರೋಪಕ್ಕೆ ಭಾನುವಾರ ಪ್ರತಿಕ್ರಿಯಿಸಿದರು.

‘ಆರ್‌ಎಸ್‌ಎಸ್‌ಗೆ ಬೈಯ್ಯೋದು ಸಿದ್ದರಾಮಯ್ಯನ ಕೆಟ್ಟ ಚಾಳಿ ಆಗಿತ್ತು. ಅದೀಗ ಇವರಿಗೂ ಅಂಟಿಕೊಂಡಿದೆ. ‘ಆರ್‌ಎಸ್‌ಎಸ್‌ ಬೈದರೆ ಮುಸ್ಲಿಂರ ವೋಟು ಬರುತ್ತದೆ ಎಂಬ ಲೆಕ್ಕದಲ್ಲಿ ಕಾಂಗ್ರೆಸ್‌, ಜೆಡಿಎಸ್‌ನವರು ಇದ್ದಾರೆ. ಅವರೇ ವೋಟು ತೆಗೆದುಕೊಳ್ಳಲಿ. ಬಿಜೆಪಿಯವರು ಎಂದಿಗೂ ಮುಸ್ಲಿಮರ ಮತ ಅವಲಂಬಿಸಿಲ್ಲ’ ಎಂದರು.

‘ಬೇರೆ ಪಕ್ಷಗಳು ಶಾಸಕರನ್ನು ಶಿಸ್ತುಬದ್ಧವಾಗಿ, ವಿಶ್ವಾಸದಿಂದ ಇಟ್ಟುಕೊಂಡರೆ, ಸ್ವಾತಂತ್ರ್ಯ ಕೊಟ್ಟರೆ ಅವರೇಕೆ ಬಿಟ್ಟು ಹೋಗುತ್ತಾರೆ’ ಎಂದು ಅವರು ಮಹಾರಾಷ್ಟ್ರ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿದರು.

‘ವರ್ಷಾಂತ್ಯದೊಳಗೆ ನೌಕರರ ವೇತನ ಪರಿಷ್ಕರಣೆ ನಿರೀಕ್ಷೆ’

ಉಡುಪಿ: ‘ಡಿಸೆಂಬರ್‌ ಒಳಗೆ ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಸೌಲಭ್ಯ ಒದಗಿಸಿಕೊಡುವ ನಿಟ್ಟಿನಲ್ಲಿ ಸಂಘ ಬದ್ಧವಾಗಿದೆ’ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್‌.ಷಡಕ್ಷರಿ ಹೇಳಿದರು.



ಸಿ.ಎಸ್‌. ಷಡಕ್ಷರಿ

ಇಲ್ಲಿ ಜಿಲ್ಲಾ ಸರ್ಕಾರಿ ನೌಕರರ ವಾರ್ಷಿಕ ಸಮಾವೇಶದಲ್ಲಿ ಅವರು, 7ನೇ ವೇತನ ಆಯೋಗದ ರಚನೆ ಕುರಿತು ತಿಂಗಳಲ್ಲಿ ಸಮಿತಿ ರಚನೆಯಾಗಲಿದೆ. ವರ್ಷಾಂತ್ಯದೊಳಗೆ ಸೌಲಭ್ಯ ಕಲ್ಪಿಸಲು ಒತ್ತಾಯಿಸಲಾಗಿದೆ ಎಂದರು.

ಸರ್ಕಾರಿ ನೌಕರರಿಗೆ ನಗದು ರಹಿತ ಉಚಿತ ಆರೋಗ್ಯ ಚಿಕಿತ್ಸೆ ನೀಡುವ ಯೋಜನೆ ಶೀಘ್ರ ಜಾರಿಯಾಗಲಿದೆ. ನೌಕರರು ಹಾಗೂ ಅವಲಂಬಿತರಿಗೆ ಈ ಸೌಲಭ್ಯ ದೊರೆಯಲಿದೆ ಎಂದರು.

ಕೆಜಿಐಡಿ ಸೌಲಭ್ಯಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ ವಾರದೊಳಗೆ ಸಾಲದ ಮೊತ್ತ ಖಾತೆಗೆ ಜಮೆಯಾಗುವ ವ್ಯವಸ್ಥೆ ತಿಂಗಳೊಳಗೆ ಜಾರಿಗೆ ತರುವ ಚಿಂತನೆಯಿದೆ. 2019ರಿಂದ ಬಾಕಿ ಇರುವ ಕೆಜಿಐಡಿ ಬೋನಸ್‌ ಮೊತ್ತ ₹ 488 ಕೋಟಿ ವಾರದೊಳಗೆ ಬಿಡುಗಡೆ ಆಗಲಿದೆ. ಎನ್‌ಪಿಎಸ್‌ ಬದಲು ಹಳೆಯ ಪಿಂಚಣಿ ವ್ಯವಸ್ಥೆಯ ಮರುಜಾರಿ ಕುರಿತಂತೆ ಮುಖ್ಯಮಂತ್ರಿ ಅವರ ಜೊತೆಗೆ ಚರ್ಚಿಸಲಾಗಿದೆ ಎಂದು ಷಡಕ್ಷರಿ ಅವರು ತಿಳಿಸಿದರು.

‘ಮೀಸಲಾತಿ ಭ್ರಮೆ ಮತ್ತು ವಾಸ್ತವ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಸಿದ್ದರಾಮಯ್ಯ ಆಕ್ಷೇಪ

‘ಮೇಲ್ಜಾತಿಗೆ ಮೀಸಲಾತಿ: ಮಾನದಂಡವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ. ಅದೇ ಆರ್ಥಿಕವಾಗಿ ಹಿಂದುಳಿದಿರುವ ಮೇಲ್ಜಾತಿಗೆ ಮೀಸಲಾತಿ ಕಲ್ಪಿಸುವ ಮಾನದಂಡ ಸಂವಿಧಾನದಲ್ಲಿ ಎಲ್ಲಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ಹೈಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನದಾಸ್‌ ಅವರ ‘ಮೀಸಲಾತಿ ಭ್ರಮೆ ಮತ್ತು ವಾಸ್ತವ’ ಕೃತಿ (ಕನ್ನಡ ಹಾಗೂ ಇಂಗ್ಲಿಷ್‌ ಆವೃತ್ತಿ) ಬಿಡುಗಡೆಗೊಳಿಸಿ ಮಾತನಾಡಿದರು.

‘ನರೇಂದ್ರ ಮೋದಿ ಸಂವಿಧಾನಕ್ಕೆ ವಿರುದ್ಧವಾಗಿ ಅಂಥವರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸಿದ್ದರೂ ಹಿಂದುಳಿದವರು ಮೌನ ವಹಿಸಿದ್ದಾರೆ. ಗುಲಾಮಗಿರಿಯ ಮನಃಸ್ಥಿತಿ ಒಳ್ಳೆಯದಲ್ಲ. ಶಿಕ್ಷಣ ಪಡೆಯುವುದು ಮಾತ್ರವಲ್ಲ, ಸ್ವಾಭಿಮಾನ ಬೆಳೆಸಿಕೊಳ್ಳಬೇಕು. ಸ್ವಾಭಿಮಾನ ಇಲ್ಲದಿದ್ದರೆ ಗೌರವದಿಂದ ನಡೆಯಲು ಅಸಾಧ್ಯ. ಮೌನ ತ್ಯಜಿಸಿ ಪ್ರಶ್ನಿಸುವ, ಹೋರಾಟದ ಗುಣ ಬೆಳೆಸಿಕೊಳ್ಳಬೇಕು’ ಎಂದು ಅವರು ಹೇಳಿದರು.

‘ಮೀಸಲಾತಿ ಭಿಕ್ಷೆ ಅಲ್ಲ. ಅದು ಸಾಂವಿಧಾನಿಕ ಹಕ್ಕು. ನ್ಯಾಯಾಲಯದ ಅಸ್ಪಷ್ಟ ತೀರ್ಪುಗಳಿಂದ ಶೋಷಿತ ಸಮುದಾಯಕ್ಕೆ ಅನ್ಯಾಯ



ಬೆಂಗಳೂರಿನಲ್ಲಿ ಭಾನುವಾರ ‘ಮೀಸಲಾತಿ ಭ್ರಮೆ ಮತ್ತು ವಾಸ್ತವ’ ಕೃತಿಯನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. (ಎಡದಿಂದ) ಬಿ.ರಾಜಶೇಖರಮೂರ್ತಿ, ಬಿ.ಎಂ.ಹನೀಫ್‌, ಬಂಜಗೆರೆ ಜಯಪ್ರಕಾಶ, ಲೇಖಕ ಹಾಗೂ ಹೈಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ ದಾಸ್‌, ಹಂಸಲೇಖ, ಟಿ.ಆರ್‌.ಚಂದ್ರಶೇಖರ್‌ ಹಾಜರಿದ್ದರು

ಆಗುತ್ತಿದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಬೇಕಿದೆ. ಬರೀ ಬಾಯಿಮಾತಿನ ಸಮಾನತೆ ಪ್ರತಿಪಾದನೆಯಿಂದ ಬದಲಾವಣೆ ಅಸಾಧ್ಯ. ಸ್ವಾತಂತ್ರ್ಯ ಲಭಿಸಿ, 75 ವರ್ಷವಾದರೂ ಶೋಷಿತರ ಬದುಕಿನಲ್ಲಿ ಬದಲಾವಣೆಯ ಬೆಳಕು ಕಂಡಿಲ್ಲ. ಎಸ್‌.ಟಿ, ಎಸ್‌.ಸಿ ಸಮುದಾಯಕ್ಕೆ ಸಂವಿಧಾನಬದ್ಧ ಮೀಸಲಾತಿ ಇತ್ತು. ಆದರೆ, ಹಿಂದುಳಿದ ವರ್ಗಕ್ಕೆ 1990ರ ವೇಳೆಗೆ ಶೇ 27ರಷ್ಟು ಮೀಸಲಾತಿ ಲಭಿಸಿತ್ತು. ಅದನ್ನೂ ನಾಶಪಡಿಸುವ ಹುನ್ನಾರ ನಡೆಯುತ್ತಿದೆ’ ಎಂದರು.

ಚಿಂತಕ ಬಂಜಗೆರೆ ಜಯಪ್ರಕಾಶ ಮಾತನಾಡಿ, ‘ಮೀಸಲಾತಿ ವ್ಯವಸ್ಥೆಯಿಂದ ದೇಶ ಹಿಂದುಳಿದಿದೆ ಎಂದು ಕೆಲವರು ವಾದಿಸುತ್ತಿದ್ದಾರೆ. ಮೀಸಲಾತಿಯ ಬಗ್ಗೆ ಮತ್ಸರ ಏಕೆ’ ಎಂದು ಪ್ರಶ್ನಿಸಿದರು.

ಹೈಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್‌, ‘ವರ್ಗ, ಜಾತಿಯ ಅಸಮಾನತೆ ಸಮಾಜದಲ್ಲಿ ಬೆರೆತುಹೋಗಿದೆ. ಪ್ರತಿಭಟಿಸಿದರೆ ಬಂಧಿಸುವ ಮೂಲಕ ಧ್ವನಿಯನ್ನೇ ಅಡಗಿಸುತ್ತಾರೆ. ಇಂತಹ ಸಂದರ್ಭದಲ್ಲಿ ನ್ಯಾಯಾಂಗದ ಪ್ರತಿಕ್ರಿಯೆ ನೋವು ತರಿಸುತ್ತಿದೆ’ ಎಂದು ಹೇಳಿದರು.

ಸಂಗೀತ ನಿರ್ದೇಶಕ ಹಂಸಲೇಖ ಅವರು, ‘ಪರರಿಗೆ ಕೀ ಕೊಟ್ಟು ಮನೆ ಕಾಯುತ್ತಿದ್ದೇವೆ. ಹಂಗಿಲ್ಲದ ಮೀಸಲಾತಿ ಬೇಕಿದೆ. ಸಂವಿಧಾನ, ಪ್ರಜಾಪ್ರಭುತ್ವ ಕಾವ್ಯವಾಗಬೇಕು. ನಾಗಮೋಹನ ದಾಸ್‌ ಅವರ ಕೃತಿಯನ್ನು 22 ಗಾಯಕರ ಮೂಲಕ ಕಾವ್ಯದ ರೂಪದಲ್ಲಿ ಚಿರಂತನ ಆಗಿಸಲು ಪ್ರಯತ್ನಿಸಲಾಗುವುದು’ ಎಂದರು.

ಸಮಾಜದಲ್ಲಿನ ತಾರತಮ್ಯಗಳ ವಿರುದ್ಧ ಧ್ವನಿಯೆತ್ತಿದರೆ ಬಿಜೆಪಿಯ 20 ಮಂದಿ ನನ್ನ ಮೇಲೆ ಮುಗಿಬೀಳುತ್ತಾರೆ. ಮೌನವಾಗಿದ್ದರೆ ಹಿಂದುಳಿದವರಿಗೆ ನಷ್ಟ

ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷ ನಾಯಕ

ಪುಸ್ತಕ ಪರಿಚಯ

- **ಕೃತಿ:** ಮೀಸಲಾತಿ ಭ್ರಮೆ ಮತ್ತು ವಾಸ್ತವ
- **ಲೇಖಕ:** ಎಚ್‌.ಎನ್‌. ನಾಗಮೋಹನ ದಾಸ್‌
- **ಪ್ರಕಾಶನ:** ಜನಪ್ರಕಾಶನ
- **ಪುಟಗಳು:** 134
- **ಬೆಲೆ:** 120

ಪತ್ರಕರ್ತ ಬಿ.ಎಂ.ಹನೀಫ್‌ ಅವರು, ‘ಶೋಷಿತರ ಅನುಕೂಲಕ್ಕಿರುವ ಶೇ 2ರ ಮೀಸಲಾತಿ ಮೇಲೆ ಕೆಲವರ ಕಣ್ಣುಬಿದ್ದಿದೆ. ಮೀಸಲಾತಿ ವ್ಯವಸ್ಥೆ ಹಳ್ಳ ಹಿಡಿಸುವ ಪ್ರಯತ್ನಗಳು ನಡೆಯುತ್ತಿವೆ. ಮುಸ್ಲಿಂ ಪ್ರಾಬಲ್ಯದ ಕ್ಷೇತ್ರದಲ್ಲಿ ಎಸ್‌.ಸಿ, ಎಸ್‌.ಟಿಗೆ ಮೀಸಲಾತಿ ಕಲ್ಪಿಸಿ ಈ ಸಮುದಾಯಗಳ ನಡುವೆ ವೈರತ್ವ ಮೂಡಿಸಲಾಗುತ್ತಿದೆ’ ಎಂದರು.

ಆರ್ಥಿಕ ತಜ್ಞ ಟಿ.ಆರ್‌. ಚಂದ್ರಶೇಖರ, ಜನಪ್ರಕಾಶನ ಸಂಸ್ಥೆಯ ಬಿ.ರಾಜಶೇಖರಮೂರ್ತಿ, ಗ್ರಾಮ ಭಾರತ ಸಾಂಸ್ಕೃತಿಕ ವೇದಿಕೆಯ ಕಿಗ್ಗ ರಾಜಶೇಖರ್‌ ಹಾಜರಿದ್ದರು.

ಮಂತ್ರಾಲಯ ಮಠದ ಹೆಸರಿನಲ್ಲಿ ವಂಚನೆ

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಪರಿಮಳ ಪ್ರಸಾದ ಹೆಸರಿನಲ್ಲಿ ಹಾಗೂ ನಕಲಿ ವೆಬ್‌ಸೈಟ್‌ ಸೃಷ್ಟಿಸಿ ನೆರವಿನ ನೆಪದಲ್ಲಿ ಭಕ್ತರಿಗೆ ವಂಚನೆ ಮಾಡಲಾಗುತ್ತಿದೆ.

ಕೋವಿಡ್‌ ನಂತರ ಅರ್ಚಕರು, ಬಡವರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ನಂಬಿಸಿ ನಕಲಿ ವೆಬ್‌ಸೈಟ್‌ ಸೃಷ್ಟಿಸಿ, ನೆರವಿಗಾಗಿ ಹಣ ಹಾಕುವಂತೆ ಮನವಿ ಮಾಡಿ ನೆರವು ಪಡೆಯಲಾಗುತ್ತಿದೆ. ಮಂತ್ರಾಲಯ ಮಠದ ಅಭಿವೃದ್ಧಿಗಾಗಿ ಭಕ್ತರು ಫೋನ್‌ ಪೇ ಮಾಡುವಂತೆ ವಾಟ್ಸ್‌ಆ್ಯಪ್‌ ಗ್ರೂಪ್‌ಗಳಲ್ಲೂ ಸಂದೇಶ ಹರಿಬಿಡಲಾಗಿದೆ.

‘ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಮಂತ್ರಾಲಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ’ ಎಂದು ಶ್ರೀಮಠದ ವ್ಯವಸ್ಥಾಪಕ ಶ್ರೀನಿವಾಸರಾವ್‌ ತಿಳಿಸಿದ್ದಾರೆ.



ಹಾಸನೂರು ಬಳಿ ಕಾರಿನ ಮೇಲೆ ದಾಳಿಗೆ ಮುಂದಾದ ಆನೆಗಳು

ವಾಹನಗಳ ಮೇಲೆ ದಾಳಿಗೆ ಯತ್ನಿಸಿದ ಆನೆಗಳು

ಚಾಮರಾಜನಗರ: ನಗರದಿಂದ ತಮಿಳುನಾಡಿನ ಸತ್ಯಮಂಗಲಕ್ಕೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ (ದಿಂಡಿಗಲ್‌) ಹಾಸನೂರು ಬಳಿ ಎರಡು ಆನೆಗಳು ವಾಹನಗಳ ಮೇಲೆ ದಾಳಿಗೆ ಯತ್ನಿಸಿವೆ.

ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದ ಹಾಸನೂರು ಬಳಿ ಶುಕ್ರವಾರ ಘಟನೆ ನಡೆದಿದೆ. ಇದು ಬಿಆರ್‌ಟಿ ಅರಣ್ಯದ ಗಡಿ ದಾಟಿದ ಕೆಲವೇ ಕಿ.ಮೀ ದೂರದಲ್ಲಿದೆ. ಅದೃಷ್ಟವಶಾತ್‌ ಪ್ರಾಣಾಪಾಯ ಸಂಭವಿಸಿಲ್ಲ.

ಮರಿಯಾನೆಯೊಂದಿಗಿದ್ದ ಹೆಣ್ಣಾನೆಗಳು ವಾಹನಗಳ ಮೇಲೆ ಎರಗಲು ಯತ್ನಿಸಿವೆ. ಒಂದು ಕಾರಿಗೆ ಸ್ವಲ್ಪ ಜಖಂಗೊಂಡಿದೆ. ಘಟನೆ ಶುಕ್ರವಾರ ನಡೆದಿರುವುದನ್ನು ಬಿಆರ್‌ಟಿಯ ಪುಣಜನೂರು ವಲಯದ ಅರಣ್ಯ ಅಧಿಕಾರಿ ‘ಪ್ರಜಾವಾಣಿ’ಗೆ ದೃಢಪಡಿಸಿದ್ದಾರೆ. ಈ ಕುರಿತ ವಿಡಿಯೊ ಜಾಲತಾಣದಲ್ಲಿ ಹರಿದಾಡಿದೆ.

ಮರಿಯೊಂದಿಗೆ ರಸ್ತೆಯಲ್ಲಿ ಬರುತ್ತಿದ್ದ ಆನೆಗಳು ಬೊಲೆರೊ ಹಾಗೂ ಕಾರೊಂದರ ಮೇಲೆ ದಾಳಿಗೆ ಮುಂದಾಗುವ ದೃಶ್ಯ ಇದೆ. ಲಾರಿಯೊಂದನ್ನು ಹಿಂದಿನಿಂದ ಅಲುಗಾಡಿಸುವುದು, ಎರಡೂ ಆನೆಗಳು ಕಾರಿಗೆ ಹಾನಿ ಮಾಡುವುದು, ಆ ಕಾರಿನ ಹಿಂಬದಿ ಸೀಟಿನಲ್ಲಿದ್ದ ಪ್ರಯಾಣಿಕರೊಬ್ಬರು ಹೊರಗೆ ಓಡುತ್ತಿರುವ ದೃಶ್ಯಗಳು ವಿಡಿಯೊ ತುಣುಕಿನಲ್ಲಿದೆ.

‘ವಿಡಿಯೊ ನೋಡಲು ಕೋಡ್‌ ಸ್ಕ್ಯಾನ್‌ ಮಾಡಿ’
ಪ್ರಜಾವಾಣಿ ನೋಡಿಯೊ

ಈ ಘಟನೆಯಿಂದಾಗಿ ಅರ್ಧ ಗಂಟೆಗೂ ಹೆಚ್ಚು ಕಾಲ ವಾಹನಗಳ ಸಂಚಾರಕ್ಕೆ ತೊಂದರೆಯಾಗಿತ್ತು.

‘ಈ ಹೆದ್ದಾರಿಯಲ್ಲಿ ಕಬ್ಬಿನ ಲಾರಿಗಳು ಸಂಚರಿಸುತ್ತಿದ್ದು, ಕಬ್ಬಿನ ಆಸೆಗೆ ಆನೆಗಳು ರಸ್ತೆ ಬಳಿಯೇ ಇರುತ್ತವೆ. ನಮ್ಮ ಭಾಗದಲ್ಲಿ ಆನೆಗಳು ಇರುವುದು ಕಂಡು ಬಂದರೆ ಅವುಗಳನ್ನು ಕಾಡಿನ ಒಳಕ್ಕೆ ಓಡಿಸಲು ಕ್ರಮ ವಹಿಸುತ್ತೇವೆ’ ಎಂದು ಪುಣಜನೂರು ವಲಯ ಅರಣ್ಯ ಅಧಿಕಾರಿ ನಿಸಾರ್‌ ಅಹಮದ್‌ ತಿಳಿಸಿದರು.

ಅನರ್ಹ ಕಂಪನಿಗಳಿಗೆ ‘ಮನ್ನಣೆ’ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳಪೆ ಔಷಧಿ ಪೂರೈಸಿ, ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿ ಇತರ ರಾಜ್ಯಗಳಲ್ಲಿ ಕಪ್ಪುಪಟ್ಟಿ ಸೇರಿರುವ ಕೆಲವು ಕಂಪನಿಗಳಿಗೆ ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್‌) ಅಧಿಕಾರಿಗಳು ‘ಅನುಕೂಲ’ ಮಾಡಿಕೊಡುತ್ತಿದ್ದಾರೆ’ ಎಂಬ ದೂರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಚೇರಿ ತಲುಪಿದೆ.

‘ರಾಜ್ಯದ ಸರ್ಕಾರಿ ಆಸ್ಪತ್ರೆಗಳು, ಚಿಕಿತ್ಸಾಲಯಗಳಿಗೆ ಪೂರೈಸಲು ₹ 45 ಕೋಟಿ ಮೊತ್ತದಲ್ಲಿ ಔಷಧಿ ಮತ್ತು ಉಪಕರಣಗಳ ಖರೀದಿಗೆ ಟೆಂಡರ್‌ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೇಕಡ 15 ರಷ್ಟು ಲಂಚ ಪಡೆದು ಅನರ್ಹ ಕಂಪನಿಗಳಿಗೆ ಕಾರ್ಯಾದೇಶ ನೀಡಲಾಗುತ್ತಿದೆ’ ಎಂಬ ಆರೋಪ ಚೆನ್ನೈ ನಿವಾಸಿ ಶರವಣನ್‌ ಶಿವಕುಮಾರ್‌ ಎಂಬುವವರ ಹೆಸರಿನಲ್ಲಿ ಸಲ್ಲಿಸಿರುವ ದೂರಿನಲ್ಲಿದೆ. ಮುಖ್ಯಮಂತ್ರಿಯವರ ಜತೆಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್‌, ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಿರಿಯ ಅಧಿಕಾರಿಗಳು, ಲೋಕಾಯುಕ್ತ ಹಾಗೂ ಸಿಬಿಐಗೆ ದೂರಿನ ಪ್ರತಿಯನ್ನು ರವಾನಿಸಲಾಗಿದೆ.

‘ಕಪ್ಪುಪಟ್ಟಿಗೆ ಸೇರಿರುವ ಕಂಪನಿಗಳಿಗೆ ಗುತ್ತಿಗೆ ನೀಡುವಂತಿಲ್ಲ ಎಂಬ ಷರತ್ತು ಟೆಂಡರ್‌ ಅಧಿಸೂಚನೆಯಲ್ಲೇ ಇದೆ. ಉತ್ತರ ಪ್ರದೇಶ ನೊಯ್ಡಾದಲ್ಲಿ ಕೇಂದ್ರ ಕಚೇರಿ ಹೊಂದಿರುವ ಒಂದು ಕಂಪನಿಯನ್ನು ಛತ್ತೀಸ್‌ಗಢ ರಾಜ್ಯ ಸರ್ಕಾರ ಕಪ್ಪುಪಟ್ಟಿಗೆ ಸೇರಿಸಿತ್ತು. ಆದರೆ, ಇದೇ ಕಂಪನಿಗೆ ಕೆಎಸ್‌ಎಂಎಸ್‌ಸಿಎಲ್‌ ₹ 25 ಕೋಟಿ ಮೌಲ್ಯದ ಔಷಧಿಗಳ ಸರಬರಾಜಿಗೆ ಕಾರ್ಯಾದೇಶ ನೀಡಿದೆ. ಸದರಿ ಕಂಪನಿ ಕಪ್ಪುಪಟ್ಟಿಗೆ ಸೇರಿಸುವ ಆದೇಶಕ್ಕೆ ತಡೆಯಾಜ್ಞೆ ತರುವವರೆಗೂ ಕಾದು, ನಂತರ ಕಾರ್ಯಾದೇಶ ನೀಡಲಾಗಿದೆ’ ಎಂಬ ಆರೋಪ ದೂರಿನಲ್ಲಿದೆ.

‘ಮಧ್ಯಪ್ರದೇಶ ಸರ್ಕಾರವು ಕಪ್ಪುಪಟ್ಟಿಗೆ ಸೇರಿಸಿರುವ ನಾಲ್ಕು ಕಂಪನಿಗಳಿಗೆ ₹ 25 ಕೋಟಿ ಮೌಲ್ಯದ ಮಾತ್ರೆಗಳನ್ನು ಪೂರೈಕೆ ಮಾಡಲು ಕಾರ್ಯಾದೇಶ ನೀಡಲಾಗಿದೆ. ಈ ಪೈಕಿ ಕೆಲವು ಕಂಪನಿಗಳು ಅಷ್ಟು ಪ್ರಮಾಣದ ಮಾತ್ರ ಪೂರೈಸುವ ಸಾಮರ್ಥ್ಯವನ್ನೇ ಹೊಂದಿಲ್ಲ. ಕಾರ್ಯಾದೇಶ ನೀಡಿದ ಬಳಿಕ ಪೂರೈಕೆ ಅವಧಿ ವಿಸ್ತರಿಸಲಾಗಿದೆ. ಔಷಧಿ ಪೂರೈಕೆಯಲ್ಲಿ ಕರ್ನಾಟಕದ ಸಣ್ಣ ಉದ್ಯಮಗಳಿಗೆ ಶೇಕಡ 15ರಷ್ಟು ಗುತ್ತಿಗೆ ನೀಡಬೇಕೆಂಬ ನೀತಿ ಉಲ್ಲಂಘಿಸಿ ಈ ಕಂಪನಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ’ ಎಂದಿದ್ದಾರೆ.

ಎರಡು ಕಂಪನಿಗಳು ಕಳಪೆ ಗುಣಮಟ್ಟದ ಮಾತ್ರೆಗಳನ್ನು ಪೂರೈಸಿರುವುದು ಇದೇ ಫೆಬ್ರುವರಿಯಲ್ಲಿ ಪತ್ತೆಯಾಗಿತ್ತು. ಆ ಕಂಪನಿಗಳನ್ನು ಕಾನೂನಿನ ಪ್ರಕಾರ, ಕಪ್ಪುಪಟ್ಟಿಗೆ ಸೇರಿಸಬೇಕಿತ್ತು. ಆದರೆ, ನಿಗಮದ ಅಧಿಕಾರಿಗಳು ಕಂಪನಿಗಳ ಜತೆ ಕೈಜೋಡಿಸಿದ್ದು, ಕಪ್ಪುಪಟ್ಟಿಗೆ ಸೇರಿಸುವ ಪ್ರಕ್ರಿಯೆಯನ್ನು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

‘ವಾರ್ಷಿಕ ₹ 10 ಕೋಟಿ ವಹಿವಾಟು ನಡೆಸಿರುವ ಕಂಪನಿಯೊಂದಕ್ಕೆ ಮೂರು ತಿಂಗಳ ಅವಧಿಯಲ್ಲಿ ₹38 ಕೋಟಿ ಮೌಲ್ಯದ ಸೂಜಿಗಳನ್ನು ಪೂರೈಕೆ ಮಾಡಲು ಕಾರ್ಯಾದೇಶ ನೀಡಲಾಗಿದೆ. ₹ 10 ಕೋಟಿ ವಹಿವಾಟಿಗೆ ಸಂಬಂಧಿಸಿದಂತೆಯೂ ಆ ಕಂಪನಿ ಸಲ್ಲಿಸಿರುವ ದಾಖಲೆಗಳು ಶಂಕಾಸ್ಪದವಾಗಿವೆ. ಇನ್ನೊಂದು ಪ್ರಕರಣದಲ್ಲಿ ಒಂದು ಕಂಪನಿ ಪೂರೈಸುತ್ತಿರುವ ಐವಿ–ಫ್ಲೂಯಿಡ್‌ ಗುಣಮಟ್ಟದ ಕುರಿತು ಹಲವು ವೈದ್ಯರು ದೂರು ನೀಡಿದ್ದಾರೆ’ ಎಂದು ದೂರಿದ್ದಾರೆ.

‘ಖರೀದಿಯಲ್ಲಿ ಕಾನೂನು ಉಲ್ಲಂಘಿಸಿಲ್ಲ’

‘ಔಷಧಿ ಖರೀದಿ ಟೆಂಡರ್‌ನಲ್ಲಿ ಗುತ್ತಿಗೆ ಪಡೆಯಲು ವಿಫಲವಾದ ಕಂಪನಿಗಳಿಂದಲೇ ಇಂತಹ ದೂರು ಸಲ್ಲಿಕೆಯಾಗಿರುವ ಅನುಮಾನವಿದೆ. ಕೆಎಸ್‌ಎಂಎಸ್‌ಸಿಎಲ್‌ ಕಾನೂನಿನ ಪ್ರಕಾರ ಟೆಂಡರ್‌ ಪ್ರಕ್ರಿಯೆ ನಡೆಸಿ ಕಾರ್ಯಾದೇಶ ನೀಡಿದೆ. ಒಂದು ಕಂಪನಿಯನ್ನು ಛತ್ತೀಸ್‌ಗಢ ಸರ್ಕಾರ ಕಪ್ಪುಪಟ್ಟಿಯಲ್ಲಿ ಮುಂದುವರಿಸಿರುವುದು ಖಚಿತವಾದ ಬಳಿಕ 40 ಔಷಧಿಗಳ ಪೂರೈಕೆಗೆ ನೀಡಿದ್ದ ಕಾರ್ಯಾದೇಶ ವಾಪಸ್‌ ಪಡೆಯಲಾಗಿದೆ’ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎನ್‌.ಎಂ. ನಾಗರಾಜ ಪ್ರತಿಕ್ರಿಯಿಸಿದರು.

ಪ್ರಕಟವಾಗದ 2017ನೇ ಸಾಲಿನ ಮುಖ್ಯಪರೀಕ್ಷೆ ಫಲಿತಾಂಶ • 11 ವರ್ಷಗಳಲ್ಲಿ 4 ಅಧಿಸೂಚನೆ

ಕೆಎಎಸ್‌ ಹುದ್ದೆ: ಆಕಾಂಕ್ಷಿಗಳಲ್ಲಿ ಹತಾಶೆ

• ರಾಜೇಶ್‌ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2017ನೇ ಸಾಲಿನ ಗೆಜೆಟೆಡ್‌ ಪ್ರೊಬೇಷನರಿ 106 ಹುದ್ದೆಗಳ ನೇಮಕಾತಿಗೆ ಮುಖ್ಯಪರೀಕ್ಷೆ ನಡೆಸಿ 15 ತಿಂಗಳು ಕಳೆದಿವೆ. 2021ರ ಫೆಬ್ರುವರಿಯಲ್ಲಿ ನಡೆದ ಆ ಪರೀಕ್ಷೆಯ ಫಲಿತಾಂಶ ಇನ್ನೂ ಪ್ರಕಟಿಸಿಲ್ಲ. ಇನ್ನೊಂದೆಡೆ, ಐದು ವರ್ಷ ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸದ ರಾಜ್ಯ ಸರ್ಕಾರದ ನಡೆ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಲ್ಲಿ ಹತಾಶೆ ಮೂಡಿಸಿದೆ.

2018, 2019, 2020, 2021, 2022– ಈ ಐದು ಸಾಲುಗಳಲ್ಲಿ ಕೆಪಿಎಸ್‌ಸಿ ಪರೀಕ್ಷೆಗಳು ನಡೆದಿರಲಿಲ್ಲ.

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಪ್ರತಿವರ್ಷ ಕೇಂದ್ರ ನಾಗರಿಕ ಸೇವೆಯ (ಐಎಎಸ್‌, ಐಪಿಎಸ್‌) ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿ ವರ್ಷದೊಳಗೆ ಕ್ರಮಬದ್ಧವಾಗಿ ಪ್ರಕ್ರಿಯೆ ಪೂರ್ಣಗೊಳಿಸುತ್ತಿದೆ. ಆದರೆ ಇಲ್ಲಿ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ತೋರಿಸುತ್ತಿದೆ ಎಂದು ಆಕಾಂಕ್ಷಿಗಳು ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಒಂದು ವರ್ಷದ ಗೆಜೆಟೆಡ್‌ ಪ್ರೊಬೇಷನರಿ ಹುದ್ದೆಗಳ ಅಧಿಸೂಚನೆಯ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕೆಪಿಎಸ್‌ಸಿ, ಎರಡು ವರ್ಷಕ್ಕೂ ಹೆಚ್ಚು ಅವಧಿ ತೆಗೆದುಕೊಳ್ಳುತ್ತಿದೆ. ಅಷ್ಟೇ ಅಲ್ಲ, ಅಕ್ರಮ, ಭ್ರಷ್ಟಾಚಾರ ಸೇರಿ ವಿವಿಧ ಕಾರಣಗಳಿಗೆ ಬಹುತೇಕ ನೇಮಕಾತಿ ಪ್ರಕ್ರಿಯೆಗಳು ವಿವಿಧ ನ್ಯಾಯಾಲಯಗಳ ಅಂಗಳಗಳಲ್ಲಿವೆ.

ಗೆಜೆಟೆಡ್‌ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ 2011ರಿಂದ ಈವರೆಗೆ 11 ವರ್ಷ ಅವಧಿಯಲ್ಲಿ ಕೆಪಿಎಸ್‌ಸಿ ನಾಲ್ಕು ಬಾರಿ ಅಧಿಸೂಚನೆ ಹೊರಡಿಸಿದೆ. ಮೂರು ಬಾರಿ ಪ್ರಕ್ರಿಯೆ ಪೂರ್ಣಗೊಳಿಸಿದೆ. 2011ನೇ ಸಾಲಿನ 362 ಹುದ್ದೆಗಳ ನೇಮಕಾತಿಯಲ್ಲಿ ವ್ಯಾಪಕ ಅಕ್ರಮ, ಭ್ರಷ್ಟಾಚಾರ, ಸ್ವಜನಪಕ್ಷಪಾತ ನಡೆದಿದೆ ಎಂಬ ಆರೋಪದ ಕಾರಣಕ್ಕೆ ಇಡೀ ಆಯ್ಕೆ ಪಟ್ಟಿಯನ್ನು ಹೈಕೋರ್ಟ್‌ ರದ್ದುಪಡಿಸಿತ್ತು. ಅದೇ ತೀರ್ಪನ್ನು ಸುಪ್ರೀಂ ಕೋರ್ಟ್‌ ಸಹ ಎತ್ತಿ ಹಿಡಿದಿತ್ತು.

ಆದರೆ, ಅಕ್ರಮಗಳಿಗೆ ಸಕ್ರಮದ ಮುದ್ರೆಯೊತ್ತಲು ಕಾಯ್ದೆ ರೂಪಿಸಿದ ಸರ್ಕಾರವು ಈಗ ನೇಮಕಾತಿ ಆದೇಶವನ್ನೂ ನೀಡಿದೆ. ಅದನ್ನು ಪ್ರಶ್ನಿಸಿ ಕೆಲವರು ಮತ್ತೆ ಕೋರ್ಟ್‌ ಮೆಟ್ಟಿಲೇರಿದ್ದಾರೆ. 2015ನೇ ಸಾಲಿನಲ್ಲಿ ಅಂಕಗಳನ್ನು ತಿದ್ದಿದ ಆರೋಪದಲ್ಲಿ 50ಕ್ಕೂ ಹೆಚ್ಚು ಅಭ್ಯರ್ಥಿಗಳು ಹೈಕೋರ್ಟ್‌ ಮೆಟ್ಟಿಲೇರಿದ್ದಾರೆ. ಈ ಎರಡು ವರ್ಷ ಆಯ್ಕೆಯಾದವರಿಗೆ ಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟು ನೇಮಕಾತಿ ಆದೇಶ ನೀಡಲಾಗಿದೆ.

2011ರ ಬಳಿಕದ ಕೆಎಎಸ್‌ ನೇಮಕಾತಿ ಸ್ಥಿತಿಗತಿ

ಅಧಿಸೂಚನೆ	ಹುದ್ದೆ	ಮುಖ್ಯ ಪರೀಕ್ಷೆ ನಡೆದದ್ದು	ಫಲಿತಾಂಶ ಪ್ರಕಟ	ಸದ್ಯದ ಸ್ಥಿತಿ
2011	362	2012 ಡಿ.15– 2013 ಜ. 6	2013 ಮಾರ್ಚ್‌ 20	ಹೈಕೋರ್ಟ್‌, ಸುಪ್ರೀಂ ಕೋರ್ಟ್‌ ಆಯ್ಕೆ ಪಟ್ಟಿ ರದ್ದುಪಡಿಸಿದರೂ ಅಕ್ರಮ ಸಕ್ರಮಗೊಳಿಸಲು ಸರ್ಕಾರದಿಂದ ಕಾಯ್ದೆ
2015	464	2015 ಸೆಪ್ಟೆಂಬರ್‌	2017 ಏಪ್ರಿಲ್‌	ವಿವಾದ ಇಲ್ಲದೆ ನೇಮಕಾತಿ
2017	428	2017 ಡಿಸೆಂಬರ್‌	2020 ಜನವರಿ	ಮುಖ್ಯಪರೀಕ್ಷೆಯಲ್ಲಿ ಅಂಕ ತಿದ್ದಿದ ಆರೋಪ, ಹೈಕೋರ್ಟ್‌ನಲ್ಲಿ ಪ್ರಕರಣ
2020	106	2021 ಫೆಬ್ರುವರಿ	—	15 ತಿಂಗಳು ಕಳೆದರೂ ಪ್ರಕಟವಾಗದ ಮುಖ್ಯ ಪರೀಕ್ಷೆ ಫಲಿತಾಂಶ

106 ಹುದ್ದೆಗಳಿಗೆ ನಡೆದ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಅತಿ ಶೀಘ್ರದಲ್ಲಿ ಫಲಿತಾಂಶ ಪ್ರಕಟಿಸುತ್ತೇವೆ

ರಿಚರ್ಡ್‌ ವಿನ್ಸೆಂಟ್‌ ಡಿಸೋಜಾ
ಕಾರ್ಯದರ್ಶಿ, ಕೆಪಿಎಸ್‌ಸಿ

‘ಹೋಟಾ ಸಮಿತಿ ಶಿಫಾರಸಿಗೂ ಕಿಮ್ಮತ್ತಿಲ್ಲ’

‘ಕೆಪಿಎಸ್‌ಸಿಯ ಪರೀಕ್ಷಾ ವ್ಯವಸ್ಥೆಯ ಸುಧಾರಣೆಗೆ 2013ರಲ್ಲಿ ರಾಜ್ಯ ಸರ್ಕಾರ ರಚಿಸಿದ್ದ ಪಿ.ಸಿ. ಹೋಟಾ ಸಮಿತಿ, ಪ್ರತಿ ವರ್ಷ ಗೆಜೆಟೆಡ್‌ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಶಿಫಾರಸು ಮಾಡಿತ್ತು. ಆದರೆ, ಈ ಶಿಫಾರಸಿಗೆ ಸರ್ಕಾರ ಕಿಮ್ಮತ್ತು ನೀಡಿಲ್ಲ. ಅಲ್ಲದೆ, ಒಮ್ಮೆ ಹೊರಡಿಸಿದ ಅಧಿಸೂಚನೆಯ ಪ್ರಕ್ರಿಯೆ ಪೂರ್ಣಗೊಳಿಸದೇ ನಂತರದ ವರ್ಷದ ಅಧಿಸೂಚನೆ ಹೊರಡಿಸದೇ ಇರುವುದರಿಂದ ನೇಮಕಾತಿ ವಿಳಂಬ ಆಗುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಡಿಪಿಎಆರ್‌ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ’ ಎನ್ನುವುದು ಉದ್ಯೋಗಾಕಾಂಕ್ಷಿಗಳ ಆರೋಪ.

‘ಹಿಂದೂ ಅಲ್ಲದ ವ್ಯಾಪಾರಿಗೆ ಗುತ್ತಿಗೆ ನೀಡದಿರಲು ನಿರ್ಧಾರ’

ಮಂಗಳೂರು: ಇಲ್ಲಿಗೆ ಸಮೀಪದ ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನಕ್ಕೆ ಬಾಳೆಹಣ್ಣು ಪೂರೈಸುವ ವಾರ್ಷಿಕ ಗುತ್ತಿಗೆಯನ್ನು ಅನ್ಯ ಧರ್ಮೀಯ ವ್ಯಾಪಾರಿಗಳಿಗೆ ನೀಡದಿರಲು ಆಡಳಿತ ಮಂಡಳಿಯು ಮುಂದಾಗಿದೆ.

2021–22ನೇ ಸಾಲಿನಲ್ಲಿ ದೇವಸ್ಥಾನಕ್ಕೆ ಬಾಳೆಹಣ್ಣು ಪೂರೈಸುವ ಗುತ್ತಿಗೆಯನ್ನು ಮುಸ್ಲಿಂ ವ್ಯಾಪಾರಿಗೆ ನೀಡಿದ್ದಕ್ಕೆ ಧಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸಂದೇಶಗಳು ಹರಿದಾಡುತ್ತಿದ್ದವು.

ಕೆಲವರು ದೇವಸ್ಥಾನದ ಕಚೇರಿ ಕರೆ ಮಾಡಿ ಸಿಬ್ಬಂದಿಗೂ ಕಿರಿಕಿರಿ ಉಂಟು ಮಾಡುತ್ತಿದ್ದರು. ಇದರಿಂದ ಬೇಸತ್ತ ದೇವಸ್ಥಾನದ ಆಡಳಿತ ಮಂಡಳಿ 2022–23ನೇ ಸಾಲಿಗೆ ಬಾಳೆ ಹಣ್ಣು ಹಾಗೂ ಇತರ ಸಾಮಗ್ರಿ ಪೂರೈಕೆಯ ಗುತ್ತಿಗೆಯನ್ನು ಹಿಂದೂಗಳಲ್ಲದ ವ್ಯಾಪಾರಿಗಳಿಗೆ ನೀಡದಿರುವ ನಿರ್ಧಾರಕ್ಕೆ ಬಂದಿದೆ.

‘ದರಪಟ್ಟಿ ಆಹ್ವಾನಿಸಲು ನೀಡಿದ ಜಾಹೀರಾತಿನಲ್ಲಿ ಈ ಬಗ್ಗೆ ಉಲ್ಲೇಖಿಸಿಲ್ಲ. ಈ ಬಗ್ಗೆ ವ್ಯಾಪಾರಿಗಳಿಗೆ ಮೌಖಿಕವಾಗಿ ತಿಳಿಸಿದ್ದೇವೆ ಅಷ್ಟೇ’ ಎಂದು ದೇವಸ್ಥಾನದ ಮೂಲಗಳು ಹೇಳಿವೆ.

ಪಡಿತರ ಅಕ್ರಮ: ಮಂಡ್ಯ, ಕೋಲಾರ ಜಿಲ್ಲೆಯಲ್ಲೇ ಹೆಚ್ಚು

90 ಸಾವಿರ ಕ್ವಿಂಟಲ್ ಆಹಾರಧಾನ್ಯ ವಶ

● ಕೆ.ಓಂಕಾರ ಮೂರ್ತಿ

ಕೋಲಾರ: 'ಅನ್ನಭಾಗ್ಯ' ಯೋಜನೆಯಲ್ಲಿ ನೀಡುವ ಅಕ್ಕಿಯನ್ನು ಅಕ್ರಮವಾಗಿ ಸಾಗಿಸಿ, ಕಾಳಸಂತೆಯಲ್ಲಿ ಮಾರುವ ದಂಧೆ ಎಗ್ಗಿಲ್ಲದೆ ನಡೆಯುತ್ತಿದ್ದು, 14 ತಿಂಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಕ್ರಮವಾಗಿ ದಾಸ್ತಾನು ಇರಿಸಿದ್ದ 90 ಸಾವಿರ ಕ್ವಿಂಟಲ್ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ.

ಅಕ್ಕಿ ಗಿರಣಿ, ಗೋದಾಮು, ಮನೆ, ಬಂಕರ್, ಲಾರಿಗಳ ಮೇಲೆ ದಾಳಿ ನಡೆಸಿ, ಅಗತ್ಯ ವಸ್ತುಗಳ ಸರಕು ಕಾಯ್ದೆಯಡಿ 2021ರ ಏಪ್ರಿಲ್‌ನಿಂದ ಈ ವರ್ಷದ ಮೇ 15ರವರೆಗೆ 779 ಪ್ರಕರಣ ದಾಖಲಿಸಲಾಗಿದೆ.

ಮಂಡ್ಯ (24,406 ಕ್ವಿಂಟಲ್) ಹಾಗೂ ಕೋಲಾರ (11,466 ಕ್ವಿಂಟಲ್) ಜಿಲ್ಲೆಯಲ್ಲೇ ಹೆಚ್ಚು ಪಡಿತರ ಅಕ್ರಮವಾಗಿ ದಾಸ್ತಾನು, ಸಾಗಣೆಮಾಡಿರುವುದನ್ನು ಅಧಿಕಾರಿಗಳು ಕಾರ್ಯಾ-ಚರಣೆಯಲ್ಲಿ ಪತ್ತೆ ಹಚ್ಚಿದ್ದಾರೆ. ಬಾಗಲಕೋಟೆ (45) ಹಾಗೂ ಬಳ್ಳಾರಿ (44) ಅತ್ಯಧಿಕ ಪ್ರಕರಣ ದಾಖಲಾಗಿವೆ.

ಅಕ್ರಮವೆಸಗಿದರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಾಗಿ ಅಧಿಕಾರಿಗಳು ಎಚ್ಚರಿಸಿ ದಾಳಿ ನಡೆಸಿದರೂ ಅವ್ಯಾಹತವಾಗಿ ನಡೆಯುತ್ತಿದೆ.

> **ವಶಕ್ಕೆ ಪಡೆದ ಆಹಾರಧಾನ್ಯದಲ್ಲಿ ಅನ್ನಭಾಗ್ಯ ಅಕ್ಕಿ ಪ್ರಮಾಣವೇ ಹೆಚ್ಚು. ಅನ್ನಭಾಗ್ಯ ಚೀಲದಿಂದ ಬೇರೆ ಚೀಲಕ್ಕೆ ತುಂಬಿ ಸಾಗಿಸುತ್ತಾರೆ**
> **ಗ್ಯಾನೇಂದ್ರ ಕುಮಾರ್ ಗಂಗ್ವಾರ್**
> ಜಂಟಿ ನಿರ್ದೇಶಕ (ಐಟಿ), ಆಹಾರ ಇಲಾಖೆ, ಬೆಂಗಳೂರು

'ಪಡಿತರ ಆಹಾರಧಾನ್ಯ ಅಕ್ರಮ ದಾಸ್ತಾನು ಬಗ್ಗೆ ವಿವಿಧೆಡೆಯಿಂದ ದೂರು ಬರುತ್ತಿವೆ. ಅಕ್ಕಿಗಿರಣಿ, ಗೋದಾಮು, ಅಂಗಡಿಗಳ ಮೇಲೆ ದಾಳಿ ನಡೆಸಿ ಆಹಾರಧಾನ್ಯ ವಶಕ್ಕೆ ಪಡೆಯ-ಲಾಗುತ್ತಿದೆ' ಎಂದು ಆಹಾರ ಇಲಾಖೆಯ ಜಂಟಿ ನಿರ್ದೇಶಕ (ಐ.ಟಿ) ಗ್ಯಾನೇಂದ್ರ ಕುಮಾರ್ ಗಂಗ್ವಾರ್ ತಿಳಿಸಿದರು.

'1 ಕೆ.ಜಿ ಅಕ್ಕಿಗೆ ₹ 23 ದರ ಬೀಳುತ್ತಿದ್ದು, ಸಾಗಣೆ ವೆಚ್ಚ ಸೇರಿ ₹40 ಆಗುತ್ತದೆ. ತಾಲ್ಲೂಕಿನ ಎಲ್ಲಾ ಕಡೆ ಭೇಟಿ ನೀಡಿ ಗೋದಾಮುಗಳನ್ನು ಪರಿಶೀಲಿಸಿ ವರದಿ ನೀಡಲು ಆಹಾರ ನಿರೀಕ್ಷಕರಿಗೆ ಸೂಚನೆ ನೀಡಲಾಗಿದೆ' ಎಂದರು.

ಎರಡು ದಿನದ ಹಿಂದೆಯಷ್ಟೇ ಬಂಗಾರಪೇಟೆ ತಾಲ್ಲೂಕಿನ ಕೈಗಾರಿಕಾ ಪ್ರದೇಶದ ಸೈಯದ್ ಮಾಡ್ರನ್ ಅಕ್ಕಿ ಗಿರಣಿಯಲ್ಲಿ ಅಕ್ರಮ ದಾಸ್ತಾನು ಇಟ್ಟಿದ್ದ 1,763 ಕ್ವಿಂಟಲ್ ಅಕ್ಕಿ ವಶಕ್ಕೆ ಪಡೆದು, ಪ್ರಕರಣ ದಾಖಲಿಸಲಾಗಿದೆ.



ಅಕ್ಕಿ ಚೀಲಗಳ ಅಕ್ರಮ ದಾಸ್ತಾನು

ಅತಿ ಹೆಚ್ಚು ಅಕ್ಕಿ ಅಕ್ರಮ ಪತ್ತೆಯಾದ ಜಿಲ್ಲೆ


ಜಿಲ್ಲೆ	ಎಫ್‌ಐಆರ್	ವಶ (ಕ್ವಿಂ)
ಮಂಡ್ಯ	16	24,406
ಕೋಲಾರ	05	11,466
ತುಮಕೂರು	06	5,447
ಕಲಬುರಗಿ	34	5,078
ಬಾಗಲಕೋಟೆ	45	3,320
ಬಳ್ಳಾರಿ	44	3,227
ವಿಜಯಪುರ	25	3,125
ದಾವಣಗೆರೆ	32	2,365

(ಅಂಕಿಅಂಶ: ಆಹಾರ ಇಲಾಖೆ)















ಸುಪ್ರೀಂ ಕೋರ್ಟ್ ತೀರ್ಪು ಬಳಿಕ ಎಫ್‌ಐಆರ್ ದಾಖಲು • ಜುಲೈ 1ರವರೆಗೆ ಪೊಲೀಸ್ ಕಸ್ಟಡಿಗೆ

ಕ್ರಿಮಿನಲ್ ಪಿತೂರಿ ಆರೋಪ: ತೀಸ್ತಾ ಬಂಧನ

ಅಹಮದಾಬಾದ್ (ಪಿಟಿಐ): 'ವಂಚನೆಯ ಉದ್ದೇಶದಿಂದ ನಕಲಿ ದಾಖಲೆಗಳ ಸೃಷ್ಟಿ ಮತ್ತು ಕ್ರಿಮಿನಲ್ ಪಿತೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರನ್ನು ಅಹಮದಾಬಾದ್ ಅಪರಾಧ ವಿಭಾಗದ ಪೊಲೀಸರು ಭಾನುವಾರ ಬಂಧಿಸಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧನ ಬಳಿಕ ತೀಸ್ತಾ ಅವರನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಶ್ರೀಕುಮಾರ್ ಮತ್ತು ತೀಸ್ತಾ ಅವರನ್ನು ಜುಲೈ 1ರವರೆಗೆ ನ್ಯಾಯಾಲಯವು ಪೊಲೀಸ್ ಕಸ್ಟಡಿಗೆ ನೀಡಿದೆ.

ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಶನಿವಾರ ಮುಂಬೈನಲ್ಲಿ ತೀಸ್ತಾ ಅವರನ್ನು ವಶಕ್ಕೆ ಪಡೆದಿತ್ತು. ಬಳಿಕ ಅವರನ್ನು ಗುಜರಾತ್‌ಗೆ ಸ್ಥಳಾಂತರಿಸಲಾಗಿತ್ತು.

'ತೀಸ್ತಾ ಸೆಟಲ್‌ವಾಡ್ ಅವರ ಬಂಧನಕ್ಕೂ ಒಂದು ದಿನ ಮುನ್ನ ಗುಜರಾತ್‌ನ ಮಾಜಿ ಡಿಜಿಪಿ ಶ್ರೀಕುಮಾರ್ ಅವರನ್ನು ಅಹಮದಾಬಾದ್ ಅಪರಾಧ ವಿಭಾಗವು ಬಂಧಿಸಿತ್ತು. ಅವರ ವಿರುದ್ಧ ದಾಖಲಾದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರ ಕಸ್ಟಡಿಗೆ ವರ್ಗಾವಣೆ ವಾರಂಟ್ ಪಡೆಯುವ ಕಾರ್ಯವೂ ಪ್ರಕ್ರಿಯೆಯಲ್ಲಿದೆ' ಎಂದೂ ಡಿಸಿಪಿ (ಅಪರಾಧ) ಚೈತನ್ಯ ಮಾಂಡ್ಲಿಕ್ ತಿಳಿಸಿದ್ದಾರೆ.

'2002ರ ಕೋಮುಗಲಭೆ ಪ್ರಕರಣಗಳಿಗೆ ಸಂಬಂಧಿಸಿದಂತೆ ತೀಸ್ತಾ, ಶ್ರೀಕುಮಾರ್ ಮತ್ತು ಭಟ್ ಅವರು ತನಿಖಾ ಆಯೋಗ, ವಿಶೇಷ ತನಿಖಾ ತಂಡ (ಎಸ್‌ಐಟಿ) ಮತ್ತು ನ್ಯಾಯಾಲಯಗಳಿಗೆ ಸಲ್ಲಿಸಿರುವ ದಾಖಲೆಗಳನ್ನು ತನಿಖೆಯ ಭಾಗವಾಗಿ ಅಪರಾಧ ವಿಭಾಗವು ಸಂಗ್ರಹಿಸಲಿದೆ' ಎಂದೂ ಅವರು ಹೇಳಿದ್ದಾರೆ

'ತೀಸ್ತಾ ಮತ್ತು ಶ್ರೀಕುಮಾರ್ ಅವರು ತನಿಖಾ ಅಧಿಕಾರಿಗಳೊಂದಿಗೆ ಕೈಜೋಡಿಸಿ ಸಂಚು ರೂಪಿಸುವ ಮೂಲಕ ನಕಲಿ ದಾಖಲೆಗಳು, ಸಾಕ್ಷ್ಯಗಳನ್ನು ಸೃಷ್ಟಿಸಿ ಭಾರತೀಯ ಅಪರಾಧ ಸಂಹಿತೆಯಡಿ ಅಪರಾಧ ಕೃತ್ಯವೆಸಗಿದ್ದಾರೆ' ಎಂದು ಅಹಮದಾಬಾದ್ ಅಪರಾಧ ವಿಭಾಗದ ಪೊಲೀಸ್ ಇನ್‌ಸ್ಪೆಕ್ಟರ್ ಡಿ.ಬಿ. ಬರಾದ್ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಅವರಿಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಬಂಧಿಸಲಾಗಿದೆ.

2002ರ ಗೋಧ್ರಾ ನಂತರದ ದಂಗೆ ಪ್ರಕರಣಗಳಲ್ಲಿ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಇತರರಿಗೆ ಎಸ್‌ಐಟಿ ನೀಡಿದ್ದ ಕ್ಲೀನ್ ಚಿಟ್ ಅನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಕೋರ್ಟ್ ವಜಾಗೊಳಿಸಿತ್ತು. ಕೋಮುಗಲಭೆಗಳ ಬಗ್ಗೆ ಗುಜರಾತ್ ಸರ್ಕಾರದ ವೈಫಲ್ಯವನ್ನು ಪ್ರಶ್ನಿಸಿ ಆಧಾರರಹಿತ ತಪ್ಪು ಆರೋಪಗಳನ್ನು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಸುಪ್ರೀಂ ಕೋರ್ಟ್ ಹೇಳಿತ್ತು.

ಇದಾದ ಬಳಿಕ ಸೆಟಲ್‌ವಾಡ್, ಶ್ರೀಕುಮಾರ್ ಮತ್ತು ಭಟ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಬಂಧನ ಕಾನೂನುಬಾಹಿರ: ತಮ್ಮ ಬಂಧನವನ್ನು ತೀಸ್ತಾ ಅವರು ಕಾನೂನುಬಾಹಿರವೆಂದು ಹೇಳಿದ್ದಾರೆ. ಅಷ್ಟೇ ಅಲ್ಲ, ತಮ್ಮ ಜೀವಕ್ಕೆ ಬೆದರಿಕೆಯೊಡ್ಡಲಾಗಿದೆ. ಗುಜರಾತ್ ಪೊಲೀಸರು ತಮ್ಮನ್ನು ಒರಟಾಗಿ ನಡೆಸಿಕೊಂಡಿದ್ದಾರೆ ಎಂದೂ ಆರೋಪಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಡಿಸಿಪಿ (ಅಪರಾಧ) ಚೈತನ್ಯ ಮಾಂಡ್ಲಿಕ್ 'ತೀಸ್ತಾ ಅವರು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ದೂರು ಸಲ್ಲಿಸಲು ಮುಕ್ತರಾಗಿದ್ದಾರೆ' ಎಂದು ಹೇಳಿದ್ದಾರೆ.



ಬಂಧನಕ್ಕೊಳಗಾದ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರನ್ನು ಅಹಮದಾಬಾದ್ ಅಪರಾಧ ವಿಭಾಗದ ಪೊಲೀಸರು ಭಾನುವಾರ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು —ಪಿಟಿಐ ಚಿತ್ರ

ಬಿಜೆಪಿ ಆರೋಪಕ್ಕೆ ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): 2002ರಲ್ಲಿ ನಡೆದ ಗುಜರಾತ್ ನರಮೇಧದ ಕುರಿತಾಗಿ ಆಗಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ವಿರುದ್ಧ ಆಂದೋಲನ ನಡೆಸಿದ್ದ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಹಿಂದೆ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇದ್ದರು ಎಂಬ ಬಿಜೆಪಿ ಆರೋಪ ಆಧಾರರಹಿತ ಎಂದು ಕಾಂಗ್ರೆಸ್ ಹೇಳಿದೆ.

'ಬಿಜೆಪಿಯ ಈ ಆರೋಪವು ಆಧಾರರಹಿತ ಮತ್ತು ಸುಪ್ರೀಂ ಕೋರ್ಟ್ ಆದೇಶದ ನೇರ ನ್ಯಾಯಾಂಗ ನಿಂದನೆಯಾಗಿದೆ' ಎಂದು ಕಾಂಗ್ರೆಸ್ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಟ್ವೀಟ್ ಮಾಡಿದ್ದಾರೆ.

ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ್ದ ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು, 'ತೀಸ್ತಾ ಸೆಟಲ್‌ವಾಡ್ ಅವರು ನಡೆಸುತ್ತಿದ್ದ ಎನ್‌ಜಿಒಗೆ ಯುಪಿಎ ಸರ್ಕಾರ ಅದರಲ್ಲೂ ಮುಖ್ಯವಾಗಿ ಆಗಿನ ಶಿಕ್ಷಣ ಸಚಿವಾಲಯ ₹ 1.4 ಕೋಟಿ ನೀಡಿತ್ತು. ಈ ಹಣವನ್ನು ಮೋದಿ ಹಾಗೂ ಭಾರತಕ್ಕೆ ಅಪಮಾನವಾಗಿಸುವ ಆಂದೋಲನಕ್ಕೆ ಬಳಸಲಾಗಿತ್ತು. ಇದರಲ್ಲಿ ಸೆಟಲ್‌ವಾಡ್ ಅವರು ಒಬ್ಬರೇ ಇಲ್ಲ. ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವೂ ಇದೆ' ಎಂದು ಆರೋಪ ಮಾಡಿದ್ದರು.

2002ರ ಗೋಧ್ರಾ ಹತ್ಯಾಕಾಂಡದ ನಂತರದ ಹಿಂಸಾಚಾರಗಳ ಕುರಿತು ನರೇಂದ್ರ ಮೋದಿ ಹಾಗೂ ಇತರರನ್ನು ಎಸ್‌ಐಟಿ ದೋಷಾರೋಪ ಮುಕ್ತವಾಗಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಳ್ಳಿ ಹಾಕಿತ್ತು.

ಸುದ್ದಿ 2 ನಿಮಿಷ

'ರಾಷ್ಟ್ರಧರ್ಮ' ಪಾಲನೆ: ಸಿನ್ಹಾ

ನವದೆಹಲಿ (ಪಿಟಿಐ): 'ಜುಲೈ 18 ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಯು ವೈಯಕ್ತಿಕ ಸ್ಪರ್ಧೆಗಿಂತ ಮಹತ್ವದ್ದಾಗಿದ್ದು, ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸುವ ನಿಟ್ಟಿನಲ್ಲಿ ಮುಂದಿಡುವ ಹೆಜ್ಜೆಯಾಗಿದೆ' ಎಂದು ವಿರೋಧ ಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಭಾನುವಾರ ತಿಳಿಸಿದ್ದಾರೆ.


ಪುತ್ರ ಹಾಗೂ ಬಿಜೆಪಿ ಸಂಸದ ಜಯಂತ ಸಿನ್ಹಾ ಬೆಂಬಲ ಲಭಿಸದಿರುವುದಕ್ಕೆ ಯಾವುದೇ ಧರ್ಮ ಸಂಕಟವಿಲ್ಲ. ಆತ ತನ್ನ 'ರಾಜಧರ್ಮ'ವನ್ನು ಪಾಲಿಸುತ್ತಿದ್ದಾನೆ. ನಾನು ನನ್ನ 'ರಾಷ್ಟ್ರಧರ್ಮ'ವನ್ನು ಪಾಲಿಸುತ್ತಿದ್ದೇನೆ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಸರ್ಕಾರದ ಸರ್ವಾಧಿಕಾರಿ ನೀತಿಗಳನ್ನು ಪ್ರತಿರೋಧಿಸಬೇಕು ಎಂಬ ಸಂದೇಶವನ್ನು ಈ ಚುನಾವಣೆಯ ಮೂಲಕ ಭಾರತದ ಜನತೆಗೆ ನೀಡುತ್ತಿದ್ದೇವೆ' ಎಂದಿದ್ದಾರೆ.

'ಒಬ್ಬ ವ್ಯಕ್ತಿಯನ್ನು ಉನ್ನತ ಸ್ಥಾನಕ್ಕೆ ಆಯ್ಕೆ ಮಾಡುವುದರಿಂದ ಇಡೀ ಸಮುದಾಯದ ಉನ್ನತಿಯಾಗುವುದಿಲ್ಲ. ದ್ರೌಪದಿ ಮುರ್ಮು ಅವರನ್ನು ಅಭ್ಯರ್ಥಿಯನ್ನಾಗಿಸಿರುವುದು ಬಿಜೆಪಿಯ ರಾಜಕೀಯ ಸಂಕೇತವಷ್ಟೇ' ಎಂದೂ ಹೇಳಿದ್ದಾರೆ.

ಇಡೀ ಸಮುದಾಯದ ಉನ್ನತಿಯು ಸರ್ಕಾರವು ಅನುಸರಿಸುವ ನೀತಿಗಳ ಮೇಲೆ ಅವಲಂಬಿತವಾಗಿದೆ ಎಂದೂ ಯಶವಂತ ಸಿನ್ಹಾ ಅವರು ಪ್ರತಿಪಾದಿಸಿದ್ದಾರೆ.

'ಇಂದು ನಮ್ಮ ದೇಶದಲ್ಲಿ ರಾಜಕೀಯವು ಹಲವು ದೌರ್ಬಲ್ಯಗಳನ್ನು ಒಳಗೊಂಡಿದೆ. ಇದು ಜನರು ಬೀದಿಗಿಳಿಯುವಂತೆ ಮಾಡುತ್ತಿದೆ. ಪ್ರಜಾಪ್ರಭುತ್ವದಲ್ಲಿ ಹೀಗಾಗಬಾರದು' ಎಂದು ತಿಳಿಸಿದ್ದಾರೆ.



ಮುಂಬೈ: ಬೆಂಕಿ ಅವಘಡದಲ್ಲಿ ತನ್ನ ಮೂವರು ಮಕ್ಕಳನ್ನು ರಕ್ಷಿಸಿದ ವ್ಯಕ್ತಿ ಸಾವು

ಮುಂಬೈ (ಪಿಟಿಐ): ನವಿಮುಂಬೈನ ಪನ್ವೆಲ್‌ನ ಬಂಗ್ಲೆಯೊಂದರಲ್ಲಿ ಭಾನುವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ, ತನ್ನ ಮೂವರು ಮಕ್ಕಳನ್ನು ರಕ್ಷಿಸಿದ ವ್ಯಕ್ತಿ, ಸುಟ್ಟಗಾಯಗಳಿಂದಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜೀವ್ ಠಾಕೂರ್ (38) ಮೃತ ದುರ್ದೈವಿ. 'ಅವರು ನಟರಾಗಿದ್ದರು ಎಂದು ಸಂಬಂಧಿಕರು ತಿಳಿಸಿದ್ದಾರೆ. ಶಾರ್ಟ್ ಸರ್ಕೀಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿತ್ತು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಖಾಂಡೇಶ್ವರ ಠಾಣೆ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆಕುರ್ಲಿ ಗ್ರಾಮದಲ್ಲಿ ರಾಜೀವ್ ಅವರ ಎರಡು ಮಹಡಿ ಕಟ್ಟಡದಲ್ಲಿ ಬೆಳಿಗ್ಗೆ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ, ಅವರು ಮಕ್ಕಳನ್ನು ಸುರಕ್ಷಿತವಾಗಿ ಹೊರಗೆ ಕಳುಹಿಸಿದ್ದಾರೆ. ಲ್ಯಾಪ್‌ಟಾಪ್, ದಾಖಲೆಪತ್ರಗಳನ್ನು ತರಲು ಮೊದಲ ಮಹಡಿಗೆ ಹೋದಾಗ, ಬೆಂಕಿಯಲ್ಲಿ ಸಿಲುಕಿದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು' ಎಂದು ತಿಳಿಸಿದ್ದಾರೆ.

ಮೂರು ಅಗ್ನಿಶಾಮಕ ವಾಹನಗಳು ಎರಡು ಗಂಟೆಗಳ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದವು. ಘಟನೆ ನಡೆದಾಗ ರಾಜೀವ್ ಅವರ ಪತ್ನಿ ಮನೆಯಲ್ಲಿ ಇರಲಿಲ್ಲ ಎಂದು ತಿಳಿಸಿದ್ದಾರೆ.

ಆದಿತ್ಯನಾಥ್ ಇದ್ದ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ

ವಾರಾಣಸಿ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಭಾನುವಾರ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ಗೆ ಹಕ್ಕಿಯೊಂದು ಡಿಕ್ಕಿ ಹೊಡೆದುದರಿಂದ ಹೆಲಿಕಾಪ್ಟರ್ ಅನ್ನು ತುರ್ತಾಗಿ ಇಲ್ಲಿ ಭೂಸ್ಪರ್ಶ ಮಾಡಬೇಕಾಯಿತು.

'ವಾರಾಣಸಿಯಿಂದ ಲಖನೌಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಹೆಲಿಕಾಪ್ಟರ್‌ನಲ್ಲಿ ಹೊರಟಿದ್ದಾಗ ಹಕ್ಕಿಯೊಂದು ಡಿಕ್ಕಿಯಾಗಿದ್ದು, ಪರಿಣಾಮವಾಗಿ ತುರ್ತು ಭೂಸ್ಪರ್ಶ ಮಾಡಲಾಯಿತು' ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಕೌಶಲ್‌ರಾಜ್ ಶರ್ಮಾ ತಿಳಿಸಿದ್ದಾರೆ.

ಆದಿತ್ಯನಾಥ್ ಅವರು ಶನಿವಾರ ಇಲ್ಲಿನ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಭೇಟಿ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

'ಮನ್ ಕಿ ಬಾತ್' ಕಾರ್ಯಕ್ರಮ– ಜರ್ಮನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

ತುರ್ತುಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ದಮನಕ್ಕೆ ಯತ್ನ

ನವದೆಹಲಿ/ಮ್ಯೂನಿಕ್ (ಪಿಟಿಐ): ಭಾರತದಲ್ಲಿ 1975ರಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಪ್ರಜಾಪ್ರಭುತ್ವವನ್ನು ತುಳಿದು ಹಾಕುವ ಪ್ರಯತ್ನ ಮಾಡಲಾಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿರಾ ಗಾಂಧಿ ನೇತೃತ್ವದ ಸರ್ಕಾರವು ತುರ್ತು ಪರಿಸ್ಥಿತಿ ಹೇರಿದ್ದನ್ನು ಪ್ರಸ್ತಾಪಿಸಿದರು. ಆ ಸಮಯದಲ್ಲಿ ಎಲ್ಲ ಹಕ್ಕುಗಳನ್ನು ಕಸಿಯಲಾಗಿತ್ತು. 'ದಬ್ಬಾಳಿಕೆ ಮನಸ್ಥಿತಿಯನ್ನು' ಪ್ರಜಾಸತ್ತಾತ್ಮಕವಾಗಿ ಮಣಿಸಿದ ಮತ್ತೊಂದು ಉದಾಹರಣೆಯು ಜಗತ್ತಿನ ಬೇರೆಲ್ಲೂ ಹುಡುಕುವುದು ಕಷ್ಟ ಎಂದರು.

ಜರ್ಮನಿಯಲ್ಲಿ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಿದ ಅವರು, ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸಿಕೊಂಡರು.



ನರೇಂದ್ರ ಮೋದಿ

ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದ ಅವಧಿ, 1975ರ ಜೂನ್ 25ರಂದು ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಅದನ್ನು 1977ರ ಮಾರ್ಚ್ 21ರಂದು ಅಂತ್ಯಗೊಳಿಸಲಾಗಿತ್ತು.

'ತುರ್ತು ಪರಿಸ್ಥಿತಿಯ ಸಮಯದಲ್ಲಿ ಎಲ್ಲ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಆ ಸಮಯದಲ್ಲಿ ದೇಶದ ನ್ಯಾಯಾಲಯಗಳು, ಸರ್ಕಾರಿ ಸಂಸ್ಥೆಗಳು, ಮಾಧ್ಯಮಗಳು, ಎಲ್ಲವನ್ನೂ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗಿತ್ತು. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ತುಳಿದು ಹಾಕಲು ಪ್ರಯತ್ನಿಸಲಾಯಿತು' ಎಂದು ಮೋದಿ ಹೇಳಿದರು.

'ಸಾವಿರಾರು ಜನರನ್ನು ಬಂಧಿಸಲಾಯಿತು ಹಾಗೂ ಲಕ್ಷಾಂತರ ಜನರ ಮೇಲೆ ದೌರ್ಜನ್ಯ ನಡೆಸಲಾಯಿತು. ಆದರೆ, ಪ್ರಜಾಪ್ರಭುತ್ವದ ಮೇಲೆ ಜನರ ನಂಬಿಕೆಯನ್ನು ಅಲುಗಾಡಿಸಲು ಆಗಲಿಲ್ಲ. ಪ್ರಜಾಪ್ರಭುತ್ವದ ಚೈತನ್ಯವು ನಮ್ಮ ನರನಾಡಿಗಳಲ್ಲಿ ಹರಿದಿದೆ, ಪ್ರಜಾಪ್ರಭುತ್ವದ ಮೌಲ್ಯಗಳು ಶತಮಾನಗಳಿಂದ ನಮ್ಮೊಳಗೆ ಬೆರೆತು ಹೋಗಿವೆ, ಅಂತಿಮವಾಗಿ ಅದಕ್ಕೆ ಗೆಲುವಾಯಿತು' ಎಂದು ಪ್ರಧಾನಿ ಮೋದಿ ಹೇಳಿದರು.

'ತುರ್ತು ಪರಿಸ್ಥಿತಿ ಸಮಯದಲ್ಲಿ ಅನುಮತಿ ಪಡೆಯದೆಯೇ ಯಾವುದನ್ನೂ ಪ್ರಕಟಿಸುವಂತಿರಲಿಲ್ಲ. ಖ್ಯಾತ ಗಾಯಕರಾದ ಕಿಶೋರ್ ಕುಮಾರ್ ಅವರು ಸರ್ಕಾರವನ್ನು ಹೊಗಳಲು ನಿರಾಕರಿಸಿದ್ದರು. ಅದಕ್ಕಾಗಿ ಅವರ ಮೇಲೆ ನಿರ್ಬಂಧ ಹೇರಲಾಗಿತ್ತು ಹಾಗೂ ರೇಡಿಯೊ ಕಾರ್ಯಕ್ರಮಗಳಿಗೆ ಅವರಿಗೆ ಅವಕಾಶ ನೀಡಿರಲಿಲ್ಲ' ಎಂದು ಮೋದಿ ಅವರು ಹಿಂದಿನ ಘಟನೆ ಮೆಲುಕು ಹಾಕಿದರು.

'ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ'

ನವದೆಹಲಿ (ಪಿಟಿಐ): ದೇಶದಲ್ಲಿ 'ಅಘೋಷಿತ ತುರ್ತು ಪರಿಸ್ಥಿತಿ' ಇದ್ದು, 1975ರ ತುರ್ತು ಪರಿಸ್ಥಿತಿಯಂತೆ ಇದನ್ನು ಸಹ ಸೋಲಿಸಲಾಗುವುದು ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಭಾನುವಾರ ಹೇಳಿದ್ದಾರೆ.

1975ರಲ್ಲಿ ಕಾಂಗ್ರೆಸ್ ಅಧಿಕಾರಾವಧಿಯಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯನ್ನು ಹೇಗೆ ಸೋಲಿಸಲಾಯಿತು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಉಲ್ಲೇಖಿಸಿದ್ದರು, ಇದಕ್ಕೆ ಪ್ರತಿಕ್ರಿಯಿಸಿ ಯೆಚೂರಿ ಅವರು ಈ ಹೇಳಿಕೆ ನೀಡಿದ್ದಾರೆ.

'ಪ್ರಜಾಪ್ರಭುತ್ವಕ್ಕೆ ಅಚ್ಛೇ ದಿನ್ ಮರಳಿ ಬರಲಿದೆ. ಇದಕ್ಕಾಗಿ ಹೋರಾಟವು ಮುಂದುವರಿದಿದ್ದು, ಅದು ತೀವ್ರಗೊಳ್ಳಲಿದೆ' ಎಂದೂ ಯೆಚೂರಿ ಅವರು ಟ್ವೀಟ್ ಮಾಡಿದ್ದಾರೆ.

ಅಸ್ಸಾಂ– 637 ಪರಿಹಾರ ಶಿಬಿರಗಳಲ್ಲಿ 2.33 ಲಕ್ಷ ಮಂದಿಗೆ ಆಶ್ರಯ

ಪ್ರವಾಹ: ಸಂಕಷ್ಟದಲ್ಲಿ 22 ಲಕ್ಷಕ್ಕೂ ಹೆಚ್ಚು ಮಂದಿ

ಗುವಾಹಟಿ, ಸಿಲ್ಚಾರ್ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಗಂಭೀರವಾಗಿದ್ದು, 22 ಲಕ್ಷಕ್ಕೂ ಹೆಚ್ಚು ಜನರು ಸಂಕಷ್ಟಕ್ಕೀಡಾಗಿದ್ದಾರೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಭಾನುವಾರ ಹೆಚ್ಚು ಹಾನಿಗೊಳಗಾದ ಸಿಲ್ಚಾರ್‌ನ ಪ್ರವಾಹ ಪೀಡಿತ ಪ್ರದೇಶ ಹಾಗೂ ಬರಾಕ್‌ನ ಕೆಲ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎಎಸ್‌ಡಿಎಂಎ) ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, ರಾಜ್ಯದ 27 ಜಿಲ್ಲೆಗಳು ಪ್ರವಾಹಪೀಡಿತವಾಗಿದ್ದು, 22 ಲಕ್ಷಕ್ಕೂ ಹೆಚ್ಚು ಜನರು ಸಂಕಷ್ಟಕ್ಕೀಡಾಗಿದ್ದಾರೆ. ಎರಡು ವಾರಗಳಿಂದ ಪ್ರವಾಹ ಮತ್ತು ಭೂಕುಸಿತದ ಪರಿಣಾಮವಾಗಿ 637 ಪರಿಹಾರ ಶಿಬಿರಗಳಲ್ಲಿ 2.33 ಲಕ್ಷ ಮಂದಿ ಆಶ್ರಯ ಪಡೆದಿದ್ದಾರೆ.

ಪ್ರವಾಹದಿಂದಾಗಿ ಶನಿವಾರ ನಾಲ್ವರು ಮಕ್ಕಳು ಸೇರಿದಂತೆ ಒಟ್ಟು ಐವರು ಸಾವಿಗೀಡಾಗಿದ್ದು, ಪ್ರವಾಹ ಮತ್ತು ಭೂಕುಸಿತದಿಂದಾಗಿ ರಾಜ್ಯದಲ್ಲಿ ಈ ವರ್ಷದ ಸಾವಿಗೀಡಾದವರ ಸಂಖ್ಯೆ 126ಕ್ಕೆ ಏರಿದೆ. ರಾಜ್ಯದ ಕೆಲ ಪ್ರದೇಶಗಳಲ್ಲಿ ಭಾನುವಾರ ಪ್ರವಾಹವು ಇಳಿಕೆಯಾಗಿದೆ.

ಜನರನ್ನು ತಲುಪದ ಆಡಳಿತ: 'ಸಿಲ್ಚಾರ್ ಪಟ್ಟಣವು ವಾರದಿಂದ ಪ್ರವಾಹದ ನೀರಿನಲ್ಲಿ ಮುಳುಗಿದ್ದು, ಆಡಳಿತವು ಇನ್ನೂ ಎಲ್ಲ ಜನರನ್ನು ತಲುಪಲು ಸಾಧ್ಯವಾಗಿಲ್ಲ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಭಾನುವಾರ ಒಪ್ಪಿಕೊಂಡಿದ್ದಾರೆ.

'ಪರಿಹಾರ- ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಏಜೆನ್ಸಿಗಳಿಗೆ ತಮ್ಮ ವ್ಯಾಪ್ತಿಯನ್ನು ಹೆಚ್ಚಿಸಬೇಕು ಮತ್ತು ಎಲ್ಲ ಜನರಿಗೆ ಸಾಧ್ಯವಾದಷ್ಟು ಬೇಗ ಸಹಾಯ ನೀಡಬೇಕು ಎಂಬ ಸೂಚನೆಗಳನ್ನು ನೀಡಲಾಗಿದೆ' ಎಂದೂ ಅವರು ಹೇಳಿದ್ದಾರೆ.

ಕಳವಳ: ಪ್ರವಾಹ ಪರಿಸ್ಥಿತಿಯ ಕುರಿತು ಆಲ್ ಇಂಡಿಯಾ ಪೀಪಲ್ಸ್ ಸೈನ್ಸ್ ನೆಟ್‌ವರ್ಕ್‌ನ ಅಸ್ಸಾಂ ಸಮಿತಿಯು ಕಳವಳ ವ್ಯಕ್ತಪಡಿಸಿದ್ದು, ಪ್ರವಾಹ ಪೀಡಿತ ಜನಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ಪರಿಹಾರ ಸಾಮಗ್ರಿಗಳನ್ನು ವಿತರಿಸಲು ತಕ್ಷಣದ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಿದೆ.

ಪ್ರವಾಹಪೀಡಿತ ಪ್ರದೇಶಗಳಲ್ಲಿ ಅತಿಸಾರ ಮತ್ತು ಕಾಲರಾದಂತಹ ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಗಟ್ಟಲು ತುರ್ತುಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದೂ ಸಮಿತಿಯು ಆಗ್ರಹಿಸಿದೆ.



ಅಸ್ಸಾಂನ ಸಿಲ್ಚಾರ್ ಪಟ್ಟಣದ ಪ್ರವಾಹಪೀಡಿತ ಸ್ಥಳಗಳಿಗೆ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಭೇಟಿ ನೀಡಿ ಪರಿಶೀಲಿಸಿದರು —ಪಿಟಿಐ ಚಿತ್ರ

ಕೋವಿಡ್: 11,739 ಹೊಸ ಪ್ರಕರಣ, 25 ಮಂದಿ ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಭಾನುವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ಗಂಟೆಗಳ ಅವಧಿಯಲ್ಲಿ 11,739 ಕೊರೊನಾ ಪ್ರಕರಣಗಳು ದೃಢಪಟ್ಟಿವೆ.

ಇದೇ ವೇಳೆ 25 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 4,33,89,973ಕ್ಕೆ ತಲುಪಿದೆ. ಮೃತಪಟ್ಟವರ ಸಂಖ್ಯೆ 5,24,999ಕ್ಕೆ ಹೆಚ್ಚಿದೆ.

ಹೊಸ ಸೋಂಕಿತರೂ ಸೇರಿ ಸಕ್ರಿಯ ಪ್ರಕರಣಗಳ ಸಂಖ್ಯೆ 92,576ಕ್ಕೆ ಏರಿಕೆಯಾಗಿದೆ. ಚೇತರಿಕೆಯ ಪ್ರಮಾಣ ಶೇ 98.58 ರಷ್ಟಿದೆ

ದೈನಂದಿನ ಪಾಸಿಟಿವಿಟಿ ದರ ಶೇ 2.59ರಷ್ಟಿದೆ. ಒಟ್ಟು ಸೋಂಕಿತರ ಪೈಕಿ 4,27,72,398ಮಂದಿ ಗುಣಮುಖರಾಗಿದ್ದಾರೆ.

ಯಾರೋ ಹೇಳಿಕೊಟ್ಟ ತುತ್ತೂರಿ ಊದಬೇಡಿ: ಟಿಆರ್‌ಸಿ

ಪಠ್ಯ ಪರಿಷ್ಕರಣೆ: ವಸಂತಕುಮಾರ್ ಹೇಳಿಕೆಗೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತ ಕುಮಾರ್ ಅವರು ಯಾರೋ ಹೇಳಿಕೊಟ್ಟ ತುತ್ತೂರಿ ಊದುವ ಬದಲು, ಪೂರ್ವಗ್ರಹದಿಂದ ಹೊರಬಂದು ಅಧ್ಯಯನ ನಡೆಸಿ, ಸ್ವಂತಿಕೆಯಿಂದ ಮಾತನಾಡಬೇಕು' ಎಂದು 6 ಮತ್ತು 7ನೇ ತರಗತಿ ಸಮಾಜ ವಿಜ್ಞಾನ ಪಠ್ಯ ಪರಿಷ್ಕರಣ ಸಮಿತಿಯ ಹಿಂದಿನ ಅಧ್ಯಕ್ಷ ಪ್ರೊ.ಟಿ.ಆರ್. ಚಂದ್ರಶೇಖರ್ ಹೇಳಿದ್ದಾರೆ.

'ಪಠ್ಯಪರಿಷ್ಕರಣೆ ವಿಚಾರದಲ್ಲಿ ಬರಗೂರು ರಾಮಚಂದ್ರಪ್ಪ ಅವರ ಹೇಳಿಕೆಯಲ್ಲಿಯೇ ಪಕ್ಷದ ವಾಸನೆ ಇದೆ' ಎಂಬ ವಸಂತಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಅವರು, 'ವಸಂತಕುಮಾರ್ ಮತ್ತು ಅವರ ಪರಿವಾರದವರು ಸುಳ್ಳು ಆರೋಪಗಳನ್ನು ಮಾಡುವುದರಲ್ಲಿ ಸಿದ್ಧಹಸ್ತರು. ಈಗಲೂ ಅವರು ಬರಗೂರರ ವ್ಯಕ್ತಿತ್ವಕ್ಕೆ ಮಸಿಬಳಿಯಲು ಹೋಗಿ ತಮ್ಮ ಮುಖಕ್ಕೆ ಮಸಿ ಬಳಿದುಕೊಳ್ಳುತ್ತಿದ್ದಾರೆ' ಎಂದಿದ್ದಾರೆ.

'6ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ 'ಅಲಿಘಡ ಚಳವಳಿ' ಪಾಠವೇ ಇಲ್ಲ. 'ಅಲಿಘರ್ ಚಳವಳಿ ಮತ್ತು ಸರ್ ಸಯ್ಯದ್ ಅಹ್ಮದ್‌ಖಾನ್' ಎಂಬ ಪಠ್ಯವನ್ನೇ ಬರಗೂರರ ಸಮಿತಿ ಯಥಾವತ್ತಾಗಿ ತೆಗೆದುಕೊಂಡು ಅದೇ ತರಗತಿಯ ಪಠ್ಯಪುಸ್ತಕದಲ್ಲಿ ಸೇರಿ ಸಿದೆ. ಹೆಚ್ಚುವರಿಯಾಗಿ '1875ರಲ್ಲಿ ಮಹಮಡನ್ ಆಂಗ್ಲೋ ಓರಿಯಂಟಲ್ ಕಾಲೇಜನ್ನು ಆರಂಭಿಸಿದರು. ಈ ಸಂಸ್ಥೆಯೇ 1920ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು' ಎಂಬುದನ್ನಷ್ಟೇ ಸೇರಿಸಲಾಗಿದೆ'

'ಪ್ರಭುತ್ವ' ಪಠ್ಯದಲ್ಲಿ ಸರ್ವಾಧಿಕಾರಿ ಸರ್ಕಾರವನ್ನು ಪರಿಚಯಿಸಿದ ಮಾತ್ರಕ್ಕೆ ಬರಗೂರು ಆ ಸರ್ಕಾರದ ಪರ ಎಂದು ಹೇಳಲಾಗುತ್ತದೆಯೇ? 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ 'ಭಾರತ ನಮ್ಮ ಮಾತೃಭೂಮಿ' ಪಾಠದ ಹೆಸರನ್ನು ಬದಲಿಸಿದ ಮಾತ್ರಕ್ಕೆ ಅವರು ಮಾತೃಭೂಮಿಗೆ ವಿರೋಧಿ ಎಂದು ಹೇಳುವುದು ಮೂರ್ಖತನದ್ದಾಗುತ್ತದೆ. ಪಠ್ಯಪುಸ್ತಕ ಪರಿಷ್ಕರಣೆ ಆಗಬೇಕು ಎಂಬುದನ್ನು ಬರಗೂರು ಕೂಡಾ ಒಪ್ಪುತ್ತಾರೆ. ಆದರೆ, ಪರಿಷ್ಕರಣೆಯು ನಿಜವಾದ ಶಿಕ್ಷಣ ತಜ್ಞರಿಂದ ಕ್ರಮಬದ್ಧವಾಗಿ ನಡೆಯಬೇಕೆಂದು ಪ್ರತಿಪಾದಿಸುತ್ತಲೇ ಬರುತ್ತಿದ್ದಾರೆ' ಎಂದು ಹೇಳಿದ್ದಾರೆ.

ಸರಬ್ಜಿತ್ ಸಿಂಗ್ ತಂಗಿ ದಲಬೀರ್ ನಿಧನ

ಅಮೃತಸರ (ಪಿಟಿಐ): ಭಯೋತ್ಪಾದನೆ ಮತ್ತು ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ಪಾಕಿಸ್ತಾನದ ಜೈಲಿನಲ್ಲಿದ್ದ ಸರಬ್ಜಿತ್ ಸಿಂಗ್ ಅವರ ಬಿಡುಗಡೆಗೆ ಒತ್ತಾಯಿಸಿ ಹಲವು ಹೋರಾಟಗಳನ್ನು ನಡೆಸಿದ್ದ ಸರಬ್ಜಿತ್ ಅವರ ತಂಗಿ ದಲಬೀರ್ ಕೌರ್ (67) ಅವರು ಭಾನುವಾರ ನಿಧನರಾದರು.

ಶನಿವಾರ ರಾತ್ರಿ ತೀವ್ರ ಎದೆ ನೋವಿನಿಂದ ಬಳಲುತ್ತಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆತರಲಾಯಿತು, ಅಲ್ಲಿ ಅವರು ಮೃತಪಟ್ಟಿದ್ದಾರೆ.

ಬಂಡಾಯ ಶಾಸಕರಿಗೆ ಶಿವಸೇನಾ ಬೆದರಿಕೆ

ಒಂದನೇ ಪುಟದಿಂದ...

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್, ಸಚಿವ ಅಶೋಕ್ ಚವಾಣ್, ಸೇನಾದ ರಾಜ್ಯಸಭಾ ಸದಸ್ಯ ಅನಿಲ್ ದೇಸಾಯಿ, ಸಾರಿಗೆ ಸಚಿವ ಅನಿಲ್ ಪರಬ್ ಅವರೂ ಪವಾರ್ ಅವರನ್ನು ಭೇಟಿಯಾಗಿದ್ದಾರೆ.

ಬಂಡಾಯ ಶಾಸಕರನ್ನು ಮುಂಬೈಗೆ ಕರೆಸಬೇಕು ಮತ್ತು ಸದನದಲ್ಲಿ ಬಹುಮತದ ಪರೀಕ್ಷೆ ನಡೆಸಬೇಕು ಎಂಬ ನಿಲುವನ್ನು ಪವಾರ್ ಹೊಂದಿದ್ದಾರೆ.

ಶಿವಸೇನಾ ಮುಖಂಡರು ಹಿರಿಯ ವಕೀಲ ದೇವದತ್ತ ಕಾಮತ್ ಅವರಿಂದ ಕಾನೂನು ಸಲಹೆ ಪಡೆದಿದ್ದಾರೆ.

'ಶಾಸಕಾಂಗ ಪಕ್ಷವೇ ಸರ್ವೋಚ್ಚ ಅಲ್ಲ. ಶಾಸಕಾಂಗ ಪಕ್ಷದಲ್ಲಿ ಬಹುಮತ ಎಂಬುದಕ್ಕೆ ಅರ್ಥವೇ ಇಲ್ಲ... ಶಾಸಕಾಂಗ ಪಕ್ಷಕ್ಕೆ ಮೂಲ ಪಕ್ಷವೇ ಆಧಾರ. ಸದನದ ಹೊರಗೆ ಶಾಸಕರು ನಡೆಸಿದ ಚಟುವಟಿಕೆಗಳು ಕೂಡ ಪಕ್ಷ ವಿರೋಧಿ ಎಂದು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ತೀರ್ಪು ನೀಡಿದೆ' ಎಂದು ಕಾಮತ್ ಹೇಳಿದ್ದಾರೆ.

ದಿನದ ಬೆಳವಣಿಗೆ

- ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಕೋವಿಡ್‌ನಿಂದ ಗುಣಮುಖರಾಗಿದ್ದು, ರಾಜಭವನಕ್ಕೆ ವಾಪಸ್ಸಾಗಿದ್ದಾರೆ
- ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಸಚಿವ ಹಾಗೂ ಶಿವಸೇನಾ ಶಾಸಕ ಉದಯ್ ಸಾಮಂತ್ ಅವರು ಏಕನಾಥ ಶಿಂಧೆ ಅವರ ಬಣ ಸೇರಿದ್ದಾರೆ
- ಏಕನಾಥ ಶಿಂಧೆ ಅವರ ಬಣದ ಬಲ ಈಗ 50 ಶಾಸಕರಿಗೆ ಏರಿದೆ. ಉದ್ಧವ್ ಠಾಕ್ರೆ ಅವರ ಬೆಂಬಲಕ್ಕೆ ಉಳಿದಿದ್ದು 15 ಶಾಸಕರು ಮತ್ತು ಮೂವರು ಸಚಿವರು ಮಾತ್ರ
- 15 ಶಿವಸೇನಾ ಶಾಸಕರಿಗೆ ಕೇಂದ್ರ ಸರ್ಕಾರವು ವೈ-ಪ್ಲಸ್ ಭದ್ರತೆ ಒದಗಿಸಿದೆ
- ಮಹಾರಾಷ್ಟ್ರದ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ

ಪ್ರತ್ಯೇಕ ಅಪಘಾತ: 11 ಮಂದಿ ಸಾವು

ಒಂದನೇ ಪುಟದಿಂದ

ರೈಲುಗಳಲ್ಲಿ ಬರುವ ಪಡಿತರ ಧಾನ್ಯವನ್ನು ಲಾರಿಗಳಿಗೆ ಲೋಡ್ ಮಾಡುವ ಕೆಲಸಕ್ಕೆ ಇವರು ನಿತ್ಯ ಬೆಳಗಾವಿಗೆ ಬರುತ್ತಿದ್ದರು.

ಮೂರು ಗ್ರಾಮಗಳ 40ಕ್ಕೂ ಹೆಚ್ಚು ಮಂದಿ ಮೂರು ಕ್ರೂಸರ್‌ಗಳಲ್ಲಿ ಬೆಳಗಾವಿಗೆ ಹೊರಟ್ಟಿದ್ದರು. ಅಪಘಾತಕ್ಕೀಡಾದ ವಾಹನದಲ್ಲಿ 18 ಮಂದಿ ಇದ್ದರು. ಊರಿನಿಂದ ಹೊರಡುವುದು ತಡವಾದ್ದರಿಂದ 'ಥಂಬ್' ಒತ್ತಲು ಬಿಡುವುದಿಲ್ಲ ಎಂಬ ಕಾರಣಕ್ಕೆ ವಾಹನ ಚಾಲಕರು ವೇಗವಾಗಿ ಚಾಲನೆ ಮಾಡುತ್ತಿದ್ದರು.

ಕಲ್ಯಾಳ್ ಬಳಿ ವಾಹನವನ್ನು ಹಿಂದಿಕ್ಕುವ ಭರದಲ್ಲಿ ಕ್ರೂಸರ್ ಚಾಲಕನ ನಿಯಂತ್ರಣ ತಪ್ಪಿತು. ಚಾಲಕ ವಾಹನದಿಂದ ಜಿಗಿದು ಪ್ರಾಣ ಉಳಿಸಿಕೊಂಡನು.

ಚಾಲಕನಿಲ್ಲದೇ ಮುನ್ನುಗ್ಗಿದ ವಾಹನ ತಡೆಗೋಡೆಗೆ ಗುದ್ದಿ, ಎರಡು ಪಲ್ಟಿಯಾಗಿ ತಗ್ಗಿಗೆ ಬಿತ್ತು. ವಾಹನ ಬೋರಲಾಗಿ ಬಿದ್ದಿದ್ದು ಅದರಡಿ ಸಿಲುಕಿ ಏಳು ಮಂದಿ ಕೊನೆಯುಸಿರೆಳೆದರು.

ನಾಗಮಂಗಲ ವರದಿ: ಪಟ್ಟಣದ ಹೊರವಲಯದ ಎಂ.ಹೊಸೂರು ಗೇಟ್ ಬಳಿ ಚಾಮರಾಜನಗರ-ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ರಾತ್ರಿ ಲಾರಿ ಮತ್ತು ಕಾರು ಅಪಘಾತದಲ್ಲಿ ಮೂವರು ಮೃತಪಟ್ಟರು.

ತಾಲ್ಲೂಕಿನ ಬೀರೇಶ್ವರಪುರದ ದೇವರಾಜು (42), ಪಾಂಡವಪುರ ತಾಲ್ಲೂಕು ಕನಗನಮರಡಿ ವೃತ್ತದ ಗ್ರಾಮ ಸಹಾಯಕ ಮಂಜುನಾಥ್ (55), ಕೆನ್ನಾಳು ಗ್ರಾಮದ ರೈತ ಮಂಜುನಾಥ್ (64) ಮೃತರು.

ಇಬ್ಬರು ಗಾಯಗೊಂಡಿದ್ದು, ಅವರನ್ನು ಬಿ.ಜಿ.ನಗರದ ಆದಿ ಚುಂಚನಗಿರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಕುಣಿಗಲ್ ವರದಿ: ಸ್ನೇಹಿತನೊಂದಿಗೆ ವೀಕೆಂಡ್ ಬೈಕ್ ರೈಡಿಂಗ್‌ಗಾಗಿ ಬೆಂಗಳೂರಿನಿಂದ ಹೊರಟಿದ್ದ ಇನ್ಫೊಸಿಸ್ ಉದ್ಯೋಗಿ ಸೂರಜ್ (27) ಇಲ್ಲಿ ಗವಿಮಠದ ಬಳಿ ಸಂಭವಿಸಿದ ಅಪ ಘಾತದಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಸ್ನೇಹಿತ ಅಜೇಯ್ ಜೊತೆ ಪ್ರತ್ಯೇಕ ಬೈಕ್‌ಗಳಲ್ಲಿ ಬೆಂಗಳೂರಿನಿಂದ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಹೊರಟಿದ್ದರು. ಎದುರಿನಿಂದ ಬರುತ್ತಿದ್ದ ವಾಹನ ತಗುಲಿ ಸೇತುವೆಯಿಂದ ಬೈಕ್ ಸಮೇತ ಕೆಳಗೆ ಬಿದ್ದ ಸೂರಜ್ ಮೃತಪಟ್ಟರು.

ಬಿದ್ದ ರಭಸಕ್ಕೆ ವಿದೇಶಿ ಬೈಕ್ (ಡುಕಾಟಿ) ನಜ್ಜುಗುಜ್ಜಾಗಿದೆ. ಬೈಕ್ ರೇಸ್ ಸವಾರರು ಧರಿಸುವ ಹೆಲ್ಮೆಟ್ ಧರಿಸಿದ್ದರೂ ಸೂರಜ್ ಬದುಕುಳಿಯಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.



ಬೆಳಗಾವಿ ತಾಲ್ಲೂಕಿನ ಕಲ್ಯಾಳ್ ಗ್ರಾಮದ ಬಳಿ ಭಾನುವಾರ ಅಪಘಾತಕ್ಕೀಡಾದ ಕ್ರೂಸರ್ —ಪ್ರಜಾವಾಣಿ ಚಿತ್ರ

ಮೃತರ ಕುಟುಂಬಕ್ಕೆ ಪರಿಹಾರ ಘೋಷಣೆ

ಬೆಳಗಾವಿ ಸಮೀಪ ನಡೆದ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರದಿಂದ ತಲಾ ₹5 ಲಕ್ಷ, ಜಿಲ್ಲಾಡಳಿತದಿಂದ ತಲಾ ₹2 ಲಕ್ಷ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮೃತರಲ್ಲಿ ಐವರು ಕಟ್ಟಡ ಕಾರ್ಮಿಕರು. ಅವರ ಅವಲಂಬಿತರಿಗೆ ಕಾರ್ಮಿಕ ಇಲಾಖೆಯಿಂದ ತಲಾ ₹ 5 ಲಕ್ಷ ಪರಿಹಾರ ಸಿಗುತ್ತದೆ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ತಿಳಿಸಿದ್ದಾರೆ.

ಉಪಚುನಾವಣೆ ಫಲಿತಾಂಶ: ಎಸ್‌ಪಿ, ಎಎಪಿಗೆ ಆಘಾತ

ಒಂದನೇ ಪುಟದಿಂದ...

ರಾಜಿಂದರ್ ನಗರದಿಂದ ಆಯ್ಕೆಯಾಗಿದ್ದ ರಾಘವ್ ಚಡ್ಡಾ ಅವರನ್ನು ಎಎಪಿ ರಾಜ್ಯಸಭೆಗೆ ಕಳುಹಿಸಿದ್ದರಿಂದ ಈ ಕ್ಷೇತ್ರ ತೆರವಾಗಿತ್ತು. ಸಂಗ್ರೂರ್ ಲೋಕಸಭಾ ಸದಸ್ಯರಾಗಿದ್ದ ಭಗವಂತ ಮಾನ್ ಅವರು ಪಂಜಾಬ್ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರಿಂದ ಅವರು ರಾಜೀನಾಮೆ ನೀಡಿದ್ದರು.

ಈ ಉಪಚುನಾವಣೆಯ ಬಳಿಕ ಲೋಕಸಭೆಯಲ್ಲಿ ಪಕ್ಷವನ್ನು ಪ್ರತಿನಿಧಿಸುವ ಒಬ್ಬ ಸಂಸದರೂ ಇಲ್ಲ.

ಸಂಗ್ರೂರ್ ಕ್ಷೇತ್ರವನ್ನು ಎಎಪಿ ಕಳೆದುಕೊಂಡಿದ್ದು, ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಡುವುದನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ಮತದಾರರು ನೀಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಮೂರು ತಿಂಗಳ ಹಿಂದೆಯಷ್ಟೇ ನಡೆದ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ 117ರ ಪೈಕಿ 92 ಕ್ಷೇತ್ರಗಳನ್ನು ಗೆದ್ದುಕೊಂಡು ಬೀಗಿದ್ದ ಎಎಪಿಗೆ ಈ ಫಲಿತಾಂಶ ಆಘಾತ ನೀಡಿದೆ.

ವಿಧಾನಸಭಾ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಸಮಾಜವಾದಿ ಪಕ್ಷವು ಉತ್ತರ ಪ್ರದೇಶದ ತನ್ನ ಎರಡು ಭದ್ರ ನೆಲೆಗಳನ್ನು ಬಿಜೆಪಿಗೆ ಒಪ್ಪಿಸಿದೆ.

ವಿಧಾನಸಭೆಗೆ ಆಜಂಗಡದಿಂದ ಆಯ್ಕೆಯಾಗಿದ್ದ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ರಾಂಪುರದಿಂದ ಆಯ್ಕೆಯಾಗಿದ್ದ ಹಿರಿಯ ನಾಯಕ ಅಜಂ ಖಾನ್ ರಾಜೀನಾಮೆಯಿಂದ ಈ ಕ್ಷೇತ್ರಗಳು ತೆರವಾಗಿದ್ದವು. ಭೋಜಪುರಿ ನಟ ಬಿಜೆಪಿಯ ದಿನೇಶ್ ಲಾಲ್ ಯಾದವ್ ನಿರಹುಆ ಅವರು ಆಜಂಗಡದಲ್ಲಿ, ಬಿಜೆಪಿಯ ಘನಶ್ಯಾಮ್ ಸಿಂಗ್ ಲೋಧಿ ಅವರು ರಾಂಪುರದಲ್ಲಿ ಗೆದ್ದಿದ್ದಾರೆ.

ತ್ರಿಪುರಾದ ಮೂರು ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿದೆ. ಮುಖ್ಯಮಂತ್ರಿ ಮಾಣಿಕ್ ಸಹಾ ಅವರು ಬರದೋಲಿ ಕ್ಷೇತ್ರದಲ್ಲಿ ಆರಿಸಿ ಬಂದಿದ್ದಾರೆ. ವಿಪ್ಲವ್ ದೇವ್ ಅವರ ಬದಲಿಗೆ ಮುಖ್ಯಮಂತ್ರಿಯಾಗಿ ಮಾಣಿಕ್ ಸಹ ಅವರನ್ನು ಆಯ್ಕೆ ಮಾಡಲಾಗಿತ್ತು. ಜಾರ್ಖಂಡ್‌ನಲ್ಲಿ ಕಾಂಗ್ರೆಸ್‌ನ ಶಿಲ್ಪಿ ನೇಹಾ ಟಿಕ್ರೆ, ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್‌ನ ಎಂ. ವಿಕ್ರಂ ರೆಡ್ಡಿ ಗೆದ್ದಿದ್ದಾರೆ.

ವಿಕ್ರಂ ಅವರು 1.2 ಲಕ್ಷ ಮತಗಳನ್ನು ಪಡೆದಿದ್ದು, ಅವರ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಭರತ್ ಕುಮಾರ್ ಅವರು ಪಡೆದ ಮತಗಳು 19,332 ಮಾತ್ರ.

ಈ ಕ್ಷೇತ್ರದಲ್ಲಿ ತೆಲುಗು ದೇಶಂ ಪಕ್ಷವು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರಲಿಲ್ಲ. ಉಪಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂಬುದು ಈ ಪಕ್ಷದ ನೀತಿಯಾಗಿದೆ.

ತ್ರಿಪುರಾದಲ್ಲಿ ಹಿಂಸಾಚಾರ

ಉಪಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ತ್ರಿಪುರಾದಲ್ಲಿ ಹಿಂಸಾಚಾರ ನಡೆದಿದೆ. ಅಗರ್ತಲಾದ ಕಾಂಗ್ರೆಸ್ ಭವನದ ಎದುರು ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಹೊಡೆದಾಡಿಕೊಂಡಿದ್ದಾರೆ. ತ್ರಿಪುರಾ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಬಿರಜಿತ್ ಸಿಂಹ ಸೇರಿದಂತೆ 19 ಜನರು ಗಾಯಗೊಂಡಿದ್ದಾರೆ. ಪೊಲೀಸರು ಅಶ್ರುವಾಯು ಷೆಲ್ ಸಿಡಿಸಿ ಗುಂಪು ಚದುರಿಸಿದರು. ತಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರ ಮೇಲೆ ನಡೆದಿರುವ ದಾಳಿಯನ್ನು ಕಾಂಗ್ರೆಸ್ ಖಂಡಿಸಿದೆ. ಬಿಜೆಪಿ ಗೂಂಡಾಗಳು ದಾಳಿ ಎಸಗಿದ್ದಾರೆ ಎಂದು ಪಕ್ಷ ಆರೋಪಿಸಿದೆ.

ಲೋಕಸಭೆ ಉಪಚುನಾವಣೆ ಫಲಿತಾಂಶ		
ಕ್ಷೇತ್ರ	ಗೆದ್ದ ಅಭ್ಯರ್ಥಿ	ಪಕ್ಷ
ಸಂಗ್ರೂರ್ (ಪಂಜಾಬ್)	ಸಿಮ್ರನ್‌ಜಿತ್ ಸಿಂಗ್ ಮಾನ್	ಅಕಾಲಿದಳ (ಅಮೃತಸರ)
ಅಜಂಗಡ (ಉ.ಪ್ರ.)	ದಿನೇಶ್ ಲಾಲ್ ಯಾದವ್ ನಿರಹುಆ	ಬಿಜೆಪಿ
ರಾಂಪುರ (ಉ.ಪ್ರ.)	ಘನಶ್ಯಾಮ್ ಸಿಂಗ್ ಲೋಧಿ	ಬಿಜೆಪಿ
ವಿಧಾನಸಭೆ ಉಪಚುನಾವಣೆ ಫಲಿತಾಂಶ		
ಆತ್ಮಕೂರು (ಆಂಧ್ರ)	ಎಂ. ವಿಕ್ರಂ ರೆಡ್ಡಿ	ವೈಎಸ್‌ಆರ್‌ಸಿ
ಮಂದರ್ (ಜಾರ್ಖಂಡ್)	ಶಿಲ್ಪಿ ನೇಹಾ ಟಿಕ್ರೆ	ಕಾಂಗ್ರೆಸ್
ರಾಜಿಂದರ್ ನಗರ (ದೆಹಲಿ)	ದುರ್ಗೇಶ್ ಪಾಠಕ್	ಎಎಪಿ
ಅಗರ್ತಲಾ (ತ್ರಿಪುರಾ)	ಸುದೀಪ್ ರಾಯ್ ಬರ್ಮನ್	ಕಾಂಗ್ರೆಸ್
ಜುಬಾರಾಜ್‌ನಗರ (ತ್ರಿಪುರಾ)	ಮಾಲಿನಾ ದೇವನಾಥ್	ಬಿಜೆಪಿ
ಸುರ್ಮಾ (ತ್ರಿಪುರಾ)	ಸ್ವಪ್ನಾ ದಾಸ್	ಬಿಜೆಪಿ
ಟೌನ್ ಬರದೋಲಿ (ತ್ರಿಪುರಾ)	ಮಾಣಿಕ್ ಸಹಾ	ಬಿಜೆಪಿ

ಶಿಕ್ಷಣ




ಕಂಪ್ಯೂಟರ್ ಮೂಲಕ ಕಲಿಕೆ

ಶೈಕ್ಷಣಿಕ ಮಾದರಿ ಗ್ರಾಮ ಯೋಜನೆ

‘ಪ್ರಥಮ್’ ಪ್ರಯೋಗ

ಮಕ್ಕಳಲ್ಲಿನ ಕಲಿಕಾ ನ್ಯೂನತೆಯನ್ನು ಸರಿಪಡಿಸುವುದಕ್ಕಾಗಿ ಪ್ರಥಮ್ ಮೈಸೂರ್ ಸ್ವಯಂ ಸೇವಾ ಸಂಸ್ಥೆ, ಮೈಸೂರು ಜಿಲ್ಲೆಯ ನಾಲ್ಕು ಹಳ್ಳಿಗಳಲ್ಲಿ ‘ಶೈಕ್ಷಣಿಕ ಮಾದರಿ ಗ್ರಾಮ ಯೋಜನೆ’ ಅನುಷ್ಠಾನಗೊಳಿಸಿದೆ. ಈ ಯೋಜನೆಯು ಶೈಕ್ಷಣಿಕ ದೃಷ್ಟಿಯಿಂದ ಬದಲಾವಣೆಯತ್ತ ಹೆಜ್ಜೆ ಹಾಕಲು ನೂರಾರು ಕುಟುಂಬಗಳಿಗೆ ದಾರಿ ತೋರಿದೆ.




ನಿರಂಜನ ವಾನಳ್ಳಿ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ನಾಲ್ಕು ಹಳ್ಳಿಗಳಲ್ಲಿ ಶೈಕ್ಷಣಿಕ ದೃಷ್ಟಿಯಿಂದ ಸದ್ದಿಲ್ಲದ ಕ್ರಾಂತಿಯೊಂದು ಕಳೆದ ಐದು ವರ್ಷಗಳಿಂದ ನಡೆಯುತ್ತಿದೆ. ಇಂಥ ಒಂದು ಬದಲಾವಣೆಯ ಹಿಂದಿರುವುದು ‘ಪ್ರಥಮ್ ಮೈಸೂರ್’ ಎಂಬ ಸ್ವಯಂ ಸೇವಾ ಸಂಸ್ಥೆ.

ಟಿ.ನರಸೀಪುರದ ಮುತ್ತತ್ತಿ, ಹ್ಯಾಕನೂರು, ಮಾವಿನಹಳ್ಳಿ ಮತ್ತು ಸುಜ್ಜಲೂರು- ಈ ನಾಲ್ಕು ಹಳ್ಳಿಗಳಲ್ಲಿ ಪ್ರಥಮ್, ಶೈಕ್ಷಣಿಕ ಮಾದರಿ ಗ್ರಾಮ ಪ್ರಯೋಗವನ್ನು ಮಾಡುತ್ತಿದೆ. ಇದು ಮುಖ್ಯವಾಗಿ ಮಕ್ಕಳ ಶಿಕ್ಷಣವನ್ನು ಕೇಂದ್ರೀಕರಿಸಿ ಮಾಡುತ್ತಿರುವ ಪ್ರಯತ್ನ.

ಮನೆ ಮನೆ ಭೇಟಿ

ಈ ಯೋಜನೆಯಡಿಯಲ್ಲಿ ಹಳ್ಳಿಯ ಪ್ರಾಥಮಿಕ ಶಿಕ್ಷಣದ ನ್ಯೂನತೆಗಳನ್ನು ಸರಿಪಡಿಸಲು ಹೊರಟ ಪ್ರಥಮ್ ಸಂಸ್ಥೆ ಮೂರು ಹಂತಗಳಲ್ಲಿ ಕೆಲಸಮಾಡಲು ನಿರ್ಧರಿಸಿತು. ಪ್ರಥಮ್‌ನ ಸ್ವಯಂಸೇವಕರು ಮನೆಮನೆಗೆ ಭೇಟಿ ನೀಡಿ ಮಕ್ಕಳ ಪಾಲಕರ ಸಂಪರ್ಕ ಬೆಳೆಸಿ ಪಾಲಕರು ಮಗುವಿನ ಶಿಕ್ಷಣದಲ್ಲಿ ಹೆಚ್ಚಿನ ಮುತುವರ್ಜಿವಹಿಸುವಂತೆ ಮಾಡಿದರು. ಮುಖ್ಯವಾಗಿ ಪಾಲಕರು ಮಕ್ಕಳಿಗೆ ಹೆಚ್ಚು ಸಮಯಕೊಡಬೇಕು, ಶಾಲೆಯಿಂದ ಬಂದಕೂಡಲೇ ಆದಿನ ಶಾಲೆಯಲ್ಲಿ ನಡೆದ ವಿಚಾರಗಳಿಗೆ ಮಕ್ಕಳು ಹೇಳುವಾಗ ಕಿವಿಗೊಡಬೇಕು, ಎರಡು ವಾರಕ್ಕೊಮ್ಮೆಯಾದರೂ ಶಾಲೆಗೆ ಬಂದು ಮಕ್ಕಳ ಓದಿನ ಬಗ್ಗೆ ವಿಚಾರಿಸಬೇಕು. ಹೀಗೆ ಪಾಲಕರು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಗಮನಕೊಡುವಂತೆ ರೂಢಿಮಾಡಿದ್ದು ದೊಡ್ಡ ಬದಲಾವಣೆ.



ಪ್ರಥಮ್ ಸಂಸ್ಥೆಯಿಂದ ಹೊಲಿಗೆ ತರಬೇತಿ



ಮಕ್ಕಳಿಗೆ ಆಟದ ಮೂಲಕ ಶಿಕ್ಷಣ

ಶಿಕ್ಷಕರ ನಿಯೋಜನೆ

ಎರಡನೆಯದಾಗಿ, ನಮ್ಮ ಹಳ್ಳಿಗಳಲ್ಲಿ ಶಿಕ್ಷಕರು ಹೆಚ್ಚಾಗಿ ಪಾಠದ ಮೇಲೆ ಗಮನ ಹರಿಸುವಂತೆ ಮಾಡುವುದರಲ್ಲಿ ಪ್ರಥಮ್ ಕಾರ್ಯಕರ್ತರ ಮೇಲೆ ದೊಡ್ಡ ಜವಾಬ್ದಾರಿ ಇತ್ತು. ಯಾಕೆಂದರೆ ಈಚಿನ ವರದಿಯೊಂದರ ಪ್ರಕಾರ ಶಿಕ್ಷಕರು ಶೇ 19ರಷ್ಟು ಮಾತ್ರ ತಮ್ಮ ಸಮಯವನ್ನು ಪಾಠಕ್ಕೆ ವಿನಿಯೋಗಿಸಲು ಸಾಧ್ಯವಾಗುತ್ತಿದೆ. ಉಳಿದ ಹೊತ್ತಲ್ಲಿ ಸರ್ಕಾರವಹಿಸುವ ಇತರ ಕೆಲಸಗಳಿಗೇ ಸಮಯ ಹೋಗುತ್ತದೆ. ಈ ಕಾರಣದಿಂದ ಎಲ್ಲೆಲ್ಲಿ ಶಿಕ್ಷಕರ ಕೊರತೆಯಿದೆಯೋ ಅಲ್ಲಿ ಪ್ರಥಮ್ ದಾನಿಗಳನ್ನು ಹಿಡಿದು ಹೆಚ್ಚಿನ ಶಿಕ್ಷಕರನ್ನು ನೇಮಿಸಿದೆ.

ಇನ್ನು, ಮಕ್ಕಳ ಶಿಕ್ಷಣವನ್ನು ಸುಧಾರಿಸಲು ಕೈಜೋಡಿಸಬೇಕಾದವರು ಶಾಲಾ ಅಭಿವೃದ್ಧಿ ಸಮಿತಿಯವರು ಹಾಗೂ ಗ್ರಾಮ ಪಂಚಾಯಿತಿಯವರು. ಶಾಲೆಗಳಲ್ಲಿ ಶೌಚಾಲಯ, ತರಗತಿ ಕೋಣೆ, ಆಟದ ಮೈದಾನ ಮುಂತಾಗಿ ಸೌಕರ್ಯಗಳ ಕೊರತೆಯಿದ್ದಾಗ ಗ್ರಾಮ ಪಂಚಾಯಿತಿಯಿಂದ ಇವನ್ನು ಮಾಡಿಸಿಕೊಳ್ಳಲು ಪ್ರಥಮ್‌ನವರು ಶ್ರಮವಹಿಸಿದರು. ಇದರಿಂದಾಗಿ ಮಕ್ಕಳ ಶಿಕ್ಷಣ ಸುಧಾರಿಸಿತು. ಶಿಕ್ಷಣಕ್ಕೆ ಸೀಮಿತವಾಗದ ಪ್ರಥಮ್, ಕೋವಿಡ್ ಸಮಯದಲ್ಲಿ ಮಕ್ಕಳು ಮನೆಯಲ್ಲೇ ಉಳಿದು ಶಿಕ್ಷಣದಿಂದ ವಂಚಿತರಾಗುವ ಸಂದರ್ಭಬಂದಾಗ ಅಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕೆ ಮೊರೆಹೋಯ್ತು.

ಗ್ರಾಮದ ಶೈಕ್ಷಣಿಕ ಅಭಿವೃದ್ಧಿ

ಪ್ರಥಮ್ ಸಂಸ್ಥೆಯ ನಾಲ್ವರು ಶಿಕ್ಷಕರು ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂಗನವಾಡಿ, ಶಾಲೆ, ಮತ್ತು ಗ್ರಾಮದಲ್ಲಿರುವ ವಿದ್ಯಾವಂತರ ನೆರವಿನಿಂದ ಬೀದಿಬೀದಿಯ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದಾರೆ. ಬೀದಿ ನಾಟಕದ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದಾರೆ. ಮಹಿಳೆಯರಿಗೆ ಹೊಲಿಗೆ ತರಬೇತಿ, ಮಕ್ಕಳಿಗೆ ಸಂಚಾರಿ ಗ್ರಂಥಾಲಯ ಕೊಡಿಸಿದ್ದಾರೆ. ಈ ಸಂಸ್ಥೆಯ ಚಟುವಟಿಕೆಯಿಂದ ಗ್ರಾಮಕ್ಕೆ ತುಂಬಾ ಸಹಾಯವಾಗಿದೆ.

ಉಮೇಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಸುಜ್ಜಲೂರು

ಉತ್ತಮ ಸೌಲಭ್ಯ

ಅಂಗನವಾಡಿಗೆ ಶಿಕ್ಷಕರನ್ನು ನೇಮಿಸಿರುವ ಪ್ರಥಮ್ ಸಂಸ್ಥೆ, ಮೂರರಿಂದ ಆರು ವರ್ಷದ ಮಕ್ಕಳ ಕಲಿಕೆಗೆ ನೆರವಾಗಿದೆ. ಶಿಕ್ಷಕರು ಕಂಪ್ಯೂಟರ್ ಮತ್ತು ಇಂಗ್ಲಿಷ್ ಕಲಿಸುತ್ತಿದ್ದಾರೆ. ‘ಪೋಷಣೆ’ ಕಾರ್ಯಕ್ರಮದ ಮೂಲಕ ಪೋಷಕರಿಗೆ ಆಹಾರ ಜಾಗೃತಿ ಮೂಡಿಸಿದ್ದಾರೆ. ಕೊರೊನಾ ಸಮಯದಲ್ಲಿ ಮಕ್ಕಳಿಗೆ ಪಾಠ ಮಾಡಿದ್ದಾರೆ. ಪ್ರತಿ ತಿಂಗಳು ಪೋಷಕರ ಸಭೆ ನಡೆಸಿ, ನಮ್ಮ ಸಮಸ್ಯೆಗಳನ್ನು ಕೇಳುತ್ತಾರೆ. ಒಟ್ಟಾರೆ ಗ್ರಾಮಕ್ಕೆ ಉತ್ತಮ ಸೌಲಭ್ಯಗಳು ದೊರೆತಿವೆ.


ಸರಸ್ವತಿ, ಗ್ರಾಮ ಪಂಚಾಯಿತಿ ಸದಸ್ಯರು, ಮುತ್ತತ್ತಿ

ಪಠ್ಯೇತರ ಚಟುವಟಿಕೆ

ಗ್ರಾಮೀಣಮಟ್ಟದಲ್ಲಿ ನೈರ್ಮಲ್ಯಕ್ಕೆ ಒತ್ತು ಕೊಡಲು, ಕೆಟ್ಟ ಚಟಗಳಿಂದ ದೂರವಿರಿಸಲು, ಪೌಷ್ಠಿಕ ಆಹಾರ ಸೇವನೆ, ದುಂದು ವೆಚ್ಚ ಮಾಡದಂತೆ ಜನರಿಗೆ ತಿಳಿವಳಿಕೆ ನೀಡಲು, ತಲಾ ನಾಲ್ಕು ನಿಮಿಷಗಳ ವಿಡಿಯೊ ಕಾರ್ಯಕ್ರಮ ಮಾಡಿ ಜನರಿಗೆ ತಲುಪಿಸಿತು. ಪ್ರತಿ ಊರಲ್ಲಿ ಒಂದು ಕಂಪ್ಯೂಟರ್ ಕೇಂದ್ರ ಸ್ಥಾಪಿಸಿ ಯಾರುಬೇಕಾದರೂ ಬಂದು ಜಗತ್ತಿನ ಯಾವುದೇ ವಿಷಯ ತಿಳಿಯಲು ಅನುವುಮಾಡಿಕೊಟ್ಟಿತು. ಈ ರೀತಿಯ ಕ್ರಮಗಳಿಂದ ಈ ನಾಲ್ಕು ಹಳ್ಳಿಗಳಲ್ಲಿ ಪ್ರಥಮ್ ಮನೆಮಾತಾಯಿತು.

ಈ ನಾಲ್ಕು ಹಳ್ಳಿಗಳಲ್ಲಿ ಪ್ರಥಮ್ ಚಟುವಟಿಕೆ ಶಾಲಾ ಶಿಕ್ಷಣಕ್ಕೆ ಸೀಮಿತವಾಗಿಲ್ಲ. ಮುಖ್ಯವಾಗಿ ಪಾಲಕರನ್ನು ಅದರಲ್ಲೂ ತಾಯಿಯರನ್ನು ಆರ್ಥಿಕವಾಗಿ ಸಶಕ್ತಗೊಳಿಸಲು, ಅವರ ಸಾಮರ್ಥ್ಯಾಭಿವೃದ್ಧಿಗೆ ಒತ್ತು ನೀಡಲು ಪ್ರಥಮ್ ಪಣತೊಟ್ಟಿದೆ. ಅವರಿಗೆ ಎರೆಹುಳು ಗೊಬ್ಬರ ತಯಾರಿಸಲು ಕಲಿಸಿದೆ. ಹೊಲಿಗೆ ಯಂತ್ರಗಳನ್ನು ನೀಡಿ ಬಟ್ಟೆ ಹೊಲಿಯುವುದನ್ನು ಕಲಿಸಿದೆ. ಸಸಿ ಮಡಿಗಳನ್ನು(ನರ್ಸರಿ) ಸ್ಥಾಪಿಸಿ ಸಸಿ ಬೆಳೆಸಲು ಪ್ರೋತ್ಸಾಹಿಸಿದೆ. ಕೆರೆ ಕಟ್ಟೆಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರತ್ತ ಗಮನ ಸೆಳೆದಿದೆ. ‘ಹೆಣ್ಣೊಂದು ಕಲಿತರೆ ಹಳ್ಳಿಯೊಂದು ಕಲಿತಂತೆ’ ಎಂಬ ಮಾತನ್ನು ಪ್ರಥಮ್ ಕೃತಿಗಿಳಿಸಿದೆ.

ಜೀವನ ಕಲಿಸುವ ಯೋಜನೆ



ಪ್ರಥಮ್ ಸಂಸ್ಥೆಯ ಶೈಕ್ಷಣಿಕ ಮಾದರಿ ಗ್ರಾಮ ಯೋಜನೆ, ಮಗುವಿಗೆ ಕೇವಲ ಅಕ್ಷರವನ್ನಷ್ಟೇ ಕಲಿಸುವುದಿಲ್ಲ. ಯಶಸ್ವಿಯಾಗಿ ಜೀವಿಸುವುದು ಹೇಗೆಂಬುದನ್ನೂ ಕಲಿಸಿದೆ. ಇದು ತರಗತಿಯ ಶಿಕ್ಷಣವಲ್ಲ. ಬದಲಿಗೆ ಸಮುದಾಯವನ್ನೊಳಗೊಂಡ ಜೀವನದ ಕಲಿಕೆಯಾಗಿದೆ. ಈ ಯೋಜನೆ ಇಡೀ ಗ್ರಾಮವನ್ನು ಸಂವೇದನಾಶೀಲಗೊಳಿಸುತ್ತದೆ. ಸಮುದಾಯದ ಎಲ್ಲ ಘಟಕಗಳೂ ತಂತಮ್ಮ ಕರ್ತವ್ಯ ಮಾಡಲು ಪ್ರೇರೇಪಿಸುತ್ತದೆ.

ಅಶ್ವಿನಿ ರಂಜನ್, ಸ್ಥಾಪಕ ಟ್ರಸ್ಟಿ, ಪ್ರಥಮ್ ಮೈಸೂರು

‘ಮೆಂಟರಿಂಗ್’ ಯೋಜನೆ

ಮಕ್ಕಳಿಗೆ ಹಿರಿಯರು, ತಿಳಿದವರಿಂದ ನಿರಂತರ ಸಲಹೆಕೊಡಿಸುವ ‘ಮೆಂಟರಿಂಗ್’ ಯೋಜನೆ ಜಾರಿಗೆ ತಂದಿದ್ದು ಪ್ರಥಮ್ ಸಂಸ್ಥೆಯ ಇನ್ನೊಂದು ಮಹತ್ವದ ಹೆಜ್ಜೆ. ಬೇರೆ ಬೇರೆ ಕ್ಷೇತ್ರದಲ್ಲಿರುವ ಹಿರಿಯರನ್ನು, ಹುಡುಕಿ ಮೆಂಟರ್‌ಗಳನ್ನಾಗಿ (ಮಾರ್ಗದರ್ಶಕರನ್ನು) ನೇಮಿಸಿತು. ಒಂಬತ್ತು ಮತ್ತು ಹತ್ತನೆಯ ತರಗತಿಯ ಮಕ್ಕಳಿಗೆ ಈ ಮೆಂಟರ್‌ಗಳು ತರಗತಿಯ ಹಾಗೂ ಹೊರಗಿನ ವಿಷಯಗಳನ್ನು ತಿಳಿಸುತ್ತಿದ್ದರು. ಇದು ಇನ್ನೊಂದು ತರಗತಿಯಲ್ಲ. ಬದಲಾಗಿ ಕಲಿಕೆಗೆ ಒಂದು ಹೊಸ ಆಯಾಮ ಸೇರ್ಪಡೆ. ಇದು ನೂರಾರು ಮಕ್ಕಳಿಗೆ ಸಹಾಯವಾಯಿತು. ಇದೀಗ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಬಿ.ಇಡಿ ವಿದ್ಯಾರ್ಥಿಗಳು ಈ ಮೆಂಟರಿಂಗ್ ಯೋಜನೆಯಲ್ಲಿ ಪ್ರಥಮ್ ಸಂಸ್ಥೆಯೊಂದಿಗೆ ಕೈಜೋಡಿಸಿದ್ದು 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ನಾಲ್ಕು ಹಳ್ಳಿಯ ವಿದ್ಯಾರ್ಥಿಗಳಿಗೆ ಸಲಹೆಗಾರರಾಗಿ ನಿಯೋಜನೆಗೊಂಡಿದ್ದಾರೆ.

ಪ್ರಥಮ್ ಮೈಸೂರಿನ ಶೈಕ್ಷಣಿಕ ಮಾದರಿ ಗ್ರಾಮದ ಈ ಯೋಜನೆ ನಾಲ್ಕು ಹಳ್ಳಿಗಳ ನಾನೂರಕ್ಕೂ ಹೆಚ್ಚು ಕುಟುಂಬಗಳು ಶೈಕ್ಷಣಿಕ ದೃಷ್ಟಿಯಿಂದ ಬದಲಾವಣೆಯತ್ತ ಹೆಜ್ಜೆ ಹಾಕಲು ದಾರಿ ತೋರಿದೆ. ಇನ್ನೂ ಹಲವು ಹಳ್ಳಿಗಳು ಈ ಭಾಗ್ಯಕ್ಕಾಗಿ ‘ಪ್ರಥಮ್ ಮೈಸೂರ್’ ತಮ್ಮೂರಿಗೂ ಬರುವುದನ್ನು ಕಾಯುತ್ತಿವೆ. ಯೋಜನೆಯ ಯಶಸ್ಸಿಗೆ ಇದೇ ಸಾಕ್ಷಿ.

ವಿದ್ಯಾರ್ಥಿ ವೇತನ ಕೈಪಿಡಿ

ದಿ ಲೀಪ್ ಸ್ಕಾಲರ್‌ಶಿಪ್ 2022
ವಿವರ: ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲು ಲೀಪ್ ಸ್ಕಾಲರ್ (ವಿದೇಶಗಳಲ್ಲಿ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಲಾಭರಹಿತ ಸಂಸ್ಥೆ) ಅರ್ಜಿಗಳನ್ನು ಆಹ್ವಾನಿಸುತ್ತಿದೆ.
ಅರ್ಹತೆ: ಅರ್ಜಿ ಸಲ್ಲಿಸುವವರಿಗೆ 21 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
ಆರ್ಥಿಕ ಸಹಾಯ: ಪೂರ್ಣ ಟ್ಯೂಷನ್ ಶುಲ್ಕ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30, ಜೂನ್ 2022
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್‌ನಲ್ಲಿ ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/TLS1

ಜಿಇವಿ (GEV) ಮೆಮೊರಿಯಲ್ ಮೆರಿಟ್ ಸ್ಕಾಲರ್‌ಶಿಪ್ 2022-23 ಫಾರ್ ಲಾ ಸ್ಟೂಡೆಂಟ್ಸ್
ವಿವರ: ಪದವಿ ಪೂರ್ವ ಅಥವಾ ಸ್ನಾತಕೋತ್ತರ ಮಟ್ಟದಲ್ಲಿ ಕಾನೂನು ಕೋರ್ಸ್‌ಗಳನ್ನು ಕಲಿಯುವ ವಿದ್ಯಾರ್ಥಿಗಳಿಂದ ಜಿಇವಿ ಸ್ಕಾಲರ್‌ಶಿಪ್ ಫಂಡ್ ಟ್ರಸ್ಟ್ ಅರ್ಜಿಗಳನ್ನು ಆಹ್ವಾನಿಸುತ್ತಿದೆ.
ಅರ್ಹತೆ: ಮಾನ್ಯತೆ ಪಡೆದ ಕಾನೂನೂ ಸಂಸ್ಥೆಯಲ್ಲಿ ಎಲ್‌ಎಲ್‌ಬಿ/ಎಲ್‌ಎಲ್‌ಎಂ ಮಾಡುತ್ತಿರಬೇಕು. ಭಾರತೀಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ. ಕುಟುಂಬದ ವಾರ್ಷಿಕ ಆದಾಯ ₹10 ಲಕ್ಷಕ್ಕಿಂತ ಹೆಚ್ಚಿರಬಾರದು.
ಆರ್ಥಿಕ ಸಹಾಯ: ವರ್ಷಕ್ಕೆ ₹50 ಸಾವಿರದಿಂದ ₹2 ಲಕ್ಷ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಜೂನ್, 2022
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ
ಹೆಚ್ಚಿನ ಮಾಹಿತಿಗೆ: www.b4s.in/praja/GMM4

ಕೃಪೆ: buddy4study.com

ಚತುರ ಬೇಟೆಗಾರ

ಕೆಂದಲೆ ಕಳ್ಳಿಪೀರ

ಜೀವಾನ್ವೇಷಣೆ

ಡಾ. ಎಸ್. ಶಿಶುಪಾಲ

ಕಳ್ಳಿಪೀರ ಹಕ್ಕಿಗಳು ಹಾರಾಟದಲ್ಲಿರುವಾಗಲೇ ಬೇಟೆಯಾಡುವುದರಲ್ಲಿ ನಿಷ್ಣಾತರು. ತಮ್ಮ ಉನ್ನತ ಬಣ್ಣದ ರೆಕ್ಕೆಗಳಿಂದ ಆಕರ್ಷಕವಾಗಿರುತ್ತವೆ. ದಕ್ಷಿಣ ಭಾರತದಲ್ಲಿ ಕಾಣಸಿಗುವ ಆರು ಪ್ರಭೇದಗಳಲ್ಲಿ ಕೆಂದಲೆ ಕಳ್ಳಿಪೀರ (ಕೆಂದಲೆ ಪತ್ರಂಗ) ತನ್ನ ವರ್ಣಸಂಯೋಜನೆಯಲ್ಲಿ ಅನನ್ಯ. ಇದನ್ನು ಆಂಗ್ಲಭಾಷೆಯಲ್ಲಿ ಚೆಸ್ಟನಟ್ ಹೆಡೆಡ್ ಬೀ ಈಟರ್ (Chestnut-headed Bee-eater) ಎಂದೂ ಮತ್ತು ಪ್ರಾಣಿಶಾಸ್ತ್ರೀಯವಾಗಿ ಮೆರೊಪ್ಸ್ ಲೆಸ್ಚೆನ್ವೌಲ್ಟಿ (Merops leschenaulti) ಎಂದು ಗುರುತಿಸಲಾಗಿದೆ.

ಗುಣಲಕ್ಷಣಗಳು: ಸುಂದರವಾದ ಹಕ್ಕಿ. ಗಾತ್ರದಲ್ಲಿ ಪಿಕಳಾರ (ಬುಲ್ ಬುಲ್) ಹಕ್ಕಿಗಿಂತ ಸಣ್ಣದು (20 ಸೆಂಮೀ.). ನೀಲಿ-ಮಿಶ್ರಿತ ಹಸಿರು ಮೈ ಬಣ್ಣ, ತಲೆ, ಹಿಂಗತ್ತು ಮತ್ತು ಬೆನ್ನಿನ ಮೇಲ್ಭಾಗ ಕೆಂಪು-ಮಿಶ್ರಿತ ಗಾಢಕಂದು ಬಣ್ಣದ್ದಾಗಿರುವುದು ವಿಶೇಷ. ಕುತ್ತಿಗೆ ಮತ್ತು ಕೆನ್ನೆ ಹಳದಿ ಬಣ್ಣದ್ದಾಗಿರುತ್ತದೆ. ಕುತ್ತಿಗೆಯಲ್ಲಿ ಸರದಂತೆ ಕಾಣುವ ಅಡ್ಡ ಕಪ್ಪುಗೆರೆ. ಚೂಪಾದ , ಕಪ್ಪು ಬಣ್ಣದ ಮತ್ತು ತುಸು ಬಾಗಿದ ಕೊಕ್ಕು (ಚಿತ್ರ- 1). ಗಂಡು-ಹೆಣ್ಣುಗಳಲ್ಲಿ ಕಾಣುವಂತಹ ವ್ಯತ್ಯಾಸಗಳಿಲ್ಲ. ಸಣ್ಣ ಗುಂಪುಗಳಲ್ಲಿ ವಾಸ.

ಆವಾಸ: ದಕ್ಷಿಣ ಭಾರತದ ದಟ್ಟ ಕಾಡುಗಳಲ್ಲಿ ವಾಸಿಸುತ್ತವೆ. ಪಶ್ಚಿಮ ಘಟ್ಟಗಳಲ್ಲಿ, ಬೆಟ್ಟದ ತಪ್ಪಲಿನಲ್ಲಿ, ನಿತ್ಯಹರಿದ್ವರ್ಣ ಕಾಡುಗಳಲ್ಲಿ ಮತ್ತು ಎಲೆ ಉದುರುವ ಕಾಡುಗಳಲ್ಲಿ ಕಾಣಸಿಗುತ್ತವೆ. ಮರಗಳಲ್ಲಿ ಕುಳಿತು ಆಗಾಗ್ಗೆ ಪರ್ರನೆ ಹಾರಿ ಗಾಳಿಯಲ್ಲಿ ತೇಲುವುದನ್ನು ನೋಡಬಹುದು. ಟಿ........ಟ್ವಿ..,....., ಟಿ........ಟ್ವಿ..,....., ಎಂಬಂತಹ ಕೂಗು.

ಆಹಾರ ಮತ್ತು ಬೇಟೆ ವಿಧಾನ: ಕೀಟಗಳೇ ಪ್ರಮುಖ ಆಹಾರ. ಚಿಟ್ಟೆ, ಜೇನು ನೊಣ, ದುಂಬಿ, ಡ್ರಾಗನ್ ಫ್ಲೈ, ಸಿಕಾಡ, ಮಿಡತೆ ಮುಂತಾದವುಗಳನ್ನು ಹಾರಾಡುತ್ತಲೆ ಬೇಟೆಯಾಡುವ ಚಾಣಾಕ್ಷತನವಿದೆ. ಹಾರುತ್ತಿರುವ ಕೀಟಗಳನ್ನು ಮಿಂಚಿನ ವೇಗದಲ್ಲಿ ಗುರುತಿಸಿ ಕೂಡಲೇ ಗಾಳಿಯಲ್ಲಿ ಹಾರಿ ತನ್ನ ಕೊಕ್ಕಿನಲ್ಲಿ ಭದ್ರವಾಗಿ ಹಿಡಿದು ಮರದ ಕೊಂಬೆ ಅಥವಾ ತಂತಿಯ ಮೇಲೆ ಕುಳಿತುಕೊಳ್ಳುತ್ತದೆ. ಹಿಡಿದ ಕೀಟವನ್ನು ತಾನು ಕುಳಿತ ಕೊಂಬೆಯ ಮೇಲೆ ಆಚೆ-ಈಚೆ ಬಡಿಯುತ್ತದೆ. ಈ ಆಘಾತದಿಂದ ಸುಮಾರಾಗಿ ಸಾವಿನಂಚಿಗೆ ಸಾಗುತ್ತಿರುವ ಕೀಟವನ್ನು ಮೇಲೆ ಹಾರಿಸಿ ಗಬಕ್ಕನೆ ಹಿಡಿದು ನುಂಗುತ್ತದೆ (ಚಿತ್ರ -2). ಮತ್ತೊಂದು ಬೇಟೆಗೆ ಮತ್ತೆ ಸಜ್ಜಾಗುತ್ತದೆ.

ಸಂತಾನಾಭಿವೃದ್ಧಿ: ಫೆಬ್ರುವರಿಯಿಂದ ಮೇ ತಿಂಗಳವರೆಗೆ ಪ್ರಜನನ ಕಾಲ. ಸಾಮಾನ್ಯವಾಗಿ ಏಕಪತಿ/ಪತ್ನಿ ವ್ರತಸ್ಥ ಹಕ್ಕಿಗಳಿವು. ನದಿ-ಕೆರೆ ತೀರ ಅಥವಾ ಕಾಡುಗಳಲ್ಲಿ ಮರಳು/ಮಣ್ಣಿನಲ್ಲಿ ಉದ್ದವಾದ ಸುರಂಗ ಮಾಡಿ ಗೂಡಾಗಿ ಪರಿವರ್ತಿಸುತ್ತವೆ. ಸಮೂಹದಲ್ಲಿ ಸಂತಾನಾಭಿವೃದ್ಧಿ. ಒಂದು ಸಲಕ್ಕೆ ಐದರಿಂದ ಆರರವರೆಗೆ ಅಚ್ಚ ಬಿಳಿ ಬಣ್ಣದ ಗುಂಡಗಿನ ಮೊಟ್ಟೆಗಳನ್ನಿಡುತ್ತವೆ. ತಂದೆ-ತಾಯಿಯರಿಬ್ಬರೂ ಮರಿಗಳ ಪೋಷಣೆ ಮಾಡುವುವು.

ಇದು ಕರ್ನಾಟಕದ ಕಾಡುಗಳಲ್ಲಿ ಕಾಣಸಿಗುವ ವಿಶಿಷ್ಟ ಪ್ರಭೇದ. ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಮೈಸೂರು, ದಾವಣಗೆರೆ ಮತ್ತಿತರ ಜಿಲ್ಲೆಗಳಲ್ಲಿ ಗುರುತಿಸಲಾಗಿದೆ. ಅವಶ್ಯಕತೆಗೆ ತಕ್ಕಂತೆ ಸ್ಥಳೀಯವಾಗಿ ವಲಸೆ ಹೋಗುತ್ತವೆ. ಸದ್ಯಕ್ಕೆ ಉತ್ತಮ ಸಂಖ್ಯೆಯಲ್ಲಿದ್ದರೂ ನಿರಂತರ ಕಾಡು ನಾಶದಿಂದ ಇವುಗಳ ಸಂತತಿ ಕಡಿಮೆಯಾಗುವ ಸಾಧ್ಯತೆಗಳಿವೆ. ಕೃಷಿಯಲ್ಲಿ ಯಥೇಚ್ಛವಾಗಿ ಬಳಸುತ್ತಿರುವ ಕೀಟನಾಶಕಗಳು, ಕೀಟಗಳ ಮೂಲಕ ಈ ಹಕ್ಕಿಗಳ ದೇಹ ಸೇರುತ್ತಿದ್ದು, ಇದೂ ಕೂಡ ಈ ಪ್ರಭೇದ ಅಳಿಯಲು ಕಾರಣವಾಗುತ್ತಿದೆ. ಅರಣ್ಯ ನಾಶ ತಡೆಗಟ್ಟುವುದು, ಆವಾಸ ಸ್ಥಾನಗಳನ್ನು ಸಂರಕ್ಷಿಸುವುದು ಮತ್ತು ಕೃಷಿಯಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆ ಕಡಿಮೆ ಮಾಡುವುದು.. ಇವೆಲ್ಲ ಈ ಪ್ರಭೇದ ರಕ್ಷಣೆಗಿರುವ ತಕ್ಷಣದ ಉಪಕ್ರಮಗಳು.

ಚಿತ್ರಗಳು: ಲೇಖಕರವು

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)



ಚಿತ್ರ 1: ಕೆಂದಲೆ ಕಳ್ಳಿಪೀರನ ವರ್ಣರಂಜಿತ ತಲೆಯ ಭಾಗ.




ಚಿತ್ರ- 2: ಸಿಕಾಡ ಕೀಟವನ್ನು ಕೆಂದಲೆ ಕಳ್ಳಿಪೀರ ಬೇಟೆಯಾಡಿದ ಕ್ಷಣ.

ಸಿಎ ನಂತರ ಕೆಪಿಎಸ್ಸಿ ಬರೆಯಬಹುದೇ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ಸಿಎ(ಚಾರ್ಟೆಡ್ ಅಕೌಂಟೆಂಟ್) ಪರೀಕ್ಷೆ ಮುಗಿಸಿದವರು ಕೆಪಿಎಸ್‌ಸಿ ಪರೀಕ್ಷೆ ಬರೆಯಬಹುದೇ?

ಹೆಸರು ಊರು ತಿಳಿಸಿಲ್ಲ

ಸಿಎ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಈ ವೃತ್ತಿಪರ ಪದವಿಯ ಆಧಾರದ ಮೇಲೆ ನಾಗರಿಕ ಸೇವಾ ಪರೀಕ್ಷೆಗೆ ಪ್ರವೇಶ ಪಡೆಯಲು ಅರ್ಹತೆ ಸಿಗುತ್ತದೆ.

2. ನಾನು ಎಂಎ, ಬಿ.ಇಡಿ ಮುಗಿಸಿದ್ದೇನೆ. ಬಿ.ಇಡಿಯಲ್ಲಿ ಕನ್ನಡ ಮತ್ತು ಸಮಾಜ ವಿಜ್ಞಾನ ನನ್ನ ಐಚ್ಛಿಕ ವಿಷಯಗಳು. ಆದರೆ ಪದವಿ ಹಂತದಲ್ಲಿ ಎಚ್‌ಇಪಿ ನನ್ನ ವಿಷಯವಾಗಿತ್ತು. ಈಗ ನನಗೆ ಶಾಲಾ ಹಂತದಲ್ಲಿ ಕನ್ನಡ ಬೋಧನೆಗೆ ಅವಕಾಶವಿಲ್ಲವಾಗಿದೆ. ಕನ್ನಡ ವಿಷಯ ಬೋಧನೆಗೆ ಸಾಹಿತ್ಯ ಪರಿಷತ್ತಿನ ಕಾವ, ಜಾಣ, ರತ್ನ ಪರೀಕ್ಷೆಯು ಸಮಾನವಾದುದ್ದೇ? ದಯವಿಟ್ಟು ಗೊಂದಲವನ್ನು ಪರಿಹರಿಸಿ.

ಪ್ರವೀಣ್ ಕುಮಾರ್ ಎನ್.ಎಂ., ಮಳವಳ್ಳಿ, ಮಂಡ್ಯ

ಕನ್ನಡ ಸಾಹಿತ್ಯ ಪರಿಷತ್ತಿನ ಕಾವ ಅಥವಾ ಜಾಣ ಅಥವಾ ರತ್ನ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಕರ್ನಾಟಕ ಸರ್ಕಾರದ ಅಧಿಕಾರಿಗಳು ಮತ್ತು ನೌಕರರಿಗೆ ಇಲಾಖೆಯಿಂದ ಗೊತ್ತು ಮಾಡಿರುವ ಇಲಾಖಾ ಭಾಷಾ ಪರೀಕ್ಷೆಯಿಂದ ವಿನಾಯಿತಿ ದೊರೆಯುತ್ತದೆ. ನಮಗಿರುವ ಮಾಹಿತಿಯಂತೆ, ಶಾಲಾ ಹಂತದಲ್ಲಿ ಕನ್ನಡ ಬೋಧಿಸುವ ಶಿಕ್ಷಕರ ನೇಮಕಾತಿಗೆ ಪದವಿ ಹಂತದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಓದಿರಬೇಕು. ಹೆಚ್ಚಿನ ಮಾಹಿತಿಗಾಗಿ, ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ ಅಥವಾ ಶಿಕ್ಷಣ ಇಲಾಖೆಯ ದಿನಾಂಕ 23/02/2022 ರ ಸುತ್ತೋಲೆಯನ್ನು ಗಮನಿಸಿ: https://www.schooleducation.kar.nic.in/html/circularsgen.html

3. ನಾನು ಅಂತಿಮ ವರ್ಷದ ಎಂಎಸ್ಸಿ (ಗಣಿತ) ಓದುತ್ತಿದ್ದೇನೆ. ನನಗೆ ಐಟಿ ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂಬ ಆಸೆ. ಕೆಲವರು, ನಿನಗೆ ಶಿಕ್ಷಕಿ ಹೊರತು ಬೇರೆ ಯಾವ ಕೆಲಸ ಸಿಗುವುದಿಲ್ಲ ಎಂದು ಹೇಳುತ್ತಾರೆ. ಈ ಪದವಿ ನಂತರ ಸಿಗಬಹುದಾದ ಹುದ್ದೆಗಳ ಬಗ್ಗೆ ತಿಳಿಸಿ. ನಾನು ಬೇರೆ ಕೋರ್ಸ್ ಮಾಡಬೇಕೇ?

ಕವನ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು

ಎಂಎಸ್ಸಿ (ಗಣಿತ) ಕೋರ್ಸ್ ಮಾಡುವಾಗ ನಿಮ್ಮಲ್ಲಿ ಐಟಿ ಕ್ಷೇತ್ರದ ವೃತ್ತಿಪರ ಕೌಶಲಗಳಾದ ವಿಶ್ಲೇಷಣಾತ್ಮಕ ಕೌಶಲ, ಸಂಖ್ಯಾಶಾಸ್ತ್ರ, ಕ್ರಮಾವಳಿ, ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಇತ್ಯಾದಿಗಳು ಅಭಿವೃದ್ಧಿಯಾಗುತ್ತವೆ. ಹಾಗಾಗಿ, ಎಂ.ಎಸ್ಸಿ ಪದವಿ ಮುಗಿಸಿದ ಮೇಲೆ ಐಟಿ ಕ್ಷೇತ್ರದಲ್ಲಿ ಸಾಫ್ಟ್‌ವೇರ್ ಡೆವಲಪರ್, ಡೇಟಾ ಸೈಂಟಿಸ್ಟ್, ಡೇಟಾ ಅನಲಿಸ್ಟ್, ಆಪರೇಷನ್ಸ್ ರಿಸರ್ಚ್ ಅನಲಿಸ್ಟ್ ಮುಂತಾದ ಹುದ್ದೆಗಳನ್ನು ಪಡೆದುಕೊಳ್ಳಬಹುದು. ಅಗತ್ಯವಿದ್ದರೆ, ಈ ವಿಷಯಗಳಲ್ಲಿ ಅಲ್ಪಾವಧಿ ಡಿಪ್ಲೊಮಾ/ ಸರ್ಟಿಫಿಕೆಟ್ ಕೋರ್ಸ್ ಮಾಡಬಹುದು.

4. ನಾನು ಪಿಯುಸಿ ವಾಣಿಜ್ಯ ವಿಭಾಗದಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದೇನೆ. ಮುಂದೆ ಯಾವ ಪದವಿ ಮಾಡಬೇಕೆಂದು ತಿಳಿಯುತ್ತಿಲ್ಲ. ಎಲ್‌ಎಲ್‌ಬಿ ಮತ್ತು ಇನ್ನಿತರ ಪದವಿಗಳ ಬಗ್ಗೆ ಮಾಹಿತಿ ತಿಳಿಸಿ.

ಆನಂದ, ಊರು ತಿಳಿಸಿಲ್ಲ

ಪಿಯುಸಿ (ವಾಣಿಜ್ಯ ನಂತರ ಮಾಡಬಹುದಾದ ಕೋರ್ಸ್‌ಗಳೆಂದರೆ ಸಿಎ (ಫೌಂಡೇಷನ್ ಕೋರ್ಸ್ ಮುಖಾಂತರ), ಬಿಕಾಂ (ಜನರಲ್, ಆನರ್ಸ್, ಬ್ಯಾಂಕಿಂಗ್, ಫೈನಾನ್ಸ್, ಟೂರಿಸಮ್, ಪ್ರೊಫೆಷನಲ್, ಇಂಟರ್‌ನ್ಯಾಷನಲ್ ಫೈನಾನ್ಸ್ ಇತ್ಯಾದಿ), ಬಿಬಿಎ, ಬಿಸಿಎ, ಬಿಎಸ್‌ಡಬ್ಲ್ಯು, ಎಸಿಎಸ್, ಸಿಎಂಎ, 5 ವರ್ಷದ ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಇತ್ಯಾದಿ. ಹಾಗಾಗಿ, ನಿಮ್ಮ ಆಸಕ್ತಿ, ಸ್ವಾಭಾವಿಕ ಪ್ರತಿಭೆ ಮತ್ತು ವೃತ್ತಿ ಯೋಜನೆಯ ಅನುಸಾರ ಕೋರ್ಸ್ ಆಯ್ಕೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/watch?v=RW77sMi-ijY

5. ನನಗೆ ದ್ವಿತೀಯ ಪಿಯುಸಿ (ವಿಜ್ಞಾನ) ಯಲ್ಲಿ ಶೇ 77.16 ರಷ್ಟು ಅಂಕ ಬಂದಿದೆ. ಮುಂದೆ ಪದವಿಯಲ್ಲಿ ಪತ್ರಿಕೋದ್ಯಮ ಓದುವ ಆಸಕ್ತಿ ಇದೆ. ಆದರೆ, ಕೆಲವರು ಈ ಕ್ಷೇತ್ರದಲ್ಲಿ ಭವಿಷ್ಯವಿಲ್ಲ; ಈ ಪದವಿ ಕೇವಲ ಕಲಾ ವಿಭಾಗ ದಲ್ಲಿ ಸಾಮಾನ್ಯವಾಗಿ ತೇರ್ಗಡೆ ಹೊಂದಿದವರಿಗೆ ಮಾತ್ರ ಎನ್ನುತ್ತಿದ್ದಾರೆ. ಹಾಗಾಗಿ ಪತ್ರಿಕೋದ್ಯಮ ಕ್ಷೇತ್ರದ ಬಗ್ಗೆ ನನ್ನ ಅನುಮಾನಗಳನ್ನು ದಯವಿಟ್ಟು ಬಗೆಹರಿಸಿ ಮತ್ತು ಈ ವಿಭಾಗದಲ್ಲಿ ಮುಂದೆ ಸಿಗಬಹುದಾದ ಆಯ್ಕೆಗಳ ಬಗ್ಗೆ ತಿಳಿಸಿ.

ಎ.ಬಿ. ಪ್ರತಿಭಾ ಕುಮಾರಿ, ಮುದ್ದೇಬಿಹಾಳ, ವಿಜಯಪುರ

ಮಾಧ್ಯಮ ಕ್ಷೇತ್ರದಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಪಿಯುಸಿ ನಂತರ ಜರ್ನಲಿಸಮ್ ಮತ್ತು ಮಾಸ್ ಕಮ್ಯೂನಿಕೇಷನ್ ಪದವಿಯನ್ನು ಮಾಡುವುದರ ಜೊತೆಗೆ ವೃತ್ತಿ ಸಂಬಂಧಿತ ಕೌಶಲಗಳಾದ ಸಂವಹನ (ಓದುವಿಕೆ, ಬರವಣಿಗೆ, ಮಾತುಗಾರಿಕೆ, ನಿರೂಪಣೆ ಇತ್ಯಾದಿ), ಭಾಷಾ ಪರಿಣತಿ, ವಿಶ್ಲೇಷಣಾತ್ಮಕ ಕೌಶಲ, ದಿಟ್ಟತನ, ಸಮಯದ ನಿರ್ವಹಣೆ ಇತ್ಯಾದಿಗಳನ್ನೂ ಬೆಳೆಸಿಕೊಳ್ಳಬೇಕು. ಯಾವುದೇ ವಿಚಾರವನ್ನು ಒಪ್ಪಿಕೊಳ್ಳುವ ಮುನ್ನ ತನಿಖೆ ಅಥವಾ ಪರಿಶೋಧನೆ ಮಾಡುವ ಮನಸ್ಥಿತಿ ಇರಬೇಕು. ಇದಲ್ಲದೆ, ಬೇರೆ ವೃತ್ತಿಗಳಿಗೆ ಹೋಲಿಸಿದರೆ ಪತ್ರಕರ್ತರಿಗೆ ಹೆಚ್ಚಿನ ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿಯಿರುವುದು ಸಹಜ; ಹಾಗಾಗಿ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆಯನ್ನು ನಿಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಬೇಕು.

ಅತ್ಯಂತ ವಿಸ್ತಾರವಾದ ಈ ಕ್ಷೇತ್ರದಲ್ಲಿ ಮುದ್ರಣ ಮಾಧ್ಯಮ (ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿ), ಟೆಲಿವಿಷನ್, ರೇಡಿಯೊ, ಸಾಮಾಜಿಕ ಮಾಧ್ಯಮ, ವೆಬ್‌ಸೈಟ್ಸ್, ಬ್ಲಾಗ್ಸ್, ವಿಡಿಯೊ, ಪಾಡ್‌ಕಾಸ್ಟ್ ಇತ್ಯಾದಿ ವಲಯಗಳಲ್ಲಿದ್ದು, ನಿಮ್ಮ ಆಸಕ್ತಿ, ಅಭಿರುಚಿಯಂತೆ ಆಯ್ಕೆಯನ್ನು ಮಾಡಿಕೊಳ್ಳಬಹುದು. ಹೆಚ್ಚಿನ ತಜ್ಞತೆಗಾಗಿ, ಸಂಬಂಧಿತ ವಿಷಯದಲ್ಲಿ ಡಿಪ್ಲೊಮಾ/ಸ್ನಾತಕೋತ್ತರ ಕೋರ್ಸ್ ಮಾಡಬಹುದು.

ಕಳೆದೆರಡು ವರ್ಷಗಳಲ್ಲಿ, ಕೋವಿಡ್ ಪಿಡುಗಿನ ಕಾರಣದಿಂದ, ಸ್ವಲ್ಪ ಮಟ್ಟಿಗಿನ ಹಿನ್ನಡೆಯನ್ನು ಕಂಡಿದ್ದ ಮಾಧ್ಯಮ ಕ್ಷೇತ್ರ, ಈಗ ಮತ್ತೆ ಪ್ರಗತಿಯ ಹಾದಿಯಲ್ಲಿದೆ. ಹಾಗಾಗಿ, ನಿಮಗೆ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಇದ್ದಲ್ಲಿ, ಈ ಕ್ಷೇತ್ರದಲ್ಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಿ.

ತಿದ್ದುಪಡಿ: ಕಳೆದ ವಾರದ ಪ್ರಶ್ನೋತ್ತರದಲ್ಲಿ ಉಪ ವಲಯ ಅರಣ್ಯಾಧಿಕಾರಿ (ಡಿಆರ್‌ಎಫ್‌ಒ) ಹುದ್ದೆಗೆ ಪಿಯುಸಿ ನಂತರ ಅರ್ಹತೆ ಸಿಗುತ್ತದೆ ಎಂದು ತಿಳಿಸಲಾಗಿತ್ತು. ವಾಸ್ತವವಾಗಿ, ಈ ಹುದ್ದೆಗೆ ಬಿಎಸ್‌ಸಿ (ಅರಣ್ಯ ಶಾಸ್ತ್ರ) ಅಥವಾ ಬಿಎಸ್‌ಸಿ (ವಿಜ್ಞಾನ-ಕೆಲವು ಐಚ್ಛಿಕ ಪಠ್ಯಕ್ರಮಗಳಲ್ಲಿ) ಪದವಿಯ ನಂತರ ಅರ್ಹತೆ ಸಿಗುತ್ತದೆ.



ಸುಭಾಷಿತ

ಸುಳ್ಳನ್ನು ಹೇಳಲು ಒಂದು ನಿಮಿಷ ಸಾಕು, ಆದರೆ ಅದನ್ನು ನಿರಾಕರಿಸಲು ಒಂದು ಗಂಟೆ ಬೇಕು.

–ನೋಮ್ ಚೋಮ್‌ಸ್ಕಿ

ಗರ್ಭಪಾತ: ಅಮೆರಿಕದಲ್ಲಿನ ತೀರ್ಪು ಸ್ವಾತಂತ್ರ್ಯವಾದಿಗಳಿಗೆ ಕಳವಳ

1973ರಲ್ಲಿ ಅಮೆರಿಕದ ಸುಪ್ರೀಂ ಕೋರ್ಟ್, ರೋ ಮತ್ತು ವೇಡ್ ನಡುವಣ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಈಗ ಅಸಿಂಧುಗೊಳಿಸಲಾಗಿದೆ. ಇದು, ಅಮೆರಿಕದಲ್ಲಿ ಮಹಿಳೆಯರ ಹಕ್ಕುಗಳಿಗೆ ಆದ ಹಿನ್ನಡೆ. ಅಷ್ಟೇ ಅಲ್ಲ, ಪ್ರಜಾತಂತ್ರ ವ್ಯವಸ್ಥೆ ಇರುವ ಎಲ್ಲ ದೇಶಗಳ ಮಹಿಳೆಯರ ಹಕ್ಕುಗಳಿಗೆ ಮತ್ತು ಸ್ವಾತಂತ್ರ್ಯಕ್ಕೆ ಆದ ಹಿನ್ನಡೆಯೂ ಹೌದು. 1973ರ ತೀರ್ಪು ಅಮೆರಿಕದ ಮಹಿಳೆಯರಿಗೆ, ನಿರ್ದಿಷ್ಟ ಅವಧಿಯೊಳಗೆ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕನ್ನು ಕಲ್ಪಿಸಿತ್ತು. ಆದರೆ ಈಗ ಸುಪ್ರೀಂ ಕೋರ್ಟ್ ತನ್ನ ತೀರ್ಪಿನ ಮೂಲಕ ಆ ಸಾಂವಿಧಾನಿಕ ಹಕ್ಕಿಗೆ ಅಂತ್ಯ ಹಾಡಿದೆ. ಇದರಿಂದಾಗಿ, ಪ್ರತ್ಯೇಕ ಕಾನೂನು ಜಾರಿ ಮಾಡುವ ಮೂಲಕ ಗರ್ಭಪಾತವನ್ನು ನಿಷೇಧಿಸಲು ಅಮೆರಿಕದ ರಾಜ್ಯಗಳಿಗೆ ಅವಕಾಶ ದೊರೆತಿದೆ. 1973ನೇ ಇಸವಿಯ ತೀರ್ಪನ್ನು ಎತ್ತಿ ಹಿಡಿದಿದ್ದ, 1992ರ ಪ್ಲಾನ್ಡ್ ಪೇರೆಂಟ್‌ಹುಡ್ ಮತ್ತು ಕೇಸಿ ನಡುವಿನ ಪ್ರಕರಣದ ತೀರ್ಪನ್ನು ಕೂಡ ಈಗಿನ ತೀರ್ಪು ಅಸಿಂಧುಗೊಳಿಸಿದೆ. ಒಂಬತ್ತು ಮಂದಿ ನ್ಯಾಯಮೂರ್ತಿಗಳು ಇದ್ದ ನ್ಯಾಯಪೀಠವು 6–3ರ ಬಹುಮತದ ಆಧಾರದಲ್ಲಿ ಈ ತೀರ್ಪು ನೀಡಿದೆ. ಇದರ ಪರಿಣಾಮವಾಗಿ ರಾಜ್ಯಗಳು ಕಾಯ್ದೆ ರೂಪಿಸಿದರೆ, ಆ ರಾಜ್ಯಗಳಲ್ಲಿ ಗರ್ಭಪಾತದ ಹಕ್ಕು ಮಹಿಳೆಯರಿಗೆ ನಷ್ಟವಾಗುವ ಸಾಧ್ಯತೆ ಇದೆ. ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರದಲ್ಲಿ, ಗರ್ಭಪಾತವನ್ನು ಕಾನೂನುಬಾಹಿರ ಮಾಡುವ ಕಾನೂನನ್ನು ಹಲವು ರಾಜ್ಯಗಳು ಈಗಾಗಲೇ ಸಿದ್ಧಪಡಿಸಿ ಆಗಿದೆ. ಹಲವು ರಾಜ್ಯಗಳು ಹೊಸದಾಗಿ ನಿರ್ಬಂಧಗಳನ್ನು ಜಾರಿಗೆ ತರುವ ಸಾಧ್ಯತೆ ಇದೆ.



ಅಮೆರಿಕದಲ್ಲಿ ಈ ತೀರ್ಪಿನಿಂದಾಗಿ ಹಲವು ಬಗೆಯ ಸಾಮಾಜಿಕ, ರಾಜಕೀಯ ಪರಿಣಾಮಗಳು ಎದುರಾಗಬಹುದು

ಅಮೆರಿಕದ ಮಹಿಳೆಯರು ಗರ್ಭಧಾರಣೆಗೆ ಸಂಬಂಧಿಸಿದಂತೆ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಬಹುದೀರ್ಘ ಅವಧಿಗೆ ಕಾನೂನು ಹಾಗೂ ಇತರ ಬಗೆಯ ಹೋರಾಟಗಳನ್ನು ನಡೆಸಿದ ಪರಿಣಾಮವಾಗಿ ರೋ ಮತ್ತು ವೇಡ್ ನಡುವಿನ ಪ್ರಕರಣದ ತೀರ್ಪು ಬಂದಿತ್ತು. ಇದರ ನಂತರ ಅಮೆರಿಕದ ಮಹಿಳೆಯರಿಗೆ ತಮ್ಮ ದೇಹದ ಮೇಲೆ ಹೆಚ್ಚಿನ ಅಧಿಕಾರ ಬಂದಂತೆ ಆಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಇತರ ವೈಯಕ್ತಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಇದು ಮಹಿಳೆಯರ ಪಾಲಿಗೆ ಬಹಳ ದೊಡ್ಡ ಜಯವಾಗಿತ್ತು. ವ್ಯಕ್ತಿಗತ ನೆಲೆಯಲ್ಲಿನ ಸ್ವಾಯತ್ತೆಯ ಪರಿಕಲ್ಪನೆಗೆ ನ್ಯಾಯಾಲಯ ನೀಡಿದ ಮೊಹರು ಎಂಬಂತೆಯೂ ಈ ತೀರ್ಪನ್ನು ಗ್ರಹಿಸಲಾಗಿತ್ತು. ಅಂದರೆ, ಪ್ರಭುತ್ವದ ಮಧ್ಯಪ್ರವೇಶ ಇಲ್ಲದೆ ವ್ಯಕ್ತಿಗೆ ತನ್ನ ದೇಹದ ಮೇಲೆ ಹೆಚ್ಚಿನ ಅಧಿಕಾರ ಇರುತ್ತದೆ ಎಂಬುದಾಗಿ ಇದನ್ನು ವ್ಯಾಖ್ಯಾನಿಸಲಾಗಿತ್ತು. ಈಗ ಈ ವಾದಕ್ಕೆ ಪೆಟ್ಟು ಬಿದ್ದಿದೆ. ಹಲವು ಬಗೆಯ ಸ್ವಾತಂತ್ರ್ಯಗಳ ಪೈಕಿ ಅತ್ಯಂತ ವೈಯಕ್ತಿಕವಾದ, ಅತ್ಯಂತ ಮೂಲಭೂತವಾದ ಸ್ವಾತಂತ್ರ್ಯವೊಂದನ್ನು ಪ್ರಭುತ್ವವು ಮೊಟಕುಗೊಳಿಸುವುದನ್ನು ಸರಿ ಎಂಬಂತೆ ಈಗಿನ ತೀರ್ಪು ಅರ್ಥೈಸಿದೆ. ಅಮೆರಿಕದಲ್ಲಿ ಈ ತೀರ್ಪಿನ ಕಾರಣದಿಂದಾಗಿ ಹಲವು ಬಗೆಯ ಸಾಮಾಜಿಕ, ರಾಜಕೀಯ ಪರಿಣಾಮಗಳು ಎದುರಾಗಬಹುದು. ಅಮೆರಿಕದ ಒಕ್ಕೂಟ ವ್ಯವಸ್ಥೆಯ ಮೇಲೆ ಕೂಡ ಇದು ಕೆಟ್ಟ ಪರಿಣಾಮ ಬೀರಬಹುದು ಎಂಬ ಮಾತು ಇದೆ. ಅಲ್ಲಿ ರಾಜ್ಯಗಳ ನಡುವೆ ಹೆಚ್ಚು ಸಂಘರ್ಷ ಸೃಷ್ಟಿಯಾಗುವ ಸಾಧ್ಯತೆಗಳು ಇವೆ. ಮಹಿಳೆಯರ ಆರೋಗ್ಯದ ಮೇಲೆ, ಅತ್ಯಾಚಾರಕ್ಕೆ ತುತ್ತಾದವರ ಮೇಲೆ ಹಾಗೂ ಕೌಟುಂಬಿಕ ದೌರ್ಜನ್ಯಗಳಿಗೆ ಗುರಿಯಾದವರ ಮೇಲೆ ಇದರಿಂದಾಗಿ ಆಗುವ ಪರಿಣಾಮಗಳು ಗಣನೀಯವಾಗಿ ಇರಲಿವೆ. ಲಿವ್-ಇನ್ ಸಂಬಂಧದಲ್ಲಿ ಇರುವವರು ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು ಹೊಂದಿರುವ ಸ್ವಾತಂತ್ರ್ಯದ ಮೇಲೆಯೂ ಈ ತೀರ್ಪು ಗಂಭೀರ ಪರಿಣಾಮಗಳನ್ನು ಉಂಟುಮಾಡಲಿದೆ ಎಂಬ ಭೀತಿಯೂ ಇದೆ.

ಗರ್ಭಪಾತದ ಹಕ್ಕುಗಳ ವಿಚಾರವಾಗಿ ಸಂಪ್ರದಾಯವಾದಿಗಳ ಪ್ರತಿರೋಧ ಮತ್ತು ಇತರ ಹಕ್ಕುಗಳ ವಿಚಾರದಲ್ಲಿಯೂ ವ್ಯಕ್ತವಾಗುತ್ತಿರುವ ಪ್ರತಿರೋಧವು ಈಚಿನ ವರ್ಷಗಳಲ್ಲಿ ಅಮೆರಿಕದಲ್ಲಿ ಹೆಚ್ಚೆಚ್ಚು ಅನುಭವಕ್ಕೆ ಬರುತ್ತಿದೆ. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿದ್ದ ಅವಧಿಯು ಇಂಥದ್ದಕ್ಕೆಲ್ಲ ಇಂಬು ನೀಡಿತ್ತು. ಸಂಪ್ರದಾಯವಾದಿ ದೇಶಗಳಲ್ಲಿ ಒಂದಾಗಿರುವ ಐರ್ಲೆಂಡ್ ಕೂಡ ಜನಾಗ್ರಹಕ್ಕೆ ಮಣಿದು ಗರ್ಭಪಾತಕ್ಕೆ ಸಂಬಂಧಿಸಿದ ಕಾನೂನುಗಳನ್ನು ಒಂದಿಷ್ಟು ಸಡಿಲಗೊಳಿಸುವ ಕೆಲಸವನ್ನು ಕೆಲವು ವರ್ಷಗಳ ಹಿಂದೆ ಮಾಡಿದೆ. ಆದರೆ, ಈಗ ಹಲವು ದೇಶಗಳಲ್ಲಿ ಸಂಪ್ರದಾಯವಾದಿ ಅಲೆಯ ಕಾರಣದಿಂದಾಗಿ ಸ್ವಾತಂತ್ರ್ಯದ ವಾತಾವರಣದ ಮೇಲೆ ಕರಿಮೋಡಗಳು ಆವರಿಸುತ್ತಿವೆ. ಸಾಂವಿಧಾನಿಕ ಹಕ್ಕುಗಳನ್ನು ಕಾಯುವ ವಿಚಾರದಲ್ಲಿ ಅಮೆರಿಕವು ಯಾವಾಗಲೂ ಮುಂಚೂಣಿಯಲ್ಲಿ ಇರುವ ದೇಶ. ಸಾಂವಿಧಾನಿಕ ಮತ್ತು ಪ್ರಜಾತಾಂತ್ರಿಕ ಹಕ್ಕುಗಳ ಮೇಲಿನ ಆಕ್ರಮಣವನ್ನು ತಡೆಯುವ ಅತ್ಯುತ್ತಮ ವ್ಯವಸ್ಥೆ ಅಲ್ಲಿದೆ ಎಂಬ ನಂಬಿಕೆ ಇದೆ. ಹೀಗಾಗಿಯೇ ಅಲ್ಲಿ ಪ್ರತಿಗಾಮಿ ವಿದ್ಯಮಾನಗಳು ನಡೆದಾಗ ಇತರ ದೇಶಗಳಲ್ಲಿಯೂ ಕಳವಳ ಮೂಡುತ್ತದೆ.

ಮಹತ್ವಾಕಾಂಕ್ಷೆಯ ಯೋಜನೆ– ತೊಡಕು ನಿವಾರಣೆಗೆ ಬೇಕಿದೆ ತ್ವರಿತ ಸ್ಪಂದನ

ಇ–ವಾಹನ: ಗುರಿ ಸಾಧನೆಗೆ ಸವಾಲು



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಈ ವರ್ಷದ ಮೇ ತಿಂಗಳ ಆರಂಭದಲ್ಲಿ ನಮ್ಮ ದೇಶದಲ್ಲಿ ಒಟ್ಟು 12 ಲಕ್ಷ ಬ್ಯಾಟರಿಚಾಲಿತ ಅಥವಾ ಇ-ವಾಹನಗಳಿದ್ದು, ವರ್ಷಾಂತ್ಯದ ವೇಳೆಗೆ ಈ ಸಂಖ್ಯೆ 40 ಲಕ್ಷ ಆಗುವುದೆಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಮುಂದಿನ ಎರಡು ವರ್ಷಗಳಲ್ಲಿ ಅದು 3 ಕೋಟಿಯಾಗುವ ನಿರೀಕ್ಷೆ ಇದೆ. ಇದರಲ್ಲಿ ಶೇ 60ಕ್ಕೂ ಹೆಚ್ಚು ಭಾಗ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು ಆಗಿರಲಿವೆ.

2030ರ ವೇಳೆಗೆ ದೇಶದಲ್ಲಿ ಮಾರಾಟವಾಗುವ ಒಟ್ಟು ಖಾಸಗಿ ಕಾರುಗಳ ಶೇ 30 ಭಾಗ, ವಾಣಿಜ್ಯ ವಾಹನಗಳ ಶೇ 70 ಭಾಗ, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಶೇ 80 ಭಾಗ ಇ-ವಾಹನಗಳು ಆಗಿರಬೇಕೆಂಬ ಗುರಿಯನ್ನು ಸರ್ಕಾರ ನಿಗದಿಪಡಿಸಿದೆ. ಈ ಮಹತ್ವಾಕಾಂಕ್ಷೆಯ ಗುರಿಯನ್ನು ಸಾಧಿಸಬೇಕಾದರೆ ಇ-ವಾಹನ ಕ್ಷೇತ್ರದಲ್ಲಿನ ಹಲವಾರು ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು.


ಇ-ವಾಹನಗಳ ಸಂಖ್ಯೆ ಹೆಚ್ಚಬೇಕಾದರೆ ಅವುಗಳ ಬೆಲೆ ಮೊದಲು ಕಡಿಮೆಯಾಗಬೇಕು. ಪೆಟ್ರೋಲ್, ಡೀಸೆಲ್ ವಾಹನಗಳಿಗಿಂತ ಇ-ವಾಹನಗಳ ಬೆಲೆ ಸರಿಸುಮಾರು ಶೇ 50ರಷ್ಟು ಹೆಚ್ಚು. ಉದಾಹರಣೆಗೆ, ಒಂದು ಹೆಸರಾಂತ ಕಂಪನಿಯ ಪೆಟ್ರೋಲ್ ಕಾರಿನ ಆರಂಭಿಕ ಬೆಲೆ ₹ 7 ಲಕ್ಷವಾದರೆ, ಅದೇ ಕಾರಿನ ಬ್ಯಾಟರಿಚಾಲಿತ ಮಾದರಿಯ ಬೆಲೆ ₹ 13 ಲಕ್ಷ. ಇನ್ನೊಂದು ಮಾದರಿಯ ಇ-ವಾಹನದ ಬೆಲೆ ₹ 15 ಲಕ್ಷ. ಅದರಲ್ಲಿರುವ ಬ್ಯಾಟರಿಯ ಬೆಲೆ ₹ 6 ಲಕ್ಷ. ಹೆಚ್ಚಿನ ಬಳಕೆದಾರರಿಗೆ ಕೈಗೆಟುಕದಷ್ಟು ದುಬಾರಿ. ಇ- ವಾಹನಗಳಲ್ಲಿ ಬಳಕೆಯಾಗುವ ಬ್ಯಾಟರಿಗಳನ್ನು 5-6 ವರ್ಷಗಳಲ್ಲಿ ಬದಲಿಸುವುದು ಅಗತ್ಯ. ಅದು ಕೂಡ ದುಬಾರಿಯೇ.

ಪ್ರತಿಸಲ ಬ್ಯಾಟರಿ ಚಾರ್ಜ್ ಮಾಡುವಾಗಲೂ ವಾಹನವನ್ನು ಎರಡು– ಮೂರು ಗಂಟೆಗಳ ಕಾಲ ಕಡ್ಡಾಯವಾಗಿ ನಿಲ್ಲಿಸಬೇಕು. ಒಮ್ಮೆ ಸಂಪೂರ್ಣವಾಗಿ ಚಾರ್ಜ್ ಮಾಡಿದ ನಂತರ ಎಷ್ಟು ದೂರ ಓಡುತ್ತದೆ ಎಂಬ ಅಂಶವೂ ಬಹು ಮುಖ್ಯ. ಹೆಚ್ಚು ದೂರ ಸಂಚರಿಸುವವರು ಚಾರ್ಜ್ ಮುಗಿಯುವುದರ ಒಳಗಾಗಿ ಮುಂದಿನ ಚಾರ್ಜಿಂಗ್ ಸ್ಟೇಶನ್ ತಲುಪಬೇಕು. ಇದು ‘ರೇಂಜ್ ಆ್ಯಂಕ್ಸೈಟಿ’ ಎಂಬ ಮಾನಸಿಕ ಒತ್ತಡಕ್ಕೆ ಕಾರಣವಾಗುವ ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ.

2022- 23ರ ಮುಂಗಡಪತ್ರ ಮಂಡಿಸುವ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವರು ಈ ಎಲ್ಲ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಲು ಅಗತ್ಯವಾದ ನೀತಿಯೊಂದನ್ನು ರೂಪಿಸುವ ಸೂಚನೆ ನೀಡಿದ್ದರು. ಅದರಂತೆ ಈ ವರ್ಷದ ಏಪ್ರಿಲ್‌ನಲ್ಲಿ ನೀತಿ ಆಯೋಗವು ‘ಬ್ಯಾಟರಿ ವಿನಿಮಯ ಕರಡು ನೀತಿ’ಯನ್ನು (ಡ್ರಾಫ್ಟ್ ಬ್ಯಾಟರಿ ಸ್ವ್ಯಾಪಿಂಗ್ ಪಾಲಿಸಿ) ಸಾರ್ವಜನಿಕರ, ಉದ್ಯಮದ, ಪರಿಣತರ ಅವಗಾಹನೆ, ಸಲಹೆಗಳಿಗಾಗಿ ಬಿಡುಗಡೆ ಮಾಡಿತು. ಈ ನೀತಿಯ ಮುಖ್ಯ ಅಂಶವೆಂದರೆ, ಡಿಸ್‌ಚಾರ್ಜ್ ಆದ ಬ್ಯಾಟರಿಯನ್ನು, ಸಂಪೂರ್ಣವಾಗಿ ಚಾರ್ಜ್ ಆದ ಬ್ಯಾಟರಿಯೊಂದಿಗೆ ವಿನಿಮಯಕ್ಕೆ ಇರುವ ಅವಕಾಶ. ಪೆಟ್ರೋಲ್ ಬಂಕ್‌ನಲ್ಲಿ ಇಂಧನ ತುಂಬಿಸಿಕೊಳ್ಳುವ ರೀತಿಯಲ್ಲಿಯೇ, ‘ಬ್ಯಾಟರಿ ವಿನಿಮಯ ನಿಲ್ದಾಣ’ಗಳಲ್ಲಿ (ಬ್ಯಾಟರಿ ಸ್ವ್ಯಾಪಿಂಗ್ ಸ್ಟೇಶನ್) ಬ್ಯಾಟರಿಯನ್ನು ಬದಲಿಸಿಕೊಳ್ಳಬಹುದು.

ಈ ಪ್ರಸ್ತಾವಿತ ನೀತಿಯು ವಾಹನ ಮತ್ತು ಬ್ಯಾಟರಿಗಳನ್ನು ಪ್ರತ್ಯೇಕಿಸುತ್ತದೆ. ಹೀಗಾಗಿ ಬಳಕೆದಾರನು ಬ್ಯಾಟರಿ ಇಲ್ಲದ ವಾಹನವನ್ನು ಮಾತ್ರ ಕೊಳ್ಳುತ್ತಾನೆ. ಬ್ಯಾಟರಿಯನ್ನು ಒದಗಿಸುವ ಕಂಪನಿಗೆ ಚಂದಾದಾರನಾಗಿ, ಬ್ಯಾಟರಿಯನ್ನು ಗುತ್ತಿಗೆಯ ಮೇಲೆ ಪಡೆದು ವಾಹನದಲ್ಲಿ ಬಳಸುತ್ತಾನೆ. ಪ್ರತಿಸಲ ಬ್ಯಾಟರಿಯನ್ನು ವಿನಿಮಯ ಮಾಡಿಕೊಂಡಾಗಲೂ ನಿಗದಿತ ಶುಲ್ಕವನ್ನು ಕಂಪನಿಗೆ ನೀಡುತ್ತಾನೆ. ಇ-ವಾಹನದ ಉತ್ಪಾದಕರು ವಾಹನದಲ್ಲಿ ಬ್ಯಾಟರಿಯನ್ನು ಅಳವಡಿಸದ ಕಾರಣ, ವಾಹನದ ಮಾರಾಟದ ಬೆಲೆ ಶೇ 30ರಿಂದ ಶೇ 60ರಷ್ಟು ಕಡಿಮೆಯಾಗಿ, ಪೆಟ್ರೋಲ್ ವಾಹನದ ಬೆಲೆಯ ಮಟ್ಟಕ್ಕೇ ಬರಬಹುದು. ಬ್ಯಾಟರಿ ವಿನಿಮಯ ನಿಲ್ದಾಣಗಳಲ್ಲಿ, ಬ್ಯಾಟರಿಗಳನ್ನು ಕೆಲವೇ ನಿಮಿಷಗಳಲ್ಲಿ ಬದಲಿಸುವ ವ್ಯವಸ್ಥೆ ಬರಲಿದೆ. ಬ್ಯಾಟರಿ ವಿನಿಮಯ ನಿಲ್ದಾಣಗಳನ್ನು ಸ್ಥಾಪಿಸಲು ವಿಶಾಲವಾದ ಜಾಗ ಅನಗತ್ಯ. ಪೆಟ್ರೋಲ್ ಬಂಕ್ ಸ್ಥಾಪಿಸಲು ಬೇಕಾದ ಜಾಗದ ಶೇ 20ರಷ್ಟು ಸ್ಥಳದಲ್ಲಿ ಸ್ವ್ಯಾಪಿಂಗ್ ಸ್ಟೇಶನ್ ನಿರ್ಮಿಸಬಹುದು.

ನೀತಿ ಆಯೋಗ ಪ್ರಕಟಿಸಿರುವ ಕರಡು ನೀತಿಯಲ್ಲಿ, ವಿನಿಮಯ ಮಾಡಿಕೊಳ್ಳಬಹುದಾದ ಬ್ಯಾಟರಿಗಳಿಗೆ, ಅವುಗಳನ್ನು ಉತ್ಪಾದಿಸುವ ಕಂಪನಿಗಳಿಗೆ, ಬಳಕೆದಾರರಿಗೆ ದೊರೆಯಲಿರುವ ಸವಲತ್ತು, ರಿಯಾಯಿತಿ, ಪ್ರೋತ್ಸಾಹಕಗಳ ಪ್ರಸ್ತಾಪವಿದೆ. ಬ್ಯಾಟರಿಗಳ ಸುರಕ್ಷತೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಿ ಅವುಗಳ ವಿವರವಾದ ಪರೀಕ್ಷೆ ಮತ್ತು ಗುಣಮಟ್ಟ ಖಾತರಿಗೆ ಕ್ರಮಗಳನ್ನು ಸೂಚಿಸಲಾಗಿದೆ. 2015ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ‘ಫಾಸ್ಟರ್ ಅಡಾಪ್ಷನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ ಆಫ್ ಹೈಬ್ರಿಡ್ ಆ್ಯಂಡ್ ಎಲೆಕ್ಟ್ರಿಕ್ ವೆಹಿಕಲ್ಸ್’ ಯೋಜನೆಯಡಿ ನಿಗದಿಪಡಿಸಲಾದ ಅಥವಾ ಅದಕ್ಕಿಂತ ಉತ್ತಮ ಗುಣಮಟ್ಟದ ಬ್ಯಾಟರಿಗಳನ್ನು ಮಾತ್ರ ಈ ವಿನಿಮಯ ಪ್ರಕ್ರಿಯೆಯಲ್ಲಿ ಬಳಸಲು ಅವಕಾಶವಿದೆ. ಉತ್ಪಾದನೆಯ ಹಂತದಲ್ಲೇ ಪ್ರತಿಯೊಂದು ಬ್ಯಾಟರಿಗೂ ಅನನ್ಯ ಗುರುತಿನ ಸಂಖ್ಯೆ ನೀಡಿ, ಬ್ಯಾಟರಿಯ ಜೀವಿತಾವಧಿಯ ಎಲ್ಲ ವಿವರಗಳನ್ನೂ ದಾಖಲಿಸುವ, ಅಗತ್ಯವಾದಾಗ ದೂರದಿಂದಲೇ ಬ್ಯಾಟರಿಯನ್ನು ನಿಷ್ಕ್ರಿಯಗೊಳಿಸುವ ತಂತ್ರಜ್ಞಾನ ಅಳವಡಿಸುವ ಯೋಜನೆಯಿದೆ.



ಈ ನೀತಿ ಅನುಮೋದನೆಗೊಂಡು ಅನುಷ್ಠಾನಕ್ಕೆ ಬಂದ ಮೊದಲ ಎರಡು ವರ್ಷಗಳಲ್ಲಿ, 40 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ನಗರಗಳಲ್ಲಿ ಬ್ಯಾಟರಿ ವಿನಿಮಯ ನಿಲ್ದಾಣಗಳು, ಬ್ಯೂರೊ ಆಫ್ ಎನರ್ಜಿ ಎಫಿಷಿಯನ್ಸಿ ಸಂಸ್ಥೆಯ ಮಾರ್ಗದರ್ಶನದಲ್ಲಿ ಅಸ್ತಿತ್ವಕ್ಕೆ ಬರಲಿವೆ. ಮುಂದೆ 5 ಲಕ್ಷ ಜನಸಂಖ್ಯೆಯನ್ನು ಮೀರಿದ ನಗರಗಳಿಗೆ ಯೋಜನೆ ವಿಸ್ತರಿಸಲಿದೆ.

ಈ ಕರಡು ನೀತಿಗೆ ಸಾರ್ವಜನಿಕರು, ಬಳಕೆದಾರರು, ಉದ್ಯಮಿಗಳ ಸಲಹೆ, ಸೂಚನೆ, ಟೀಕೆ ಟಿಪ್ಪಣಿಗಳಿಗೆ ನೀಡಲಾಗಿದ್ದ ಕಾಲಾವಕಾಶ ಕೊನೆಗೊಂಡಿದ್ದು, ಅವುಗಳ ಪರಿಶೀಲನೆ ಪ್ರಾರಂಭವಾಗಿದೆ. ದೇಶದ ನಾಸ್ಕಾಮ್ ಸಂಸ್ಥೆ ಈ ಕರಡು ನೀತಿಯನ್ನು ಸ್ವಾಗತಿಸಿದ್ದು, ಪ್ರತೀ ವಿನಿಮಯಕ್ಕೆ ಕನಿಷ್ಠ 80 ಕಿ.ಮೀ. ನೀಡುವಂತಹ ಬ್ಯಾಟರಿಗಳನ್ನು ಮಾತ್ರ ಬಳಸಬೇಕೆಂಬ ಸಲಹೆ ಮಾಡಿದೆ. ಬ್ಯಾಟರಿ ವಿನಿಮಯದ ಪರಿಕಲ್ಪನೆ ಯಶಸ್ವಿಯಾಗಬೇಕಾದರೆ ಬ್ಯಾಟರಿ ಉತ್ಪಾದಕರು ಮತ್ತು ವಾಹನ ಉತ್ಪಾದಕರ ನಡುವೆ ಅತಿ ನಿಕಟವಾದ ವೃತ್ತಿನಿರತ, ಕೌಶಲಾಧಾರಿತ, ಸಹಕಾರ ಸಂಬಂಧ ಅಗತ್ಯವೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ವಿವಿಧ ಸಂಸ್ಥೆಗಳು ಉತ್ಪಾದಿಸುವ ಬ್ಯಾಟರಿಗಳು ಒಂದೇ ಸ್ವರೂಪದವಾಗಿದ್ದು, ಅವುಗಳ ನಡುವೆ ಗುಣಮಟ್ಟ, ಕಾರ್ಯದಕ್ಷತೆ ಮುಂತಾದವುಗಳಲ್ಲಿ ಪರಸ್ಪರ ಹೊಂದಾಣಿಕೆಯಿದ್ದಾಗ ಮಾತ್ರ ವಿನಿಮಯ ಸಾಧ್ಯ. ಈ ರೀತಿಯ ತಾಂತ್ರಿಕ ಏಕರೂಪತೆಯಿಂದ ಬ್ಯಾಟರಿ ಉತ್ಪಾದಿಸುವ ವಿವಿಧ ಕಂಪನಿಗಳ ನಡುವೆ ಆರೋಗ್ಯಕರ ಸ್ಪರ್ಧೆಯೇ ಇಲ್ಲದಂತಾಗಿ ಸಂಶೋಧನೆ, ಅಭಿವೃದ್ಧಿ, ನವನಿರ್ಮಿತಿಗಳು ನೆಲ ಕಚ್ಚಬಹುದು ಎಂಬ ಕಳವಳವೂ ವ್ಯಕ್ತವಾಗಿದೆ. ಕಾರುಗಳಲ್ಲಿ ಬ್ಯಾಟರಿಗಳನ್ನು ವಿನಿಮಯಕ್ಕೆ ಅನುವುಗೊಳಿಸುವಾಗ ವಿಶೇಷ ಸವಾಲುಗಳು ಎದುರಾಗುತ್ತವೆ. ಬಳಕೆದಾರರಿಗೆ ಬ್ಯಾಟರಿಯ ಮಾಲೀಕತ್ವ ಇದ್ದಲ್ಲಿ ಮಾತ್ರ ಅವರು ಬ್ಯಾಟರಿಯನ್ನು ಎಚ್ಚರದಿಂದ ಬಳಸುತ್ತಾರೆ. ಹೀಗಾಗಿ ಈ ವಿನಿಮಯ ಮಾದರಿಯಲ್ಲಿ ಅವುಗಳ ಗುಣಮಟ್ಟ ಬೇಗ ಹಾಳಾಗುತ್ತದೆ ಎಂಬ ಅಭಿಪ್ರಾಯವಿದೆ. ಜೀವಿತಾವಧಿ ಮುಗಿದು, ನಿರರ್ಥಕವಾದ ಬ್ಯಾಟರಿಗಳ ನಿರ್ವಹಣೆಯ ಸವಾಲುಗಳ ಬಗೆಗೂ ಪರಿಣತರು ಎಚ್ಚರಿಸಿದ್ದಾರೆ. ಈ ಎಲ್ಲ ಸಮಸ್ಯೆ, ಸವಾಲುಗಳ ಬಗ್ಗೆ 250ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಕೆಲಸ ಮಾಡುತ್ತಿವೆಯೆಂದು ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಈ ಮಧ್ಯೆ, ಈ ಯೋಜನೆ ಒದಗಿಸಿರುವ ವ್ಯಾಪಾರ ಅವಕಾಶಗಳನ್ನು ಬಳಸಿಕೊಂಡಿರುವ ಓಲಾ ಸಂಸ್ಥೆಯು ದೆಹಲಿಯ ಗುರುಗ್ರಾಮದಲ್ಲಿ ಇ-ರಿಕ್ಷಾಗಳಿಗಾಗಿ 14 ಬ್ಯಾಟರಿ ವಿನಿಮಯ ಘಟಕಗಳನ್ನು ಸ್ಥಾಪಿಸಿ, ಪ್ರತಿದಿನ 280 ಬ್ಯಾಟರಿಗಳನ್ನು ವಿನಿಮಯ ಮಾಡುತ್ತಿದೆ. ಬೌನ್ಸ್ ಇನ್‌ಫಿನಿಟಿ, ಬೆಂಗಳೂರಿನಲ್ಲಿ ದ್ವಿಚಕ್ರ ವಾಹನಗಳಿಗಾಗಿ 150 ಬ್ಯಾಟರಿ ವಿನಿಮಯ ನಿಲ್ದಾಣಗಳನ್ನು ಸ್ಥಾಪಿಸಿದೆ.

2023ರ ಮಧ್ಯಭಾಗದ ವೇಳೆಗೆ, ಬ್ಯಾಟರಿ ವಿನಿಮಯ ಸೌಲಭ್ಯ ಬಳಸಿಕೊಂಡ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರದ ಸರಕು ಸಾಗಣೆಯ ಹಗುರ ವಾಹನಗಳು ನಮ್ಮ ರಸ್ತೆಗಳಲ್ಲಿ ವ್ಯಾಪಕವಾಗಿ ಸಂಚರಿಸಬೇಕೆಂಬುದು ಸರ್ಕಾರದ ನಿರೀಕ್ಷೆ.

ಚುರುಮುರಿ



ಏಕವೇ ಮಂತ್ರ!

• ಸುಮಂಗಲಾ

‘ಸತ್ಯಕ್ಕೇ ಜಯ, ಮೋದಿಗೇ ಜಯ’ ಎಂದು ಬೆಕ್ಕಣ್ಣ ರಾಗವಾಗಿ ಹಾಡುತ್ತಿತ್ತು.

‘ಬೆಳ್ಬೆಳಗ್ಗೆ ಏನು ರಾಗ ತೆಗೆದೀಯಲೇ’ ಅಂತ ಬೈದರೆ, ‘ನಮ್ಮ ಮೋದಿಮಾಮಂಗೆ ಸುಪ್ರೀಂ ಕೋರ್ಟ್ ಕ್ಲೀನ್ ಚಿಟ್ ಕೊಟ್ಟೈತಿ, ಗೊತ್ತೈತಿಲ್ಲೋ... ಪಾಪ... ಹದಿನೇಳ್ ವರ್ಷದಿಂದ ಸುಳ್ ಆರೋಪ ಸಹಿಸಿಕೆಂಡು ಎಷ್ಟು ಸಂಕಟಪಟ್ಟಾರೆ’ ಎಂದು ಕಣ್ಣೊರೆಸಿಕೊಂಡಿತು.

ಮತ್ತೆ ತುಸುಹೊತ್ತಿಗೆ ‘ಸತ್ಯಕ್ಕೇ ಜಯ, ಶಿಂಧೆಗೇ ಜಯ’ ಎಂದು ಹಾಡತೊಡಗಿತು.

‘ಶಿಂಧೆಗೇ ಜಯ ಅಷ್ಟೇ ಎದಕ್ಕ, ಆಪರೇಶನ್ ಕಮಲಕ್ಕೇ ಜಯ ಅಂತನೂ ಜೋಡಿಸಿಕೊಂಡು ಹಾಡು’ ಎಂದು ನಾನು ಕಿಚಾಯಿಸಿದೆ.

‘ಹಂಗೆ ಸೇರಿಸಿಕೊಂಡು ಹಾಡಬೇಕಂದ್ರ ಭಾಳ ಅದಾವು. ಚಕ್ರತೀರ್ಥರಿಗೆ ಜಯ, ನಲ್ವತ್ತು ಪರ್ಸೆಂಟಿಗೆ ಜಯ, ಬುಲ್ಡೋಜರ್‌ಗೆ ಜಯ... ಪಟ್ಟಿ ಉದ್ದ ಐತಿ. ಹಿಂಗಾಗಿ ಎಲ್ಲಿಂದ ಶುರುಮಾಡಿ, ಎಲ್ಲಿಗೆ ನಿಲ್ಲಿಸಬೇಕಂತ ತಿಳಿಯಂಗಿಲ್ಲ’ ಎಂದು ಯೋಚನಾಮಗ್ನವಾಗಿ ಹೇಳಿತು.

‘ಹೋಗಲಿಬಿಡು... ದೊಡ್ಡೋರ ಮಾತು ನಮಗ್ಯಾಕ, ನಮ್ಮ ಚಿಂತೆಯೇ ನಮಗೆ ಹಾಸಲುಂಟು ಹೊದೆಯಲುಂಟು’ ಎಂದು ಒಣವೇದಾಂತವನ್ನೂ ಹೊಸೆಯಿತು.

‘ನಿನಗೇನ್ ಚಿಂತಿ... ನೀನೇನ್ ದುಡಿಬೇಕಾ, ದುಃಖ ಪಡಬೇಕಾ? ದುಡಿಯೋಳು ನಾನು, ಕುಂತು ತಿನ್ನೂದು ನೀನು’ ಎಂದು ನಾನು ಬೈದರೆ, ಈ ಕಿವಿಯಲ್ಲಿ ಕೇಳಿ, ಆ ಕಿವಿಯಲ್ಲಿ ಬಿಟ್ಟು, ‘ಆಪರೇಶನ್ ಕಮಲ ತಡೀಬೇಕಂದ್ರ ಒಂದೇ ಪರಿಹಾರ ಐತಿ...’ ಎಂದು ಮಹಾಜ್ಞಾನಿಯ ಹಾಗೆ ಹೇಳಿತು.

‘ದೇಶದಾಗಿರೋ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು, ಒಟ್ಟು ಎಲ್ಲಾ ಪಕ್ಷಗಳನ್ನು ಬ್ಯಾನ್ ಮಾಡಿ, ಎಲ್ಲಾ ಥರದ ವಿರೋಧಿಗಳನ್ನು, ಪ್ರಶ್ನೆ ಮಾಡೋರನ್ನು ರಾಷ್ಟ್ರದ್ರೋಹಿಗಳು, ಭಯೋತ್ಪಾದಕರು ಅಂತ್ಹೇಳಿ ಒಂದು ಪ್ರತ್ಯೇಕ ಜೈಲಿನೊಳಗೆ ತಳ್ಳಬೇಕು. ಕಮಲಕ್ಕನ ಪಕ್ಷವೊಂದೇ ಅಧಿಕೃತ ಪಕ್ಷ ಅಂತ ಘೋಷಣೆ ಮಾಡಬಕು. ಏಕ್ ಭಾರತ್, ಏಕ್ ಭಾಷಾ, ಏಕ್ ಪಕ್ಷ, ಏಕ್ ನಾಯಕ್... ಎಲ್ಲಾನೂ ಏಕ್... ಆವಾಗ ಏನೂ ದೋನಂಬರ್ ಬಿಜಿನೆಸ್ಸೇ ನಡಿಯಂಗಿಲ್ಲ’ ಎಂದು ಖೊಳ್ಳನೆ ನಕ್ಕಿತು!

ದಿನದ ಟ್ವೀಟ್

ನೆರವಿಗಾಗಿ ಕಾಯುತ್ತಿದ್ದೇವೆ...



ಪ್ರಿಯ ಜಗತ್ತು, ಅಸ್ಸಾಂಗೆ ನಿನ್ನ ನೆರವಿನ ಅಗತ್ಯವಿದೆ. ಒಂದು ತಿಂಗಳ ಅವಧಿಯಲ್ಲಿ ಎರಡು ಬಾರಿ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಪ್ರವಾಹವನ್ನು ಅಸ್ಸಾಂ ಎದುರಿಸುತ್ತಿದೆ. ಜನರು ಬದುಕುಳಿಯಲು ಕುಡಿಯುವ ನೀರು, ವಸತಿ, ನೈರ್ಮಲ್ಯ ಮತ್ತು ಆಹಾರ ಬೇಕಾಗಿದೆ. ಈಗಾಗಲೇ ನೂರಾರು ಮಂದಿ ಸತ್ತಿದ್ದಾರೆ ಮತ್ತು 70 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ.

#AssamFloods

ಲಿಸಿಪ್ರಿಯಾ ಕಂಗುಜಮ್, ಬಾಲ ಪರಿಸರವಾದಿ

ಕಿಡಿನುಡಿ



ಶಿವಸೇನಾದ ಬಂಡಾಯ ಶಾಸಕರು ತಂಗಿರುವ ಸ್ಥಳದ ಫೋಟೊಗಳನ್ನು ನೋಡಿದಾಗ, ಅದು ಹೋಟೆಲ್‌ನಂತೆ ಕಾಣಿಸುತ್ತಿಲ್ಲ, ಬಿಗ್‌ಬಾಸ್ ಮನೆಯಂತೆ ಗೋಚರಿಸುತ್ತಿದೆ. ಅಲ್ಲಿರುವವರು ಕುಡಿಯುತ್ತಿದ್ದಾರೆ, ತಿನ್ನುತ್ತಿದ್ದಾರೆ, ಆಟವಾಡುತ್ತಿದ್ದಾರೆ.

ಸಂಜಯ ರಾವುತ್, ಶಿವಸೇನಾ ಮುಖ್ಯ ವಕ್ತಾರ

25 ವರ್ಷಗಳ ಹಿಂದೆ

ಶುಕ್ರವಾರ, 27-6-1997

• ರಾಜ್ಯಗಳಿಗೆ ಶೇ 29 ತೆರಿಗೆ ವಾಪಸ್

ಅರಿಯಾಲೂರು, ಜೂನ್ 26 (ಯುಎನ್‌ಐ)– ಹತ್ತನೇ ಹಣಕಾಸು ಆಯೋಗದ ಶಿಫಾರಸಿನಂತೆ ಪ್ರಸಕ್ತ ಹಣಕಾಸು ವರ್ಷದಿಂದ ಎಲ್ಲ ತೆರಿಗೆಗಳಿಂದ ಸಂಗ್ರಹವಾಗುವ ವರಮಾನದ ಶೇಕಡ 29ರಷ್ಟನ್ನು ರಾಜ್ಯಗಳಿಗೆ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಹೇಳಿದ್ದಾರೆ.

ಇದು ಜಾರಿಗೆ ಬಂದಿದ್ದೇ ಆದಲ್ಲಿ ರಾಜ್ಯಗಳಿಗೆ ವಾರ್ಷಿಕವಾಗಿ ಕೇಂದ್ರ ಸರ್ಕಾರ ನೀಡುವ 40,000 ಕೋಟಿ ರೂಪಾಯಿಗಳಿಗೆ ಮೇಲಾಗಿ ಸುಮಾರು 3,000 ಕೋಟಿ ರೂಪಾಯಿ ದೊರೆಯಲಿದೆ ಎಂದರು.

• ಕಾವೇರಿ: ಅಧಿಸೂಚನೆ ತಿರಸ್ಕರಿಸಲು ಆಗ್ರಹ

ಬೆಂಗಳೂರು, ಜೂನ್ 26– ಕಾವೇರಿ ನೀರು ಹಂಚಿಕೆ ಕುರಿತು ನ್ಯಾಯ ಮಂಡಳಿ ಆದೇಶದಂತೆ ಕೇಂದ್ರ ಸರ್ಕಾರ ಹೊರಡಿಸಿರುವ ಕರಡು ಅಧಿಸೂಚನೆ ಕರ್ನಾಟಕದ ಪಾಲಿಗೆ ಕರಾಳವಾಗಿದ್ದು, ರಾಜ್ಯ ಸರ್ಕಾರ ಇದನ್ನು ತಿರಸ್ಕರಿಸಬೇಕು ಎಂದು ಕಾಂಗ್ರೆಸ್ ಮುಖಂಡರು ಇಂದಿಲ್ಲಿ ಆಗ್ರಹಪಡಿಸಿ ಕೇಂದ್ರದ ಕ್ರಮದ ವಿರುದ್ಧ ಉಗ್ರ ಚಳವಳಿ ನಡೆಸುವ ಎಚ್ಚರಿಕೆ ನೀಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 27-6-1972

• ‘ಏಷ್ಯಾದ ಹೆಮ್ಮೆ’ ಶರಾವತಿ ಯೋಜನೆ ಕಳಪೆ ಕೆಲಸದ ಬಗ್ಗೆ ನ್ಯಾಯಾಂಗ ತನಿಖೆ

ಬೆಂಗಳೂರು, ಜೂನ್ 26– ‘ಏಷ್ಯಾದ ಹೆಮ್ಮೆ’ ಶರಾವತಿ ಯೋಜನೆಯಲ್ಲಿ ಕಳಪೆ ಕೆಲಸದಿಂದ ನಾಲ್ಕು ವಿಭಾಗಗಳಲ್ಲಿ ತೀವ್ರ ಹಾನಿಯಾಗಿರುವುದರ ಬಗ್ಗೆ ಇಂದು ವಿಧಾನಸಭೆಯಲ್ಲಿ ಬೆಳಕು ಚೆಲ್ಲಿದ ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪನವರು ಅದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದನ್ನು ತಳ್ಳಿಹಾಕಲಿಲ್ಲ.

ವಡೇನಬೈಲ್ ಸುರಂಗದಲ್ಲಿ ಕಾಂಕ್ರೀಟ್ ಕಿತ್ತು ಬಿರುಕು ಮತ್ತು ಕೊಳ್ಳಗಳಾಗಿ ಜಲ್ಲಿ, ಕಬ್ಬಿಣದ ಸರಳು ಎದ್ದು ಬಂದಿರುವ ವಿಚಾರದಲ್ಲಿ ಕಳೆದವಾರ ಸಭೆಗೆ ವಿವರ ನೀಡಿದ ಸಚಿವರು, ತಾವು ಆಶ್ವಾಸನೆ ನೀಡಿದಂತೆ ಶರಾವತಿ ವಿಚಾರದಲ್ಲಿ ಪೂರ್ಣ ಹೇಳಿಕೆ ನೀಡಿದರು. ಈವರೆಗೆ ಅಷ್ಟಾಗಿ ಬೆಳಕಿಗೆ ಬರದಿರುವ ಲಿಂಗನಮಕ್ಕಿ ತೂಬು, ವಿದ್ಯುತ್ ಕಾಲುವೆ, ತಲಕಳಲೆ ಅಣೆಕಟ್ಟುಗಳ ದುಃಸ್ಥಿತಿಯನ್ನು ಅವರು ತಮ್ಮ ಹನ್ನೆರಡು ಪುಟಗಳ ಹೇಳಿಕೆಯಲ್ಲಿ ತಿಳಿಸಿದರು.

• ಮೊದಲಲ್ಲಿ ರಾಜ್ಯದಲ್ಲಿ ಕಡಿಮೆ ವೆಚ್ಚದ 10 ಸಿನಿಮಾ ಮಂದಿರ ನಿರ್ಮಾಣ

ಬೆಂಗಳೂರು, ಜೂನ್ 26– ಚಲನಚಿತ್ರ ಮಂದಿರಗಳಿಲ್ಲದ ಕಡೆ ಕಡಿಮೆ ಖರ್ಚಿನಲ್ಲಿ ಚಲನಚಿತ್ರ ಮಂದಿರಗಳನ್ನು ನಿರ್ಮಿಸಲು ರಾಜ್ಯದ ಚಲನಚಿತ್ರ ಅಭಿವೃದ್ಧಿ ಕಾರ್ಪೊರೇಷನ್ ತೀರ್ಮಾನಿಸಿದೆ.

ಮೊದಲಲ್ಲಿ 10 ಚಲನಚಿತ್ರ ಮಂದಿರಗಳನ್ನು ನಿರ್ಮಿಸಲಾಗುವುದು. ರಾಜ್ಯದ ಹಾಗೂ ಹೊರಗಿನ ನಿರ್ಮಾಪಕರಿಗೆ ನೆರವಾಗಲು ತತ್‌ಕ್ಷಣ ಹೊರಾಂಗಣ ‘ಶೂಟಿಂಗ್’ ಘಟಕವೊಂದನ್ನು ಕಾರ್ಪೊರೇಷನ್ ಕೊಳ್ಳಲಿದೆ.

ವರ್ಣಚಿತ್ರಗಳ ಲ್ಯಾಬೊರೇಟರಿ ಸ್ಥಾಪಿಸಲು ನಿರ್ಧರಿಸಿದೆ. ಮೈಸೂರು ಫಿಲಂ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರು ತಮ್ಮ ಗೌರವಾರ್ಥ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ನಿರ್ದೇಶಕ, ನಿರ್ಮಾಪಕ ಶ್ರೀ ವಿ. ಶಾಂತಾರಾಂ ಈ ನಿರ್ಧಾರಗಳನ್ನು ತಿಳಿಸಿದರು.

ಸಂಗತ

ಮೌಢ್ಯದ ಮಬ್ಬಿಗೆ ಮತಿಯ ಕೈದೀವಿಗೆ

ಮೌಢ್ಯವೆಂಬುದು ವಿಶ್ವವ್ಯಾಪಿಯಾಗಿ, ವೈರಾಣುವಿನಂತೆಯೇ ರೂಪಾಂತರಗೊಂಡು ಸಾಂಕ್ರಾಮಿಕವಾಗಿ ಮರುಹುಟ್ಟು ಪಡೆಯುತ್ತಲೇ ಇದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮನುಷ್ಯಮಾತ್ರನನ್ನು ಪಶುತ್ವಕ್ಕಿಂತ ಭಿನ್ನವಾಗಿಸಲು ಕಾರಣವಾದ ಮತಿಯ ಕೈದೀವಿಗೆಯು ಅವನನ್ನು ದೈವತ್ವಕ್ಕೂ ಏರಿಸಬಲ್ಲದು. ಬರಬರುತ್ತಾ ಮಾನವಜಗತ್ತು ವೈಜ್ಞಾನಿಕ ತಿಳಿವು, ವೈಚಾರಿಕಾ ನಿಲುವು, ಸಂವೇದನಾಶೀಲತೆಗಳಲ್ಲಿ ಹೆಚ್ಚೆಚ್ಚು ಮಾನವೀಯಗೊಳ್ಳಬೇಕಿತ್ತು. ಆದರದು ಅಜ್ಞಾನ, ಅಂಧಾನುಕರಣೆ, ಆತ್ಮವಂಚನೆಯ ಜಾಲದಲ್ಲಿ ಸಿಲುಕಿ ನರಳುತ್ತಿರುವುದು ದುರ್ದೈವದ ಸಂಗತಿ.

‘ಮೌಢ್ಯಾಚರಣೆಗಳನ್ನು ನಂಬುವ ಸುಶಿಕ್ಷಿತರೆಂದರೆ ಪುಸ್ತಕಗಳನ್ನು ಹೊರುವ ಕತ್ತೆಗಳಂತೆ’ ಅಂದಿದ್ದರು ಕುವೆಂಪು. ಮೊನ್ನೆಯಷ್ಟೇ (ಅದೇ ವೈಚಾರಿಕ ನೆಲದಲ್ಲಿ) ಪರಸ್ಪರ ವಿವಾಹವಾಗಲು ತಮ್ಮ ಜಾತಕದಲ್ಲಿದ್ದ ಕುಜದೋಷವು ಅಡ್ಡಿಯಾಗಿದೆ ಎಂಬ ಕಾರಣಕ್ಕೆ, ಸರ್ಕಾರಿ ಉದ್ಯೋಗದಲ್ಲಿದ್ದ ಪ್ರೇಮಿಗಳಿಬ್ಬರು ಆತ್ಮಹತ್ಯೆಗೆ ನಿರ್ಣಯಿಸಿದ್ದು, ಕೊನೆಯಲ್ಲಿ ಯುವತಿಯು ದುರಂತ ಅಂತ್ಯ ಕಂಡ ಸುದ್ದಿಯು ಮತ್ತೊಮ್ಮೆ ಮೌಢ್ಯಾಚರಣೆಯ ಭೀಕರತೆಯನ್ನು ತೆರೆದಿಟ್ಟಿದೆ.

ಭಯ ಮತ್ತು ಅಜ್ಞಾನವೇ ಮೂಢನಂಬಿಕೆಗಳ ತಾಯಿತಂದೆ. ಅವು ವ್ಯಕ್ತಿಯ ಆತ್ಮವಿಶ್ವಾಸ ಮತ್ತು ಸ್ವತಂತ್ರ ಆಲೋಚನೆಗಳನ್ನೇ ನಾಶ ಮಾಡಿ ಅಧೀರಗೊಳಿಸುತ್ತವೆ. ಬಡತನ, ದಾರಿದ್ರ್ಯದ ಹೆಚ್ಚಳಕ್ಕೂ ಅವೇ ನೀರು, ಗೊಬ್ಬರ. ಮೌಢ್ಯವೆಂಬುದೂ ವಿಶ್ವವ್ಯಾಪಿಯಾಗಿ, ವೈರಾಣುವಿನಂತೆಯೇ ರೂಪಾಂತರಗೊಂಡು ಹೊಸ ಹೊಸ ವೇಷ ಧರಿಸಿ, ಜನಮಾನಸದಲ್ಲಿ ಸಾಂಕ್ರಾಮಿಕವಾಗಿ ಮರುಹುಟ್ಟು ಪಡೆಯುತ್ತಲೇ ಇದೆ.

ಸ್ವತಃ ವೈಜ್ಞಾನಿಕ ಕೌತುಕವೆಂಬಂತೆ ಬದುಕಿದ್ದ ಸ್ಟೀಫನ್ ಹಾಕಿನ್ಸ್ ಅವರ ಸ್ಪಷ್ಟ ಉಲ್ಲೇಖದಂತೆ ‘ವಿಶ್ವಸೃಷ್ಟಿ, ಅದರ ಮುಂದುವರಿಕೆಯಲ್ಲಿ ಅಗೋಚರ ಶಕ್ತಿಯ ಪಾತ್ರವಿದೆ. ಹಾಗಂತ ಯಾವೊಂದು ಜೀವವನ್ನೂ ವೈಯಕ್ತಿಕವಾಗಿ ಉದ್ಧರಿಸುವ ಅಥವಾ ನಾಶ ಮಾಡುವ ಶಕ್ತಿಗಳು ಈ ಸೃಷ್ಟಿಯಲ್ಲಿ ಇಲ್ಲ. ನಾಳೆಗಳ ಬಗ್ಗೆ ಯಾವ ವ್ಯಕ್ತಿ, ಶಾಸ್ತ್ರಕ್ಕೂ ನಿಖರವಾಗಿ ಹೇಳಲಾಗದು, ಪ್ರಾಕೃತಿಕ ವಿದ್ಯಮಾನಗಳನ್ನಷ್ಟೇ ಅಧ್ಯಯನದಿಂದ ಮಂಡಿಸಲು ಸಾಧ್ಯ!’


ಭೂಪರಿಸರದಲ್ಲಿ ನೈಸರ್ಗಿಕ ವೈಪರೀತ್ಯ ಮತ್ತು ರೋಗರುಜಿನಗಳೆಲ್ಲವೂ ಸಹಜ ವಿದ್ಯಮಾನಗಳಾಗಿದ್ದು, ಸ್ವಚ್ಛ, ಸರಳ, ಪರಿಸರಪೂರಕವಾದ ಆರೋಗ್ಯಕರ ಜೀವನವಿಧಾನವನ್ನು ಅಳವಡಿಸಿಕೊಳ್ಳುವುದು ಎಲ್ಲ ಕಾಲಕ್ಕೂ ಸೂಕ್ತ. ಜೀವನಪ್ರೀತಿಯ ತುಡಿತ, ಬೆವರು ಬಸಿವ ದುಡಿತದಲ್ಲಿ ಎಲ್ಲರ ಭವಿಷ್ಯ ಅಡಗಿರುತ್ತದೆ.

ವಿಶ್ವಚಲನೆಯಲ್ಲಿ ಕಾಯಗಳು ಪರಿಭ್ರಮಣೆಗೊಳ್ಳುವಲ್ಲಿನ ಸಹಜ ವಿದ್ಯಮಾನವಾದ ಗ್ರಹಣವನ್ನು ಹಿಂದಿನಿಂದಲೂ ಕೇಡು ಅಂತಲೇ ನಂಬಿಸಲಾಗಿದೆ. ಈಗೀಗಂತೂ ಮಾಧ್ಯಮಗಳು ಲೋಕದ ಕೆಡುಕಿನ ಪ್ರತೀಕವೆಂಬಂತೆ ಗ್ರಹಣವನ್ನು ವೈಭವೀಕರಿಸಿ ಜನಸಾಮಾನ್ಯರ ಮತಿಭ್ರಮಣೆಗೊಳಿಸುವ ಪ್ರವೃತ್ತಿ ಹೆಚ್ಚಾಗಿದೆ. ಅರಿವಿನ ಕನ್ನಡಿಗೆ ಅಂಟಿಸಿಕೊಂಡ ಮೋಸ- ಮೌಢ್ಯದ ಕರಿನೆರಳುಗಳು ಜಾಗೃತಸೂರ್ಯನಿಗೆ ನಿರಂತರವಾಗಿ ಗ್ರಹಣ ಹಿಡಿಸುತ್ತಲೇ ಇರುತ್ತವೆ. ಇಲ್ಲದ ಗ್ರಹಗತಿಗಳನ್ನು ಭವಿಷ್ಯಕ್ಕೆ ಸಮೀಕರಿಸುವ ವಿಧಾನಗಳು ಬಹಳಷ್ಟು ಜನರ ನಿತ್ಯಬದುಕನ್ನು ನರಕವನ್ನಾಗಿಸಿವೆ. ಮಾತ್ರವಲ್ಲ, ಬೆಳಕಿಗೆ ಮುಖಮಾಡಿ ಬೆಳೆಯಬೇಕಾದ ಎಳೆಯರಲ್ಲಿ ವಾಸ್ತವಜ್ಞಾನವನ್ನು ಮಸುಕಾಗಿಸುತ್ತವೆ.

ಯುವಜನ ಅರಿವಿನ ಬೆಳಕಲ್ಲಿ, ಪ್ರಯತ್ನವನ್ನು ನಂಬಿಕೊಂಡು ತಾರಾಬಲದ ಬಗ್ಗೆ ತಲೆಬಿಸಿ ಮಾಡಿಕೊಳ್ಳದೆ ತಾರಾಮಂಡಲದ ಕೌತುಕವನ್ನು ಗ್ರಹಿಸುವುದು, ಸಂಭ್ರಮಿಸುವುದು ಮುಖ್ಯವಾಗಬೇಕಿದೆ.

ಅಷ್ಟಕ್ಕೂ, ಜನ್ಮಜನ್ಮದ ಕಥೆ ಹೇಳುವ, ಅಂಗೈಯಲ್ಲಿ ದೇವರನ್ನು ತೋರುವ ಅಥವಾ ಕಲ್ಲುಮಣ್ಣುಗಳಲ್ಲಿ ದೇವರನ್ನು ಪ್ರತಿಷ್ಠಾಪಿಸುವ ಮಂದಿಗೆ ಸತ್ತ ಜೀವಿಯೊಂದನ್ನು ಬದುಕಿಸುವುದು ಸಾಧ್ಯವೇ? ನಡೆಯುತ್ತಿರುವ ಭಯೋತ್ಪಾದಕ ದಾಳಿಗಳಾಗಲೀ ಪರಿಸರ ವಿಕೋಪಗಳಾಗಲೀ ಅಥವಾ ಇತ್ತೀಚಿನ ಕೊರೊನಾ ಅಟ್ಟಹಾಸದಲ್ಲಿ ಜಗತ್ತೇ ನಲುಗಿಹೋದುದರ ಬಗೆಗಾಗಲೀ ಜ್ಯೋತಿಷಿಗಳಿಗೆ ಸಣ್ಣ ಸುಳಿವು ಸಿಕ್ಕಿದ್ದರೆ ಶ್ರೀಸಾಮಾನ್ಯ ಅಷ್ಟೊಂದು ಸಂಕಷ್ಟಗಳನ್ನು ಅನುಭವಿಸಬೇಕಿತ್ತೇ?!

ಯಜ್ಞದಿಂದ ಶತ್ರುವನ್ನು ಸಂಹರಿಸುವುದಾದರೆ, ಬಡದೇಶದ ರಕ್ಷಣೆಗೆ ಕ್ಷಿಪಣಿ, ಅಣುಶಕ್ತಿಗಳಿಗಾಗಿ ಲಕ್ಷಾಂತರ ಕೋಟಿಗಳನ್ನು ವಿನಿಯೋಗಿಸುವ ಅಗತ್ಯವಾದರೂ ಏನಿದೆ? ಪರ್ಜನ್ಯಯಾಗದಿಂದ ಮಳೆ ತರಿಸಬಹುದಾದರೆ ಸಹರಾ ಮರುಭೂಮಿಯಲ್ಲಿ ಆ ಪ್ರಯೋಗ ಏಕಾಗಬಾರದು? ಇಷ್ಟೇ, ಯಾವ ಮಂತ್ರದಿಂದಲೂ ಮಾವಿನಕಾಯಿ ಉದುರುವುದಿಲ್ಲ, ಬಡಿಗೆ ಬೀಸಲೇಬೇಕು. ಸ್ವಾಮೀಜಿಯೊಬ್ಬರ ‘ನನ್ನ ಪಾದ ತೊಳೆದ ನೀರು ಕುಡಿದು ನೀವೆಲ್ಲ ಪಾವನರಾಗುವುದಾದರೆ ಕಾವೇರಿ ನದಿಗೇ ಕಾಲಿಟ್ಟು ಕೂರುತ್ತೇನೆ, ನದಿಯ ನೀರು ಕುಡಿದವರಿಗೆಲ್ಲಾ ಶಾಪ ವಿಮೋಚನೆ’ ಎಂಬ ಕಳಕಳಿ ಮಾರ್ಮಿಕವಾದುದು. ಸಮಾಜದ ಅಂಕುಡೊಂಕು ತೊಡೆದುಹಾಕಲು ಜೀವನ ಸಮರ್ಪಿಸಿದ ಸಂತರನ್ನು ಫೋಟೊ ಕಟ್ಟಿ ಗೋಡೆಗೆ ನೇತುಹಾಕುವುದಕ್ಕಿಂತ ಎದೆಯೊಳಗೆ ಅರಿವಾಗಿ ಬಿತ್ತಬೇಕು, ಭಕ್ತಿ, ಸದ್ವಿಚಾರಗಳನ್ನು ಕೃತಿಯಲ್ಲಿ ಬದುಕಿಸಿಕೊಳ್ಳಬೇಕು...



‘ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ’ ಎಂಬಂತಹ ವಚನದೀಪ್ತಿಗಳು ಒಳಗಿನ ಕತ್ತಲನ್ನು ಕಳೆಯುವಂತಾಗಬೇಕು. ಮತವನ್ನು ತೊಲಗಿಸಿ ಅಧ್ಯಾತ್ಮ, ವಿವೇಕ, ಜೀವಪರತೆಗಳಲ್ಲಿ ಅಂತಃಸಾಕ್ಷಿಯನ್ನು ಎಚ್ಚರಿಸುವ ನಿಜದರ್ಶನವನ್ನು ಎಲ್ಲರೂ ಕಾಣುವಂತಾಗಬೇಕು. ಯುವಜನತೆಯು ಸಿಲುಕಿಕೊಂಡ ಸಂಕೋಲೆಗಳಿಂದ ಮುಕ್ತವಾಗಿ, ಮತಿಯ ದೀವಿಗೆಯಡಿ ನಿರಾಮಯ ಬದುಕಿನೆಡೆಗೆ ದಿಟ್ಟಹೆಜ್ಜೆಗಳನ್ನು ಊರುವಂತಾಗಬೇಕು...

ವಾಚಕರ ವಾಣಿ

ತಾಲ್ಲೂಕು ಮಟ್ಟದಲ್ಲಿ ಬೀಜ ಬ್ಯಾಂಕ್ ಇರಲಿ

ನಮ್ಮ ರೈತರು ಎದುರಿಸುತ್ತಿರುವ ವಿವಿಧ ಸವಾಲುಗಳಲ್ಲಿ, ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜಗಳು ಸಿಗದಿರುವುದೂ ಒಂದು. ಪ್ರತಿವರ್ಷ ಈ ಸಮಸ್ಯೆ ಇದ್ದೇ ಇರುತ್ತದೆ. ಬಿತ್ತನೆ ಬೀಜ ಪಡೆಯಲು ಉದ್ದನೆಯ ಸರತಿ ಸಾಲಿನಲ್ಲಿ ನಿಂತು ಕಾಯುವ ಅವರ ಪರಿಸ್ಥಿತಿ ವರ್ಷಗಳಿಂದಲೂ ಬದಲಾಗಿಲ್ಲ. ಈಗ ಕೃಷಿ ಚಟುವಟಿಕೆ ಗರಿಗೆದರಿದೆ. ಆದರೆ ಅನೇಕ ಜಿಲ್ಲೆಗಳಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ಸಿಗದ ಕಾರಣ, ಹದ ಮಾಡಿದ ಜಮೀನನ್ನು ಖಾಲಿ ಬಿಡಬೇಕಾದ ಪರಿಸ್ಥಿತಿ ಉಂಟಾಗಿದೆ. ಸರ್ಕಾರವು ಬೀಜ ತಯಾರಕ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು, ಪ್ರತೀ ತಾಲ್ಲೂಕು ಮಟ್ಟದಲ್ಲಿ ಬೀಜ ಬ್ಯಾಂಕ್‌ಗಳನ್ನು ಸ್ಥಾಪಿಸಬೇಕು. ಜೊತೆಗೆ, ಸಣ್ಣ ರೈತರಿಗೆ ಉತ್ತಮ ಗುಣಮಟ್ಟದ ಬೀಜಗಳನ್ನು ಸರಿಯಾದ ಸಮಯದಲ್ಲಿ ಸಮಂಜಸವಾದ ಬೆಲೆಯಲ್ಲಿ ಒದಗಿಸಲು ಕ್ರಮ ಕೈಗೊಳ್ಳಬೇಕು.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಅರಳುವ ಮೇಧಾವಿಗಳನ್ನು ಗುರುತಿಸಿ

ಕರ್ನಾಟಕ ಸರ್ಕಾರವು ನಾಡಿನ ಮೂವರು ಸಾಧಕರಿಗೆ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರಕಟಿಸಿರುವುದು ಬಹು ಸಂತೋಷ. ಇವರ ಸಾಧನೆ ದೊಡ್ಡದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಎಲೆ ಮರೆಯ ಕಾಯಿಯ ಹಾಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸದ್ದಿಲ್ಲದೆ ಅನನ್ಯ ಸೇವೆ ಸಲ್ಲಿಸುತ್ತಿರುವವರು ಅಸಂಖ್ಯ. ಅವರು ಅಜ್ಞಾತ ಪ್ರತಿಭಾಶಾಲಿಗಳಾಗಿಯೇ ಉಳಿಯಬಾರದು.

ಹೊನ್ನನ್ನು ಪದೇ ಪದೇ ಹೊಗಳಿ ಮತ್ತೆ ಮತ್ತೆ ಅದಕ್ಕೆ ಹೊಳಪು ನೀಡುವ ಅಗತ್ಯವಿಲ್ಲ. ತಲಾ ಐದು ಲಕ್ಷ ರೂಪಾಯಿಗಳ ಮೂರು ಭಾರಿ ಮೊತ್ತದ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಬದಲು ಸರ್ಕಾರವು ಹತ್ತಾರು ಮಂದಿ ಅರಳುವ ಮೇಧಾವಿಗಳನ್ನು ಗುರುತಿಸಿ, ಅವರಿಗೆ ತಲಾ ₹ 25,000 ನಗದು ಬಹುಮಾನವುಳ್ಳ ಪ್ರಶಸ್ತಿಯಿತ್ತು ಅವರ ಬೆನ್ನು ತಟ್ಟುವುದು ಅತ್ಯಂತ ಸಮಂಜಸವಾದೀತು.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಚುನಾಯಿತ ಸದಸ್ಯರ ಕಡೆಗಣನೆ ಅನರ್ಥಕಾರಿ

ಇತಿಹಾಸ ಮರುಕಳಿಸುತ್ತದೆ ಎಂಬ ಮಾತಿದೆ. ಈಗ ಅದಕ್ಕೆ ‘ಸ್ಥಳ ಹಾಗೂ ರೂಪದಲ್ಲಿ ಒಂದಿಷ್ಟು ಬದಲಾವಣೆಯೊಂದಿಗೆ’ ಎಂಬ ಷರತ್ತನ್ನು ಸೇರಿಸಬಹುದಷ್ಟೆ. ಪಕ್ಕದ ಆಂಧ್ರಪ್ರದೇಶದಲ್ಲಿ ಎನ್‌ಟಿಆರ್ ಕಾಲದಲ್ಲಿ ಅವರ ಅಳಿಯ ಇತರರೊಂದಿಗೆ ಸೇರಿ ತಮ್ಮದೇ ಅಸಲಿ ತೆಲುಗುದೇಶಂ ಎಂದು ಘೋಷಿಸಿಕೊಂಡು, ಅದು ನ್ಯಾಯಾಲಯದಲ್ಲಿ ಊರ್ಜಿತವೂ ಆಗಿತ್ತು. ಈಗ ಅವರು ಹಾಗೂ ಆ ಪಕ್ಷ ಬಲಹೀನವಾಗಿದೆ. ವ್ಯಕ್ತಿಯ ಜನಪ್ರಿಯತೆಯ ಆಧಾರದ ಮೇಲೆ ಪಕ್ಷವೊಂದು ಅಧಿಕ ಸಂಖ್ಯೆಯ ವಿಧಾನಸಭಾ ಸದಸ್ಯ ಸ್ಥಾನಗಳನ್ನು ಗೆದ್ದ ನಂತರ ಒಂದು ಕುಟುಂಬ ಮತ್ತು ಕೆಲವು ಆಪ್ತರು ಸರ್ಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ಚುನಾಯಿತ ಸದಸ್ಯರನ್ನು ಕಡೆಗಣಿಸುವುದು ಈಗ ಹೆಚ್ಚು ಅನರ್ಥಕಾರಿ.

ಹಿಂದೆ ಬಾಳಾಸಾಹೇಬ ಠಾಕ್ರೆ ಅವರ ರಾಜಕೀಯ ವಾರಸುದಾರ ಯಾರು ಎಂಬ ಮೇಲಾಟದಲ್ಲಿ ರಾಜ್ ಠಾಕ್ರೆ ಸೋತು ಮೂಲೆಗುಂಪಾಗಿದ್ದರು. ಆಗ ಗೆದ್ದವರು ಈಗ ಬೇರೆಯವರಿಗೆ ಸೋಲಬಹುದು. ಮುಂಬೈ ಟು ಸೂರತ್ ಟು ಗುವಾಹಟಿ ಪ್ರವಾಸ ಹೋದ ಮಹಾರಾಷ್ಟ್ರದ ಶಾಸಕರು ವಿಜಯ ಖಾತರಿಯ ಸಂಕೇತ ಸಿಕ್ಕಾಗ ಮಾತ್ರ ಹಿಂತಿರುಗಬಹುದು. ಆತಿಥ್ಯದ ವೆಚ್ಚವನ್ನು ಹೇಗೆ ಭರಿಸಲಾಗುತ್ತಿದೆ? ವಿಕಾಸ ಆಘಾಡಿ ಅವಧಿಯಲ್ಲಿ ನಿಜಕ್ಕೂ ವಿಕಾಸ ಎಷ್ಟಾಗಿದೆ? ಮೂಲಭೂತವಾಗಿ ಪ್ರಾದೇಶಿಕ ಆದ ಪಕ್ಷವೊಂದು ಕುಟುಂಬಕೇಂದ್ರಿತ– ನಿಯಂತ್ರಿತ ಆದಲ್ಲಿ ಏನಾಗಬಹುದು ಎಂದು ಕರ್ನಾಟಕದ ಮತದಾರರೂ ಯೋಚಿಸಬೇಕಾಗಿದೆ.

ಎಚ್.ಎಸ್.ಮಂಜುನಾಥ, ಬೆಂಗಳೂರು

ಹಾಸ್ಯವೆಂದರೆ ದ್ವಂದ್ವಾರ್ಥವಲ್ಲ

ದೃಶ್ಯ ಮಾಧ್ಯಮಗಳಲ್ಲಿ ಹಾಸ್ಯಮಾಲಿನ್ಯದ ಬಗ್ಗೆ ಯೋಗಾನಂದ ಅವರು ಪ್ರಸ್ತಾಪಿಸಿರುವುದು (ಸಂಗತ, ಜೂನ್ 25) ಗಂಭೀರವಾದ ಸಂಗತಿ. ಇಂದಿನ ಹಾಸ್ಯ ಕಾರ್ಯಕ್ರಮಗಳಲ್ಲಿ ಒಂದೋ ಯಾರಾದರೊಬ್ಬರನ್ನು ಹೀಯಾಳಿಸುವುದು, ಇಲ್ಲವಾದರೆ ‘ಡಬಲ್ ಮೀನಿಂಗ್’ ಸಂಭಾಷಣೆಗಳೇ ಹಾಸ್ಯದ ವಸ್ತುವಿಷಯವಾಗಿರುತ್ತವೆ.

ಚಾರ್ಲಿ ಚಾಪ್ಲಿನ್, ಮಿಸ್ಟರ್ ಬೀನ್, ಟಾಮ್ ಆ್ಯಂಡ್ ಜರ‍್ರಿಯಂತಹ ಪ್ರಸಿದ್ಧ ಹಾಸ್ಯ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವೇ ಇಕ್ಕಟ್ಟಿನಲ್ಲಿ ಸಿಕ್ಕಿಸಿಕೊಂಡು ಸೃಜಿಸುವ ಹಾಸ್ಯ ಎಷ್ಟು ಸೃಜನಾತ್ಮಕವಾಗಿಲ್ಲವೇ? ಅಲ್ಲಿ ಇನ್ನೊಬ್ಬರಿಗೆ ನೋವುಂಟು ಮಾಡುವುದಾಗಲೀ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುವುದಾಗಲೀ ಹೀಯಾಳಿಸುವುದಾಗಲೀ ದ್ವಂದ್ವಾರ್ಥದ ಹಾಸ್ಯವಾಗಲೀ ಇಲ್ಲವೇ ಇಲ್ಲ. ಆದರೂ ಇಂದಿಗೂ ಅವರ ಹಾಸ್ಯಗಳು ಪ್ರೇಕ್ಷಕರನ್ನು ನಗಿಸುತ್ತಿಲ್ಲವೇ? ಹಾಸ್ಯವೆಂದರೆ ಅಶ್ಲೀಲವಲ್ಲ.

ಈರಣ್ಣ ಎನ್.ವಿ., ಶಿರಾ

ಅತ್ಯುತ್ತಮ ರಬ್ಬರ್ ಸ್ಟ್ಯಾಂಪ್ ಜನಕರು!

ರಾಷ್ಟ್ರಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಮುಂದಿನ ರಾಷ್ಟ್ರಪತಿಯಾಗಿ ಆಯ್ಕೆಯಾಗುವುದು ಬಹುತೇಕ ಖಚಿತ. ಬುಡಕಟ್ಟು ಜನರ ಪ್ರತಿನಿಧಿ ಎಂದು ಜನಮೆಚ್ಚುಗೆಗಾಗಿ ಹಾಗೂ ತಾನು ಬಲಹೀನರ ಪ್ರತಿನಿಧಿ ಎಂದು ತೋರಿಸಿಕೊಳ್ಳಲು ಬಿಜೆಪಿ ಈ ಆಯ್ಕೆ ಮಾಡಿದೆ. ರಾಜಕೀಯ ಪಟ್ಟುಗಳನ್ನು ಕರಗತ ಮಾಡಿಕೊಂಡ ಯಶವಂತ ಸಿನ್ಹಾ ಅಂಥವರು ಸರ್ಕಾರದ ನಿರ್ಧಾರಗಳನ್ನು ಮರುಪರಿಶೀಲನೆಗೆ ಒಳಪಡಿಸಿ ಮಸೂದೆಗಳನ್ನು ಹಿಂದಿರುಗಿಸುತ್ತಾರೆ. ಇದರಿಂದಾಗಿ ಯಾವುದೇ ಮಸೂದೆಯನ್ನು ರಾಷ್ಟ್ರಪತಿ ಒಪ್ಪಿಗೆಗೆ ಕಳುಹಿಸಲು ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕಾಗುತ್ತದೆ.

ಬಹುಮತ ಹೊಂದಿರುವ ಈಗಿನ ಸರ್ಕಾರದ ಈಗಿನ ರಾಷ್ಟ್ರಪತಿ ಕೂಡ ಬಿಜೆಪಿಯವರ ಆಯ್ಕೆಯಾಗಿದ್ದು, ಯಾವುದೇ ಪ್ರತಿರೋಧ ತೋರದಂತೆ ಪಕ್ಷದ ಕಟ್ಟುಪಾಡಿಗೆ ಒಳಪಟ್ಟವರಾಗಿದ್ದಾರೆ. ಮುಂದಿನ ರಾಷ್ಟ್ರಪತಿ ಕೂಡ ಇದೇ ನಿಯಮಕ್ಕೆ ಒಳಪಡುವವರಾಗಿರಬಹುದು. ರಾಷ್ಟ್ರಪತಿಯನ್ನು ಕಾಂಗ್ರೆಸ್‌ನ ರಬ್ಬರ್ ಸ್ಟ್ಯಾಂಪ್ ಎಂದು ಅಣಕಿಸುತ್ತಿದ್ದವರೇ ಈಗ ಅತ್ಯುತ್ತಮ ರಬ್ಬರ್ ಸ್ಟ್ಯಾಂಪ್‌ನ ಜನಕರಾಗಿದ್ದಾರೆ!

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಶಿವಸೇನಾದಲ್ಲಿ ತಳಮಳ
ಸಿದ್ಧಾಂತ ಬದಲಿನ ಸಂಕಟ


ಬಾಳಾ ಠಾಕ್ರೆ

ಪ್ರಜಾವಾಣಿ ವಾರ್ತೆ

ಶಿವಸೇನಾ ಅತ್ಯಂತ ದೊಡ್ಡ ಮಟ್ಟದ ಬಂಡಾಯದ ಬಿಸಿ ಎದುರಿಸುತ್ತಿದೆ. ಪಕ್ಷವು ಈಗಿನದ್ದೂ ಸೇರಿ ಒಟ್ಟು ನಾಲ್ಕು ಬಾರಿ ಬಂಡಾಯ ಎದುರಿಸಿದೆ. ಈ ಹಿಂದೆ ಮೂರು ಬಾರಿ ಬಂಡಾಯ ಉಂಟಾದಾಗಲೂ ಶಿವಸೇನಾವು ವಿರೋಧ ಪಕ್ಷದ ಸ್ಥಾನದಲ್ಲಿತ್ತು. ಆದರೆ ಈಗ, ಪಕ್ಷವು ಅಧಿಕಾರದಲ್ಲಿದ್ದಾಗಲೇ ಮುಕ್ಕಾಲುಪಾಲು ಶಾಸಕರು ಬಂಡಾಯದ ಕಹಳೆ ಊದಿದ್ದಾರೆ. ಪಕ್ಷದ ಮುಖ್ಯಸ್ಥ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಪಕ್ಷದ ಸಿದ್ಧಾಂತಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂಬುದು ಬಂಡಾಯವೆದ್ದಿರುವ ಶಾಸಕರು ನೀಡುತ್ತಿರುವ ಪ್ರಮುಖ ಕಾರಣ. ಆದರೆ, ಪಕ್ಷವು ಅಸ್ತಿತ್ವಕ್ಕೆ ಬಂದಾಗಿನಿಂದ ತನ್ನ ಸಿದ್ಧಾಂತವನ್ನು ಹಲವು ಬಾರಿ ಬದಲಿಸಿದೆ.

ಪಕ್ಷದ ಸಂಸ್ಥಾಪಕ ಬಾಳಾ ಠಾಕ್ರೆ ಅವರು, 'ನಮ್ಮದು ಶೇ 80ರಷ್ಟು ಸಮಾಜ ಸೇವೆ, ಶೇ 20ರಷ್ಟು ರಾಜಕಾರಣ' ಎಂದು ಹೇಳುತ್ತಿದ್ದರು. ಅವರು ಎಂದೂ ಚುನಾವಣಾ ರಾಜಕಾರಣದಲ್ಲಿ ನೇರವಾಗಿ ಭಾಗಿಯಾದವರಲ್ಲ. ಆದರೆ, ಈಗ ಶಿವಸೇನಾ ಒಂದು ಪೂರ್ಣ ಪ್ರಮಾಣದ ರಾಜಕೀಯ ಪಕ್ಷವಾಗಿ ರೂಪುಗೊಂಡಿದೆ.

'ಬಾಳಾ ಠಾಕ್ರೆ ಅವರ ಹಿಂದುತ್ವಕ್ಕೆ ವಿರುದ್ಧವಾದ ಸಿದ್ಧಾಂತವನ್ನು ಉದ್ಧವ್ ಠಾಕ್ರೆ ಅನುಸರಿಸುತ್ತಿದ್ದಾರೆ. ಪಕ್ಷದ ಸಿದ್ಧಾಂತಕ್ಕೆ ಸರಿಹೊಂದದ ಕಾಂಗ್ರೆಸ್ ಮತ್ತು ಎನ್‌ಸಿಪಿ ಜತೆಗೆ ಅಸಹಜ ಮೈತ್ರಿ ಮಾಡಿಕೊಂಡಿದ್ದಾರೆ' ಎಂದು ಭಿನ್ನಮತೀಯ ಶಾಸಕರ ನಾಯಕ ಏಕನಾಥ ಶಿಂಧೆ ಅವರು ಆರೋಪಿಸಿದ್ದಾರೆ. ಆದರೆ, ಪಕ್ಷ ಅಸ್ತಿತ್ವಕ್ಕೆ ಬಂದಾಗ ಹಿಂದುತ್ವ ಅದರ ಸಿದ್ಧಾಂತವೇ ಆಗಿರಲಿಲ್ಲ. 1966ರಲ್ಲಿ ಅಸ್ತಿತ್ವಕ್ಕೆ ಬಂದ ಶಿವಸೇನಾವು, ಮರಾಠಿಗರ ಹಕ್ಕುಗಳ ರಕ್ಷಣೆಯ ಗುರಿ ಹೊಂದಿತ್ತು. ಮುಂಬೈನಲ್ಲಿ ವಲಸಿಗರ ಕೈ ಮೇಲಾಗುವುದನ್ನು ಶಿವಸೇನಾ ವಿರೋಧಿಸುತ್ತಿತ್ತು. ಗುಜರಾತಿಗಳು, ದಕ್ಷಿಣ ಭಾರತೀಯ ವಲಸಿಗರ ಸಂಖ್ಯೆ ಮುಂಬೈನಲ್ಲಿ ಹೆಚ್ಚಾಗುವುದರಿಂದ ಮರಾಠಿಗರಿಗೆ ಅವಕಾಶಗಳು ಕಡಿಮೆಯಾಗುತ್ತವೆ ಎಂಬುದು ಶಿವಸೇನಾದ ಪ್ರತಿಪಾದನೆಯಾಗಿತ್ತು. ಜತೆಗೆ ಮುಸ್ಲಿಮರಿಗೆ ಸಂಬಂಧಿಸಿದಂತೆಯೂ ಶಿವಸೇನಾಗೆ ಇಂತಹದ್ದೇ ನಿಲುವು ಇತ್ತು. 'ಮರಾಠಿಗರ ಹಕ್ಕುಗಳ ರಕ್ಷಣೆಗಾಗಿ ನಾವು ಏನನ್ನಾದರೂ ಮಾಡುತ್ತೇವೆ' ಎಂದು ಸ್ವತಃ ಬಾಳಾ ಠಾಕ್ರೆ ಹಲವು ಭಾರಿ ಘೋಷಿಸಿದ್ದರು.



ಉದ್ಧವ್ ಠಾಕ್ರೆ | ಏಕನಾಥ ಶಿಂಧೆ

ಶಿವಸೇನಾದ ನಿಲುವು 1970ರ ದಶಕದಲ್ಲಿ ಹಿಂದುತ್ವದತ್ತ ತಿರುಗಿತು. 80–90ರ ದಶಕದಲ್ಲಿ ಇದು ತೀವ್ರ ಹಿಂದುತ್ವದ ರೂಪ ಪಡೆಯಿತು. 1992ರಲ್ಲಿ ಬಾಬರಿ ಮಸೀದಿ ಧ್ವಂಸಕ್ಕೆ ಪ್ರೇರಣೆ ನೀಡಿದ ಆರೋಪ ಬಾಳಾ ಠಾಕ್ರೆ ಮೇಲಿತ್ತು. ಆನಂತರ ಮುಂಬೈನಲ್ಲಿ ನಡೆದಿದ್ದ ಕೋಮುಗಲಭೆ ಹಿಂದೆ ಬಾಳಾ ಠಾಕ್ರೆ ಅವರ ಕೈವಾಡವಿತ್ತು ಎಂಬ ಆರೋಪವೂ ಇತ್ತು. ಈ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್, ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಶ್ರೀಕೃಷ್ಣ ಸಮಿತಿಯು ತನ್ನ ವರದಿಯಲ್ಲಿ, 'ಮುಸ್ಲಿಂ ವಿರೋಧಿ ಗಲಭೆಯ ಹಿಂದೆ ಶಿವಸೇನಾ ಮತ್ತು ಬಾಳಾ ಠಾಕ್ರೆ ಅವರ ಕುಮ್ಮಕ್ಕು ಇದೆ' ಎಂದು ಹೇಳಿತ್ತು. ಈ ವರದಿಯನ್ನು ಶಿವಸೇನಾ ವಿರೋಧಿಸಿತ್ತು. ಆದರೆ, ಬಾಳಾ ಠಾಕ್ರೆ ನಿರಾಕರಿಸಿರಲಿಲ್ಲ. ನಂತರದ ದಿನಗಳಲ್ಲಿ ಠಾಕ್ರೆ ಅವರು, 'ನಾವು ಯಾವುದೇ ಧರ್ಮದ ವಿರೋಧಿಗಳಲ್ಲ. ಆದರೆ, ಇಲ್ಲಿದ್ದು ದೇಶದ ಕಾನೂನನ್ನು ಪಾಲಿಸದೇ ಇರುವವರು ದ್ರೋಹಿಗಳು. ಅವರನ್ನು ನಾವು ವಿರೊಧಿಸುತ್ತೇವೆ' ಎಂದು ಹಲವು ಬಾರಿ ಹೇಳಿದ್ದರು.

ಠಾಕ್ರೆ ಅವರು ತಾವಿನ್ನೂ ಗಟ್ಟಿಯಾಗಿರುವಾಗಲೇ ಮಗ ಉದ್ಧವ್ ಠಾಕ್ರೆ ಅವರನ್ನು ಮುನ್ನೆಲೆಗೆ ತಂದರು. ಬಾಳಾ ಠಾಕ್ರೆ ಅವರ ಕಾಲಾನಂತರ ಉದ್ಧವ್ ಅವರು ಬಿಜೆಪಿ ಜತೆಯಲ್ಲಿಯೇ ತಮ್ಮ ಮೈತ್ರಿ ಮುಂದುವರಿಸಿದ್ದರು. 2019ರ ಚುನಾವಣೆಯ ನಂತರ ಆ ಮೈತ್ರಿ ಮುರಿದುಬಿತ್ತು. ಶಿವಸೇನಾದ ಆವರೆಗಿನ ಸಿದ್ಧಾಂತಕ್ಕೆ ವಿರುದ್ಧ ನಿಲುವುಗಳ ಎನ್‌ಸಿಪಿ ಮತ್ತು ಕಾಂಗ್ರೆಸ್‌ನ ಜತೆ ಮೈತ್ರಿ ಮಾಡಿಕೊಂಡರು. ಆನಂತರದ ದಿನಗಳಲ್ಲಿ ಶಿವಸೇನಾದ ಉಗ್ರ ಹಿಂದುತ್ವದ ನಿಲುವಿನ ತೀವ್ರತೆ ಕಡಿಮೆಯಾಗುತ್ತಾ ಬಂದಿದೆ ಮತ್ತು ಶಿವಸೇನಾ ತನ್ನ ಮೂಲ ಸಿದ್ಧಾಂತವನ್ನು ತೊರೆದಿದೆ ಎಂದು ಈಗಿನ ಬಂಡಾಯ ನಾಯಕ ಏಕನಾಥ ಶಿಂಧೆ ಆರೋಪಿಸಿದ್ದಾರೆ.

'ಪಕ್ಷವು ಸಿದ್ಧಾಂತ ಬದಲಿಸಿದ್ದರ ಬಗ್ಗೆ ಮತದಾರರು ಸಿಟ್ಟಾಗಿದ್ದಾರೆ. ನಾವು ಮತದಾರರ ಸಿಟ್ಟಿಗೆ ಗುರಿಯಾಗುತ್ತಿದ್ದೇವೆ' ಎಂದು ಅವರು ಹೇಳುತ್ತಿದ್ದಾರೆ. ತಮ್ಮ ಜತೆಯಲ್ಲಿ ಈಗ ಶಿವಸೇನಾದ 40ಕ್ಕೂ ಹೆಚ್ಚು ಶಾಸಕರು ಮತ್ತು ಕೆಲವು ಸಂಸದರು ಗುರುತಿಸಿಕೊಂಡಿದ್ದಾರೆ ಎಂದು ಶಿಂಧೆ ಹೇಳುತ್ತಿದ್ದಾರೆ. ಆದರೆ ಶಿವಸೇನಾದ ಸ್ಥಳೀಯ ಮಟ್ಟದ ನಾಯಕರು, ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಜಿಲ್ಲಾ ಪ್ರಮುಖರು, ಮುಂಬೈ ವಿಭಾಗೀಯ ಪ್ರಮುಖರು, ತಾಲ್ಲೂಕು ಪ್ರಮುಖರು, ನಗರ ಪ್ರಮುಖರು, ಶಾಖಾ ಪ್ರಮುಖರು ಮತ್ತು ಕಾರ್ಯಕರ್ತರು ಠಾಕ್ರೆ ಅವರ ಜತೆಗೆ ಇರುತ್ತಾರೆಯೇ ಅಥವಾ ಶಿಂಧೆ ಅವರನ್ನು ಬೆಂಬಲಿಸುತ್ತಾರೆಯೇ ಎಂಬುದನ್ನು ಕಾದು ನೋಡಬೇಕಿದೆ.

ಭುಜಬಲ್ ಮೊದಲ ಬಂಡಾಯ



ಶಿವಸೇನಾದಲ್ಲಿ ಒಬಿಸಿ ನಾಯಕ ಎಂದು ಗುರುತಿಸಿಕೊಂಡಿದ್ದ ಛಗನ್ ಭುಜಬಲ್ ಅವರು ಶಿವಸೇನಾ ಪಕ್ಷದ ಇತಿಹಾಸದಲ್ಲಿ ಮೊದಲ ಬಾರಿಗೆ ಬಂಡಾಯದ ಬಾವುಟ ಹಾರಿಸಿದ್ದರು. ಮುಂಬೈ ಮೇಯರ್ ಆಗಿಯೂ ಕೆಲಸ ಮಾಡಿದ್ದ ಭುಜಬಲ್ ಅವರು 1991ರಲ್ಲಿ 18 ಮಂದಿ ಶಿವಸೇನಾ ಶಾಸಕರ ಜೊತೆ ಪಕ್ಷದಿಂದ ಹೊರನಡೆದರು. ಅಂದು ಶರದ್ ಪವಾರ್ ನೇತೃತ್ವದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದು ಬಂಡಾಯ ಗುಂಪಿನ ಉದ್ದೇಶವಾಗಿತ್ತು. ಭುಜಬಲ್ ನಿರ್ಧಾರ ಶಿವಸೈನಿಕರನ್ನು ರೊಚ್ಚಿಗೇಳಿಸಿತು. ಮುಂಬೈನಲ್ಲಿರುವ ಭುಜಬಲ್ ಅಧಿಕೃತ ನಿವಾಸದ ಮೇಲೆ ಕಾರ್ಯಕರ್ತರು ದಾಳಿ ಮಾಡಿ ಆಕ್ರೋಶ ಹೊರಹಾಕಿದ್ದರು.

ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರನ್ನಾಗಿ ಮನೋಹರ ಜೋಷಿ ಅವರನ್ನು ಆಯ್ಕೆ ಮಾಡಿದ್ದು ಭುಜಬಲ್ ಬೇಸರಕ್ಕೆ ಕಾರಣವಾಗಿತ್ತು. ರಾಜ್ಯದಾದ್ಯಂತ ಪಕ್ಷ ಸಂಘಟನೆ ಹಾಗೂ ಅಭ್ಯರ್ಥಿಗಳ ಗೆಲುವಿಗೆ ಶ್ರಮ ವಹಿಸಿದ್ದರೂ, ಶಿವಸೇನಾ ತಮ್ಮನ್ನು ಗುರುತಿಸಿಲ್ಲ ಎಂಬುದು ಅವರ ಮುಖ್ಯ ಆರೋಪವಾಗಿತ್ತು. ಆದರೆ ಭುಜಬಲ್ ಅಂದುಕೊಂಡಂತೆ, ಬಂಡಾಯ ಯಶಸ್ವಿಯಾಗಲಿಲ್ಲ. 12 ಶಾಸಕರು ಮಾತೃಪಕ್ಷಕ್ಕೆ ವಾಪಸಾದರು. ಭುಜಬಲ್ ನೇತೃತ್ವದ ಶಾಸಕರನ್ನು ಪ್ರತ್ಯೇಕ ಗುಂಪು ಎಂಬುದಾಗಿ ಸ್ಪೀಕರ್ ಪರಿಗಣಿಸಿದರು. ಶಾಸಕರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

1995ರ ಚುನಾವಣೆಯಲ್ಲಿ ಮುಂಬೈನ ಮಜಗಾಂವ್ ಕ್ಷೇತ್ರದಿಂದ ಭುಜಬಲ್ ಪರಾಭವಗೊಂಡರು. ಇಲ್ಲಿಂದ ಶಿವಸೇನಾದ ಬಾಳಾ ನಂದಗಾಂವ್ಕರ್ ಎಂಬುವರು ಆಯ್ಕೆಯಾದರು. ನಂತರ, ಭುಜಬಲ್ ನಾಸಿಕ್ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು. ಎನ್‌ಸಿಪಿಗೆ ಸೇರಿದರು. ಈಗ, ಮಹಾ ವಿಕಾಸ ಆಘಾಡಿ ಸರ್ಕಾರದಲ್ಲಿ ಸಚಿವರಾಗಿದ್ದಾರೆ.

2005ರಲ್ಲಿ ರಾಣೆ ಸರದಿ

ಮನೋಹರ ಜೋಷಿ ಅವರ ಬಳಿಕ ಮುಖ್ಯಮಂತ್ರಿಯಾಗಿ ಆಯ್ಕೆಯಾದವರು ನಾರಾಯಣ ರಾಣೆ. ಶಿವಸೇನಾ ನಾಯಕತ್ವವನ್ನು ಉದ್ಧವ್ ಠಾಕ್ರೆ ಅವರಿಗೆ ವಹಿಸಿದ್ದು ನಾರಾಯಣ ರಾಣೆ ಅವರಿಗೆ ಸರಿಕಾಣಲಿಲ್ಲ. ಪಕ್ಷದ ವಿರುದ್ಧ ಬಂಡಾಯ ಹೂಡಿದ ರಾಣೆ, ಶಿವಸೇನಾದಲ್ಲಿ ಪಕ್ಷದ ಟಿಕೆಟ್‌ಗಳನ್ನು ಮಾರಾಟಕ್ಕೆ ಇಡಲಾಗಿದೆ ಎಂದು ಆರೋಪಿಸಿದ್ದರು. ರಾಣೆ ಅವರ ಭಿನ್ನಮತದಿಂದ ಪಕ್ಷವು ಎರಡು ಹೋಳಾಗಲಿದೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಈ ಬಿಕ್ಕಟ್ಟು ಪಕ್ಷದಿಂದ ರಾಣೆ ಉಚ್ಚಾಟನೆಯೊಂದಿಗೆ ಕೊನೆಗೊಂಡಿತು. ಮತ್ತೆ ಮುಖ್ಯಮಂತ್ರಿಯಾಗುವ ಆಕಾಂಕ್ಷೆಯೊಂದಿಗೆ ಅವರು ಕಾಂಗ್ರೆಸ್ ಸೇರಿದರು. ಅವರು ಬೇಡಿಕೆಯಿಟ್ಟದ್ದ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಹುದ್ದೆಯೂ ಸಿಗಲಿಲ್ಲ. ಹೀಗಾಗಿ ಕಾಂಗ್ರೆಸ್‌ನಿಂದಲೂ ಹೊರಬಂದರು. ವಿಧಾನಸಭಾ ಚುನಾವಣೆಯಲ್ಲೂ ಸೋತರು. 2018ರಲ್ಲಿ ಮಹಾರಾಷ್ಟ್ರ ಸ್ವಾಭಿಮಾನಿ ಪಕ್ಷವನ್ನು (ಎಂಎಸ್‌ಪಿ) ಕಟ್ಟಿದ ರಾಣೆ, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಸೇರಿದರು. ಈಗ ಕೇಂದ್ರ ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ.

ರಾಜ್ ಠಾಕ್ರೆ

ಬಾಳಾ ಠಾಕ್ರೆ ಅವರ ಅಣ್ಣನ ಮಗ ರಾಜ್ ಠಾಕ್ರೆ ಅವರು ಶಿವಸೇನಾವನ್ನು ತೊರೆದದ್ದು ಆ ಪಕ್ಷದ ಇತಿಹಾಸದಲ್ಲಿ ಒಂದು ದೊಡ್ಡ ಅಧ್ಯಾಯ. ಬಾಳಾ ಠಾಕ್ರೆ ಅವರು ತಮ್ಮ ಮಗ ಉದ್ಧವ್ ಠಾಕ್ರೆ ಅವರನ್ನು ಮುನ್ನೆಲೆಗೆ ತಂದಿದ್ದರ ವಿರುದ್ಧ ರಾಜ್ ಠಾಕ್ರೆ ಅಸಮಾಧಾಗೊಂಡಿದ್ದರು. 2005ರ ನವೆಂಬರ್‌ನಲ್ಲಿ ಪಕ್ಷ ತೊರೆದ ರಾಜ್ ಅವರು, ನಂತರದ ಕೆಲವೇ ತಿಂಗಳಲ್ಲಿ ತಮ್ಮದೇ ಮಹಾರಾಷ್ಟ್ರ ನವ ನಿರ್ಮಾಣ ಸೇನಾವನ್ನು ಸ್ಥಾಪಿಸಿದರು. ರಾಜ್ ಅವರ ಪಕ್ಷವು ಚುನಾವಣಾ ರಾಜಕೀಯದಲ್ಲಿ ಸಕ್ರಿಯವಾಗಿದೆ, ಅದರೆ ನಿರೀಕ್ಷಿತ ಯಶಸ್ಸು ಗಳಿಸಿಲ್ಲ.

ಪಕ್ಷಗಳಲ್ಲಿ ಬಿರುಕು ಹೊಸದಲ್ಲ

ಪಕ್ಷಗಳಲ್ಲಿ ಬಿರುಕು, ಬಂಡಾಯ ಭಾರತದ ರಾಜಕಾರಣದಲ್ಲಿ ಹೊಸದೇನಲ್ಲ. ಬಂಡಾಯದ ಗುಂಪೇ ಮೂಲ ಪಕ್ಷದ ನಿಯಂತ್ರಣವನ್ನು ಕೈಗೆ ತೆಗೆದುಕೊಂಡ ಉದಾಹರಣೆಗಳೂ ಇವೆ

ಆಧಾರ: ಪಿಟಿಐ, ಬಿಬಿಸಿ

ಇಂದಿರಾ ಉಚ್ಚಾಟನೆ

1969ರಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಆದ ವಿಭಜನೆಯು ಆ ಪಕ್ಷದ ಭವಿಷ್ಯವನ್ನೇ ಬದಲಿಸಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ಅವರು ಅತ್ಯಂತ ಪ್ರಭಾವಿ ಪ್ರಧಾನಿ ಎಂದು ಬಣ್ಣಿಸಲಾಗುವ ಇಂದಿರಾ ಗಾಂಧಿ ಅವರನ್ನು 1969ರಲ್ಲಿ ಪಕ್ಷದಿಂದ ಹೊರಗೆ ಹಾಕಿದ್ದರು. 'ಸಿಂಡಿಕೇಟ್' ಎಂದು ಕರೆಯಲಾಗುತ್ತಿದ್ದ, ದಕ್ಷಿಣದ ರಾಜ್ಯಗಳ ನಾಯಕರೇ ಇದ್ದ ಗುಂಪು ಕಾಂಗ್ರೆಸ್‌ನಲ್ಲಿ ಅತ್ಯಂತ ಪ್ರಭಾವಿಯಾಗಿತ್ತು. ಇಂದಿರಾ ಅವರನ್ನು 'ಮೂಕ ಗೊಂಬೆ' ಎಂದೇ ಈ ಸಿಂಡಿಕೇಟ್ ಕರೆಯುತ್ತಿತ್ತು. ತಮ್ಮಿಷ್ಟದಂತೆ ಅವರು ಆಳ್ವಿಕೆ ಮಾಡಬಹುದು ಎಂಬ ಭಾವನೆಯಿಂದ ಇಂದಿರಾ ಅವರನ್ನು ಪ್ರಧಾನಿ ಸ್ಥಾನಕ್ಕೆ ಈ ಗುಂಪು ಆಯ್ಕೆ ಮಾಡಿತ್ತು. ಆದರೆ, ಸಿಂಡಿಕೇಟ್ ನೆರಳಿನಲ್ಲಿ ಇಂದಿರಾ ಕೆಲಸ ಮಾಡಲಿಲ್ಲ.

ಆಗ ನಡೆದ ರಾಷ್ಟ್ರಪತಿ ಚುನಾವಣೆಯು ಕಾಂಗ್ರೆಸ್‌ನೊಳಗಿನ ಬಿರುಕನ್ನು ಬಹಿರಂಗಪಡಿಸಿತು. ರಾಷ್ಟ್ರಪತಿಯಾಗಿದ್ದ ಡಾ. ಝಾಕಿರ್ ಹುಸೇನ್ ಅವರು ನಿಧನರಾದರು. ಲೋಕಸಭೆಯ ಸ್ಪೀಕರ್ ಆಗಿದ್ದ ನೀಲಂ ಸಂಜೀವ ರೆಡ್ಡಿ ಅವರನ್ನು ರಾಷ್ಟ್ರಪತಿ ಮಾಡಬೇಕು ಎಂಬುದು ಸಿಂಡಿಕೇಟ್‌ನ ನಿರ್ಧಾರವಾಗಿತ್ತು. ಆದರೆ, ಇದಕ್ಕೆ ಒಪ್ಪಿದರೆ ಸಿಂಡಿಕೇಟ್ ಇನ್ನಷ್ಟು ಪ್ರಭಾವಿಯಾಗಬಹುದು ಎಂಬುದು ಇಂದಿರಾ ಅವರ ಭೀತಿಯಾಗಿತ್ತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಜಗಜೀವನ್‌ರಾಂ ಅವರ ಹೆಸರನ್ನು ಇಂದಿರಾ ಮುಂದಿಟ್ಟರು. ಸಿಂಡಿಕೇಟ್ ಒಪ್ಪಲಿಲ್ಲ. ರೆಡ್ಡಿ ಅವರ ಹೆಸರೇ ಅಂತಿಮವಾಯಿತು. ಉಪರಾಷ್ಟ್ರಪತಿಯಾಗಿದ್ದ ವಿ.ವಿ. ಗಿರಿ ಅವರು ಪಕ್ಷೇತರರಾಗಿ ಕಣಕ್ಕೆ ಇಳಿದರು. 'ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಿ' ಎಂದು ಕಾಂಗ್ರೆಸ್ಸಿಗರಿಗೆ ಇಂದಿರಾ ಹೇಳಿದರು. ಗಿರಿ ಅವರನ್ನು ಬೆಂಬಲಿಸಿ ಎಂಬ ಪರೋಕ್ಷ ಕರೆ ಅದಾಗಿತ್ತು. ಗಿರಿ ಅವರು ಗೆದ್ದರು. ಪಕ್ಷ ವಿರೋಧಿ ಚಟುವಟಿಕೆಗಾಗಿ ಇಂದಿರಾ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು. ಅವರು ಕಾಂಗ್ರೆಸ್ (ಆರ್) ಎಂಬ ಪಕ್ಷ ಕಟ್ಟಿದರು. ಕಾಂಗ್ರೆಸ್‌ನ ಬಹುಪಾಲು ಮುಖಂಡರು ಇಂದಿರಾ ಅವರ ಜತೆಗೆ ಹೋದರು. ಇಂದಿರಾ ಅವರ ಬಣವೇ ಮೂಲ ಪಕ್ಷವಾಯಿತು.

ಎಐಎಡಿಎಂಕೆ ಬಿರುಕು

ಎಐಎಡಿಎಂಕೆ ಎರಡು ಬಾರಿ ಬಿಕ್ಕಟ್ಟು ಎದುರಿಸಿದೆ. ಪಕ್ಷದ ಸ್ಥಾಪಕ ಎಂ.ಜಿ.ರಾಮಚಂದ್ರನ್ (ಎಂಜಿಆರ್) ಅವರು 1988ರ ಡಿಸೆಂಬರ್‌ನಲ್ಲಿ ಮೃತಪಟ್ಟಾಗ ಪಕ್ಷವು ವಿಭಜನೆಗೊಂಡಿತು. ಎಂಜಿಆರ್ ಹೆಂಡತಿ ಜಾನಕಿ ಮತ್ತು ಎಂಜಿಆರ್ ಅವರ ಜತೆಗೇ ಇದ್ದ ಜಯಲಲಿತಾ ನಡುವೆ ಪಕ್ಷದ ಚುಕ್ಕಾಣಿಗಾಗಿ ಪೈಪೋಟಿ ಇತ್ತು. ಎರಡೂ ಬಣಗಳು ಪಕ್ಷವು ತಮಗೆ ಸೇರಿದ್ದು ಎಂದು ಹಟ ಹಿಡಿದವು. ಪರಿಣಾಮವಾಗಿ ಪಕ್ಷದ ಚಿಹ್ನೆಯಾಗಿದ್ದ ಎರಡೆಲೆಯನ್ನು ಸ್ಥಗಿತಗೊಳಿಸಲಾಯಿತು. ತಮಿಳುನಾಡು ವಿಧಾನಸಭೆಗೆ 1989ರಲ್ಲಿ ನಡೆದ ಚುನಾವಣೆಯಲ್ಲಿ ಎರಡೂ ಬಣಗಳು ಪ್ರತ್ಯೇಕವಾಗಿ ಸ್ಪರ್ಧಿಸಿ ಸೋತವು. ಚುನಾವಣೆ ಬಳಿಕ ಎರಡೂ ಬಣಗಳು ಒಂದಾದವು. ಜಯಲಲಿತಾ ಅವರು 2016ರಲ್ಲಿ ನಿಧನರಾದ ಬಳಿಕವೂ ಪಕ್ಷವು ಎರಡು ಬಣವಾಗಿತ್ತು. ಶಶಿಕಲಾ, ದಿನಕರನ್ ಮತ್ತು ಪನ್ನೀರ್‌ಸೆಲ್ವಂ ಅವರು ಒಂದು ಬಣದ ನಾಯಕರಾದರೆ, ಪಳನಿಸ್ವಾಮಿ ಅವರು ಮತ್ತೊಂದು ಬಣದಲ್ಲಿದ್ದರು. 2017ರಲ್ಲಿ ಪಳನಿಸ್ವಾಮಿ ಮತ್ತು ಪನ್ನೀರ್‌ಸೆಲ್ವಂ ಒಟ್ಟಾದರು. ಈಗ, ಈ ಇಬ್ಬರ ನಡುವೆ ಮತ್ತೆ ಮನಸ್ತಾಪ ಕಾಣಿಸಿಕೊಂಡಿದೆ.

ನಾಯ್ಡು ಬಂಡಾಯ

ಎನ್.ಟಿ.ರಾಮರಾವ್ (ಎನ್‌ಟಿಆರ್) ಅವರು 1982ರಲ್ಲಿ ಸ್ಥಾಪಿಸಿದ್ದ ತೆಲುಗುದೇಶಂ ಪಕ್ಷದಲ್ಲಿ (ಟಿಡಿಪಿ) 1993ರ ಹೊತ್ತಿಗೆ ಬಿರುಕುಗಳು ಕಾಣಿಸಿಕೊಳ್ಳಲಾರಂಭಿಸಿತು. ಎನ್‌ಟಿಆರ್ ಅವರು ಲಕ್ಷ್ಮಿ ಪಾರ್ವತಿಯನ್ನು ಮದುವೆಯಾಗಿದ್ದು ಮತ್ತು ಪಕ್ಷದಲ್ಲಿ ಲಕ್ಷ್ಮಿ ಪಾರ್ವತಿ ಅವರ ಪ್ರಭಾವ ಹೆಚ್ಚತೊಡಗಿದ್ದು ಬಿರುಕಿಗೆ ಕಾರಣವಾಗಿತ್ತು. ಎನ್‌ಟಿಆರ್ ಅವರ ಅಳಿಯ ಚಂದ್ರಬಾಬು ನಾಯ್ಡು ಅವರು ಆ ಹೊತ್ತಿಗಾಗಲೇ ಪಕ್ಷದಲ್ಲಿ ಪ್ರಭಾವಿಯಾಗಿ ಬೆಳೆದಿದ್ದರು. 1995ರ ಸೆಪ್ಟೆಂಬರ್‌ನಲ್ಲಿ ನಾಯ್ಡು ಅವರು ಬಂಡಾಯ ಎದ್ದರು. ಎನ್‌ಟಿಆರ್ ಅವರು ಮುಖ್ಯಮಂತ್ರಿಯಾಗಿ ಮೂರನೇ ಅವಧಿ ಪೂರ್ಣಗೊಳಿಸಲು ಒಂಬತ್ತು ತಿಂಗಳಷ್ಟೇ ಉಳಿದಿತ್ತು. ತೆಲುಗುದೇಶಂ ಪಕ್ಷದ ಬಹುತೇಕ ಶಾಸಕರು, ಕುಟುಂಬದ ಹೆಚ್ಚಿನ ಸದಸ್ಯರು ನಾಯ್ಡು ಪರ ನಿಂತರು.




ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 157

ಬ್ರಹ್ಮನನ್ನು ಕ್ಷಮಿಸಿದ ಶಿವ

ಶಿವ-ಸತೀದೇವಿಯರ ಮದುವೆ ಪೌರೋಹಿತ್ಯ ವಹಿಸಿಕೊಂಡಿದ್ದ ಬ್ರಹ್ಮ ಮೊಮ್ಮಗಳಾದ ಸತೀದೇವಿ ಮೇಲೆ ಕಾಮವಿಕಾರ ತೋರಿಸಿದ. ಇದರಿಂದ ರುದ್ರದೇವ ಕೋಪಗೊಂಡು ಬ್ರಹ್ಮನನ್ನು ಕೊಲ್ಲಲು ಬಂದಾಗ ಮಹಾವಿಷ್ಣು ರಕ್ಷಣೆಗೆ ಧಾವಿಸಿ ಪರಿಪರಿಯಾಗಿ ಬೇಡುತ್ತಾನೆ. 'ಓ ಮಹೇಶ್ವರ! ಈ ಚತುರ್ಮುಖಬ್ರಹ್ಮ ಪ್ರಜೆಗಳನ್ನು ಸೃಷ್ಟಿಸುವುದಕ್ಕಾಗಿ ಆವಿರ್ಭವಿಸಿರುವ. ಇವನು ಕೊಲ್ಲಲ್ಪಟ್ಟರೆ ಇನ್ನಾರೂ ಈ ಜಗತ್ತನ್ನು ಸೃಷ್ಟಿಸುವವರಿಲ್ಲ. ಶಿವಸ್ವರೂಪನಾದ ನಿನ್ನ ಆಜ್ಞೆಯಿಂದಲೇ ನಾವು ತ್ರಿಮೂರ್ತಿಗಳು ಪ್ರತ್ಯೇಕವಾಗಿ ಸೃಷ್ಟಿ, ಪಾಲನೆ ನಾಶಗಳನ್ನು ಮಾಡುತ್ತಲಿರುವೆವು. ಹೀಗಿರಲು ಬ್ರಹ್ಮನನ್ನು ನೀನು ಸಂಹರಿಸಿದರೆ ನೀನು ನಿಯಮಿಸಿದ ಸೃಷ್ಟಿಕರ್ಮವನ್ನು ಮಾಡುವವರು ಯಾರು? ಆದುದರಿಂದ ವಿಧಿಯನ್ನು ಸಂಹರಿಸಬೇಡ. ಈ ವಿಧಿಯೇ ದಕ್ಷಪುತ್ರಿಯಾದ ಸತೀದೇವಿಯನ್ನು ಅನೇಕ ಸದುಪಾಯಗಳಿಂದ ನಿನ್ನ ಪತ್ನಿಯಾಗುವಂತೆ ಮಾಡಿದ್ದಾನೆ. ಆಕಾರಣಕ್ಕಾದರೂ ಬ್ರಹ್ಮನನ್ನು ಕ್ಷಮಿಸು' ಎಂದು ಶಿವನ ಮನ ಕರಗುವಂತೆ ಕೋರುತ್ತಾನೆ.

ಆಗ ಮಹಾದೇವ ಹೇಳಿದ: 'ಎಲೈ ವಿಷ್ಣುವೇ, ಬ್ರಹ್ಮನನ್ನು ಕೊಲ್ಲುವುದನ್ನು ತಡೆಯಬೇಡ. ನೀನು ಹಿಂದೆ ಕೋರಿದ ವಿಜ್ಞಾಪನೆಯನ್ನು ಈಗ ನಾನು ಪೂರೈಸುವೆ. ಮಹಾಪಾಪಿಯೂ ದುಷ್ಟನೂ ಆದಂತಹ ಬ್ರಹ್ಮನನ್ನೂ ಸಂಹರಿಸುವೆ. ಬ್ರಹ್ಮನ ಬದಲು ನಾನೇ ಪ್ರಜೆಗಳನ್ನು ಸೃಷ್ಟಿಸುವೆ. ಅಥವಾ ನನ್ನ ಶಕ್ತಿಯಿಂದ ಇನ್ನೊಬ್ಬ ಸೃಷ್ಟಿಕರ್ತನನ್ನೇ ಸೃಷ್ಟಿಸುವೆ. ನನ್ನ ನಿಯಮದಂತೆ ಬ್ರಹ್ಮನನ್ನು ಮೊದಲು ಸಂಹರಿಸಿ, ಬಳಿಕ ಇನ್ನೋರ್ವ ಬ್ರಹ್ಮನನ್ನು ಸೃಷ್ಟಿಸುವೆ. ನನ್ನನ್ನು ತಡೆಯಬೇಡ' ಎಂದ.

'ಓ ಪರಮೇಶ್ವರನೇ ಹಾಗೆ ಮಾಡಬೇಡ. ನಿನ್ನ ಪ್ರತಿಜ್ಞೆಯನ್ನು ಬೇರೆ ಕಾಮುಕಪುರುಷರಲ್ಲಿ ಅನುಷ್ಠಾನಗೊಳಿಸು, ಬ್ರಹ್ಮನಲ್ಲಿ ಬೇಡ. ನಮ್ಮ ಆತ್ಮಸ್ವರೂಪದಲ್ಲಿ ವಧೆಯೇ ಇಲ್ಲ. ಆತ್ಮನನ್ನು ಕೊಲ್ಲಲು ಅಸಾಧ್ಯ. ನಾವು ತ್ರಿಮೂರ್ತಿಗಳೂ ನಿನ್ನ ಸ್ವರೂಪರು, ಭಿನ್ನರಲ್ಲ. ಈ ವಿಷಯವನ್ನು ತತ್ವತ: ವಿಚಾರಮಾಡು' ಅಂತ ಹರಿ ಹೇಳಿದಾಗ, ಶಂಕರ 'ಬ್ರಹ್ಮನು ನನ್ನ ಆತ್ಮಸ್ವರೂಪನೆಂದು ಹೇಳಿದೆಯಲ್ಲಾ, ಅದು ಹೇಗೆ? ಪ್ರತ್ಯಕ್ಷವಾಗಿ ಇವನು ಎದುರಿಗೆ ಬೇರೆಯಾಗಿ ನಿಂತಿರುವನಲ್ಲವೇ?' ಎನ್ನುತ್ತಾನೆ.

'ಓ ಸದಾಶಿವ! ಬ್ರಹ್ಮನು ನಿನಗಿಂತಲೂ ಬೇರೆಯಲ್ಲ. ನೀನೂ ಬ್ರಹ್ಮನಿಗಿಂತ ಬೇರೆಯಲ್ಲ, ನಾನೂ ನಿನ್ನಿಂದ ಬೇರೆಯಲ್ಲ, ನೀನೂ ನನಗಿಂತ ಬೇರೆಯಲ್ಲ. ಸರ್ವಜ್ಞನಾದ ನೀನು ಇದೆಲ್ಲವನ್ನೂ ತಿಳಿದೇ ಇರುವೆ. ಆದರೂ ನನ್ನಿಂದ ಈ ವಿಷಯವನ್ನು ಹೇಳಿಸುತ್ತಿರುವೆ. ನಿನ್ನ ಆಜ್ಞೆಯಂತೆ ಈ ಶಿವತತ್ತ್ವವನ್ನು ಹೇಳುತ್ತಲಿರುವೆ. ಎಲ್ಲ ದೇವತೆಗಳು ಮತ್ತು ಮುನಿಗಳು ಸಾವಧಾನತೆಯಿಂದ ಕೇಳಿ' ಎಂದ ಹರಿಯು ತ್ರಿಮೂರ್ತಿ ಸ್ವರೂಪವನ್ನು ಹೀಗೆ ವಿವರಿಸುತ್ತಾನೆ.

'ಕಾರ್ಯ ಮತ್ತು ಕಾರಣರೂಪನೂ, ಅಂಶ ಮತ್ತು ಅಂಶಿಸ್ವರೂಪನೂ, ಜ್ಞಾನಜ್ಯೋತಿ ಪ್ರಕಾಶಸ್ವರೂಪನೂ ಪರಬ್ರಹ್ಮಸ್ವರೂಪನೂ ಆದ ನಿನ್ನ ಮೂರು ಅಂಶಗಳು ನಾವು ತ್ರಿಮೂರ್ತಿಗಳಾಗಿರುವೆವು. ಆ ಪರಮಾತ್ಮ ಸ್ವರೂಪ ಹೊರತು ಮತ್ತಾವ ವಸ್ತುವೂ ಇಲ್ಲದಿರುವಾಗ ನಾನೆಲ್ಲಿ? ನೀನಾರು? ಬ್ರಹ್ಮನಾರು? ನಾವು ಮೂವರೂ ಆ ಪರಮಾತ್ಮನ ಸ್ವರೂಪರು. ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗಾಗಿ ಬೇರೆ ಬೇರೆ ರೂಪದಿಂದಿರುವೆವು ಅಷ್ಟೇ.

'ಲೀಲಾರುದ್ರ ರೂಪನಾದ ನೀನು, ನಿನ್ನ ಸ್ವರೂಪವನ್ನು ನೋಡಿಕೋ. ನೀನು ಸಗುಣನಾದ ಮತ್ತು ನಿರ್ಗುಣನೂ ಆದ ಪರಮೇಶ್ವರನ ಸ್ವರೂಪ. ಸಗುಣನಾದ ನಿನ್ನ ಮೂರು ಅಂಶಗಳೇ ನಾವು ತ್ರಿಮೂರ್ತಿಗಳು. ಒಂದು ಶರೀರಕ್ಕೆ ಶಿರಸ್ಸು, ಕತ್ತು, ಕೈ, ಕಾಲುಗಳೆಂಬ ಅಂಗಗಳು ಹೇಗೆ ಇರುವವೋ, ಅದರಂತೆ ನಾವು ಓರ್ವನೇ ಆದ ಪರಮೇಶ್ವರನ ಅಂಶಗಳಾಗಿರುವೆವು. ನೀನು ವ್ಯಾಪಕವೂ ಪ್ರಕಾಶಸ್ವರೂಪವೂ ಅಂತರ್ಯಾಮಿಯೂ ಅನಾದಿಯೂ ವಿಕಾರವಿಲ್ಲದುದೂ ಚರ್ಮಚಕ್ಷುಸ್ಸುಗಳಿಗೆ ಕಾಣಿಸದಿರುವುದೂ ಮಾಯಾಮಯವಾದ ಅನೇಕ ಜೀವರೂಪವುಳ್ಳದುದೂ ನಿತ್ಯವೂ ದೀರ್ಘತೆ, ಸ್ಥೂಲತೆ ಮುಂತಾದ ದ್ರವ್ಯಧರ್ಮವಿಲ್ಲದುದೂ ಆದಂತಹ ಬ್ರಹ್ಮ ವಸ್ತುವಿನ ಸ್ವರೂಪ. ಆ ಬ್ರಹ್ಮವಸ್ತುವಿನಿಂದಲೇ ಈ ಜಗತ್ತೆಲ್ಲವೂ ಜನಿಸುವುದು, ಕೆಲವು ಕಾಲ ಇರುವುದು. ಕೊನೆಯಲ್ಲಿ ಲಯವನ್ನು ಹೊಂದುವುದು' ಎಂದು ವಿಷ್ಣು ಹೇಳಿದಾಗ ಮಹಾದೇವ ಪ್ರಸನ್ನನಾಗಿ, ಬ್ರಹ್ಮನ ತಪ್ಪನ್ನು ಕ್ಷಮಿಸಿದ. ಇಲ್ಲಿಗೆ ಸತೀಖಂಡದ ಹತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಉದ್ಘಾಟನಾ ಸಮಾರಂಭವೊಂದರಲ್ಲಿ ರಾಜಕೀಯ ನಾಯಕರ ಎರಡು ಗುಂಪು ಹೊಡೆದಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಶಿವಸೇನಾ ಮತ್ತು ಎನ್‌ಸಿಪಿ ನಾಯಕರು ಪರಸ್ಪರ ಹೊಡೆದಾಡುತ್ತಿದ್ದಾರೆ. ಎರಡೂ ಪಕ್ಷಗಳು ಅಧಿಕಾರಕ್ಕಾಗಿ ಮೈತ್ರಿ ಮಾಡಿಕೊಂಡಿವೆ. ಎರಡೂ ಪಕ್ಷಗಳ ನಡುವೆ ಎಂದೋ ಹೊಡೆದಾಟ ನಡೆಯಬೇಕಿತ್ತು. ಈಗ ನಡೆಯುತ್ತಿದೆ ಅಷ್ಟೆ' ಎಂಬ ವಿವರಣೆಯನ್ನು ಈ ವಿಡಿಯೊಗೆ ನೀಡಲಾಗಿದೆ. ಶಿವಸೇನಾದ ಕೆಲವು ಶಾಸಕರು ಮೈತ್ರಿಕೂಟ ತೊರೆಯುವಂತೆ ಪಕ್ಷದ ಮುಖ್ಯಸ್ಥರ ಮೇಲೆ ಬಂಡಾಯ ಎದ್ದಿರುವ ಸಂದರ್ಭದಲ್ಲಿ ಈ ವಿಡಿಯೊ ವೈರಲ್ ಆಗಿದೆ.

✓ 'ಈ ವಿಡಿಯೊಗೂ, ಮಹಾರಾಷ್ಟ್ರ ಸರ್ಕಾರದ ಪ್ರಸ್ತುತ ಬಿಕ್ಕಟ್ಟಿಗೂ ಯಾವುದೇ ಸಂಬಂಧವಿಲ್ಲ. ಇದು 2019ರ ಮಾರ್ಚ್ 1ರ ವಿಡಿಯೊ. ಬೃಹನ್ ಮುಂಬೈ ನಗರ ಪಾಲಿಕೆ ನಿರ್ಮಿಸಿದ್ದ ಸಮುದಾಯ ಭವನ ಒಂದರ ಉದ್ಘಾಟನೆ ಸಮಾರಂಭದಲ್ಲಿ ದೀಪ ಬೆಳಗಿಸುವ ವಿಚಾರಕ್ಕಾಗಿ ಎನ್‌ಸಿಪಿ ಮತ್ತು ಶಿವಸೇನಾ ನಾಯಕರ ಮಧ್ಯೆ ಹೊಡೆದಾಟ ನಡೆದಿತ್ತು. 2019ರ ಮಾರ್ಚ್‌ನಲ್ಲಿ ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್ ಮೈತ್ರಿಕೂಟದ ಎಂವಿಎ ಸರ್ಕಾರ ಅಸ್ತಿತ್ವಕ್ಕೇ ಬಂದಿರಲಿಲ್ಲ. ಹಳೆಯ ವಿಡಿಯೊವನ್ನು ತಪ್ಪು ಮಾಹಿತಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ' ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಜಗದುದ್ಧಾರಕ್ಕಾಗಿ ಗುದ್ದಾಟ

ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ|
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ||
ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿ -|
ನ್ನುದ್ಧಾರವೆಷ್ಟಾಯ್ತೊ?- ಮಂಕುತಿಮ್ಮ ||658||

ಪದ-ಅರ್ಥ: ಎದ್ದೆದ್ದು= ಎದ್ದು+ ಎದ್ದು, ಜಗವನ್ನೆನುತಿಹ= ಜಗವನು+ ಎನ್ನುತಿಹ,

ವಾಚ್ಯಾರ್ಥ: ಎದ್ದೆದ್ದು ಬೀಳುತ್ತಿದ್ದೀಯಾ, ಗುದ್ದಾಡಿ ಸೋಲುತ್ತಿದ್ದೀಯಾ, ಗದ್ದಲವನ್ನು ಎಲ್ಲೆಡೆಗೆ ತುಂಬಿ ಹೆಸರು ಮಾಡುತ್ತಿದ್ದೀಯಾ. ಜಗತ್ತನ್ನು ಉದ್ಧಾರ ಮಾಡುತ್ತೇನೆಂದು ಹೇಳುವ ಗೆಳೆಯನೆ, ನಿನ್ನ ಉದ್ದಾರವೆಷ್ಟಾಯಿತು, ನೋಡಿಕೊ.

ವಿವರಣೆ: ತಾನೊಬ್ಬ ನಾಯಕ ಎಂದು ಅವನು ಭಾವಿಸಿದ್ದಾನೆ. ಈಗಿರುವ ವ್ಯವಸ್ಥೆಯಿಂದ ದೇಶದ ಉದ್ಧಾರ ಸಾಧ್ಯವಿಲ್ಲವೆಂದು ಘೋಷಿಸುತ್ತ, ಹೊಸದೊಂದು ವ್ಯವಸ್ಥೆಯನ್ನು ತರುತ್ತೇನೆ ಎಂದು ರೋಚಕವಾದ ಮಾತುಗಳನ್ನಾಡುತ್ತಾನೆ, ಜನರನ್ನು ಮರುಳು ಮಾಡುತ್ತಾನೆ. ಚಿತ್ರವಿಚಿತ್ರ ಸಮಾರಂಭಗಳನ್ನು, ಪಾದಯಾತ್ರೆಗಳನ್ನು ನಡೆಸುತ್ತ ಸದಾಕಾಲ ವರ್ತಮಾನ ಪತ್ರಿಕೆಗಳ ಮುಖಪುಟದಲ್ಲಿಯೇ ತನ್ನ ಭಾವಚಿತ್ರ ನಿತ್ಯ ಬರುವಂತೆ ನೋಡಿಕೊಳ್ಳುತ್ತಾನೆ. ತನ್ನ ಬೆಳವಣಿಗೆಗೆ ಅಡ್ಡಬರುವಂತೆ ತೋರುವ ಉಳಿದ ನಾಯಕರ ಅವಹೇಳನೆ ಮಾಡುತ್ತಾನೆ, ಏನೋ ಒಳಸಂಚು ಮಾಡಿ ಅವರ ಹೆಸರು ಕೆಡಿಸುತ್ತಾನೆ, ಜಾತಿಯನ್ನು ಎಳೆದು ತರುತ್ತಾನೆ. ಆತ ಜನರನ್ನು ಒಂದಾಗದಂತೆ ಜಗಳ ತಂದು ಕೋಲಾಹಲ ಎಬ್ಬಿಸುತ್ತಾನೆ. ಅವಶ್ಯಕತೆ ತೋರಿದರೆ ಒಂದಿಬ್ಬರ ಪ್ರಾಣಹರಣವನ್ನೂ ಗೊತ್ತಾಗದಂತೆ ಮಾಡಿಸುತ್ತಾನೆ. ಇದೆಲ್ಲ ಸಮಾಜದ ಉದ್ಧಾರಕ್ಕೆ.

ಇದು ಕೇವಲ ರಾಜಕೀಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ತಮಗೆ ಏನೂ ಬೇಡ ಎಂದು ಸಂನ್ಯಾಸವನ್ನು ಪಡೆದ ಸನ್ಯಾಸಿಗಳು ಮಾಡುವ ಗುದ್ದಾಟ, ಗದ್ದಲ ಕಡಿಮೆಯೇ? ರಾಜಕೀಯಕ್ಕೆ ನೇರವಾಗಿ ಕಾಲಿಡದೆ, ಹಿಂದೆ ಕುಳಿತೇ ನಾಯಕರನ್ನು ಅಲುಗಾಡಿಸುವ, ಅವರನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುವ ಹುನ್ನಾರ ಕಣ್ಣಿಗೆ ಕಾಣುತ್ತದೆ. ಕೆಲವರ ರಾಜಕೀಯ ಆಸಕ್ತಿ ಯಾವ ಮಟ್ಟದ್ದೆಂದರೆ, ಅವರು ಮನಸ್ಸು ಮಾಡಿದರೆ ಸರ್ಕಾರವನ್ನೇ ಬದಲಿಸಬಹುದು ಎಂದುಕೊಳ್ಳುತ್ತಾರೆ. ಅವರನ್ನು ಕೇಳಿದರೆ, ಇದೆಲ್ಲ ಸಮಾಜದ, ದೇಶದ ಉದ್ಧಾರಕ್ಕೆ ಎಂಬ ಮಾತು ಬರುತ್ತದೆ.

ಸಮಾಜಸೇವೆಯಲ್ಲಿ, ಶೈಕ್ಷಣಿಕ, ವೈದ್ಯಕೀಯ, ಔದ್ಯಮಿಕ, ನ್ಯಾಯ, ತಂತ್ರಜ್ಞಾನ ಇಂಥ ಎಲ್ಲ ಕ್ಷೇತ್ರಗಳಲ್ಲೂ ಒಂದಷ್ಟು ಜನರಿದ್ದಾರೆ. ಅವರಿಗೆ ಪ್ರಪಂಚದ ಉದ್ಧಾರದ್ದೇ ಚಿಂತೆ. ಅದಕ್ಕಾಗಿ ಎಷ್ಟೊಂದು ಹಾರಾಟ, ಒದ್ದಾಟ.

ಬಸವಣ್ಣನವರು ಇಂಥವರನ್ನು ಕಂಡು ಹೇಳುತ್ತಾರೆ,

ತನು ಮನಧನವ ಹಿಂದಿಕ್ಕಿಕೊಂಡು ಮಾತಿನ
ಬಣಬೆಯ ಒಳಲೊಟ್ಟೆಯ ನುಡಿವರು
ನೀವೆಲ್ಲ ಕೇಳಿರೆ:
ತಲಹಿಲ್ಲದ ಕೋಲು ಜೊಳ್ಳುಹಾರುವುದಲ್ಲದೆ
ಗುರಿಯ ತಾಗಬಲ್ಲದೆ?
ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ
ಕೂಡಲಸಂಗಮದೇವ ಎಂತೊಲಿವನಯ್ಯ,

ತಮ್ಮ ತನುಮನಧನಗಳನ್ನು ಹಿಂದಿಟ್ಟು, ಬರೀ ಮಾತಿನ ಬಣವೆಯನ್ನು ಕಟ್ಟಿ, ಸುಳ್ಳು ಮಾತನಾಡಿ, ತೂಕವಿಲ್ಲದ, ಗುರಿ ತಲುಪದ ಬಾಣಗಳನ್ನು ಬಿಡುವ ಜನರಿಗೆ ಕೂಡಲಸಂಗಮದೇವ ಹೇಗೆ ಒಲಿದಾನು? ಆ ಮಾತನ್ನು ಕಗ್ಗ ಕೇಳುತ್ತದೆ. ಮರುಳು ಮಾಡುವ ಮಾತುಗಳನ್ನಾಡಿ, ಗದ್ದಲ ಎಬ್ಬಿಸಿ, ಪ್ರಪಂಚವನ್ನು ಉದ್ಧಾರ ಮಾಡುತ್ತೇನೆಂದು ಹೊರಟಿರುವ ಸ್ನೇಹಿತನೇ, ಮೊದಲು ನಿನ್ನ ಉದ್ಧಾರವಾಯಿತೇ? ಅದನ್ನು ಗಮನಿಸು. ನಂತರ ಜಗತ್ತಿನ ಉದ್ಧಾರಕ್ಕೆ ಕೈ ಹಾಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಚತುರ್ದಶಿ ಅಹೋರಾತ್ರ ನಕ್ಷತ್ರ: ರೋಹಿಣಿ ಗಂ. 16-02 ಯೋಗ: ಶೂಲ ಗಂ. 06-47, ಕರಣ: ವಿಷ್ಟಿ ಗಂ. 16-39, ಮಿಥುನ ಮಾಸದ 12 ನೇ ದಿನ.

ರಾಹುಕಾಲ: ಬೆಳಿಗ್ಗೆ 07:30 – 09:00

ಸೂರ್ಯೋದಯ: 06-10 **ಸೂರ್ಯಾಸ್ತ:** 06-57

ಮುಸ್ಲಿಂ ದಿನಾಂಕ: 27 ಜುಲ್ಹಾಯದ್

ದಿನ ವಿಶೇಷ: ಮಾಸ ಶಿವರಾತ್ರಿ

ಅದೃಷ್ಟ ಸಂಖ್ಯೆ: 1, 6

ಮೇಷ: ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ಬರಲಿದೆ. ಲೆಕ್ಕಪತ್ರಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳುವ ಕಾರ್ಯದ ಬಗ್ಗೆ ಯೋಚನೆ ಮಾಡಿ.

ವೃಷಭ: ಉದ್ಯೋಗದಲ್ಲಿ ಆರ್ಥಿಕತೆಯ ಮಟ್ಟ ಏರಿಕೆ ಕಂಡಂತೆ ಕೆಲಸದ ಒತ್ತಡ ಹಾಗೂ ಜವಾಬ್ದಾರಿಗಳೂ ಕೂಡ ಹೆಚ್ಚಲಿವೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯನ್ನು ಬೆಳೆಸಿಕೊಳ್ಳಿ.

ಮಿಥುನ: ನ್ಯಾಯಾಲಯದ ಮೆಟ್ಟಿಲೇರಿದ ನಿಮ್ಮ ಸಮಸ್ಯೆಗಳನ್ನು ರಾಜಿ ಒಪ್ಪಂದದಿಂದ ಬಗೆಹರಿಸಿಕೊಳ್ಳುವುದು ಉತ್ತಮ. ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಅಸ್ಥಿರತೆ ಅನುಭವಕ್ಕೆ ಬರಲಿದೆ.

ಕರ್ಕಾಟಕ: ವಿದ್ಯಾರ್ಥಿಗಳು ಬಿಡುವಿನ ಸಮಯದಲ್ಲಿ ಕಂಪ್ಯೂಟರ್ ಅಧ್ಯಯನ ಮಾಡುವ ಬಗ್ಗೆ ಯೋಚಿಸಿ. ಮುಂದಿನ ದಿನಗಳಲ್ಲಿ ಉಪಯೋಗವಾಗುವುದು. ದಾನ-ಧರ್ಮ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಿರಿ.

ಸಿಂಹ: ಮನೋಲ್ಲಾಸಕ್ಕಾಗಿ ದೂರದ ಪ್ರಯಾಣದ ಸಾಧ್ಯತೆಗಳು ಹೆಚ್ಚಿರುವುದು. ಗೆಳೆಯರೊಂದಿಗೆ ಸಂತೋಷ ಕೂಟದಲ್ಲಿ ಪಾಲ್ಗೊಳ್ಳುವಿರಿ. ಸಂಗೀತ ಕಲಿಕೆಯಲ್ಲಿನ ನಿಮ್ಮ ಆಸಕ್ತಿಗೆ ನಿಮ್ಮ ತಂದೆ-ತಾಯಿಯಿಂದ ಪ್ರೋತ್ಸಾಹ ಸಿಗಲಿದೆ.

ಕನ್ಯಾ: ಸುತ್ತಮುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ನಿಮ್ಮ ಸುತ್ತಲಿನ ವಾತಾವರಣ ಸಂತಸದಾಯಕವಾಗಿ ಇರುತ್ತದೆ. ಬ್ಯಾಂಕ್ ಅಧಿಕಾರಿಗಳಿಗೆ ಉದ್ಯೋಗದಲ್ಲಿ ಸಣ್ಣ-ಪುಟ್ಟ ಬದಲಾವಣೆ.

ತುಲಾ: ನಿಮ್ಮ ಕೀರ್ತಿ ಎಲ್ಲ ಕಡೆಗೆ ಹರಡಲಿದೆ. ಬಂಧು ಮಿತ್ರರು ನಿಮ್ಮನ್ನು ಆದರದಿಂದ ಕಾಣುತ್ತಾರೆ. ಎಲ್ಲಾ ದಾರಿಗಳೂ ಸುಗಮ ಎನಿಸಿ ಎಲ್ಲಾ ಕಷ್ಟ ನಷ್ಟಗಳೂ ನಿವಾರಣೆಯ ಹಂತ ತಲುಪುವುದು.

ವೃಶ್ಚಿಕ: ಆಲಸ್ಯದಿಂದಾಗಿ ಯಾವುದೇ ಕೆಲಸಗಳನ್ನು ಮುಂದೂಡದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಮಿತ್ರರ ಸಹಕಾರದಿಂದ ಮತ್ತು ಅವರ ಚಾಣಾಕ್ಷತನ, ಮಾತುಗಾರಿಕೆಯನ್ನು ಕಲಿಯುವುದರಿಂದ ವ್ಯಾಪಾರದಲ್ಲಿ ಪ್ರಗತಿ.

ಧನು: ಸಾಮಾಜಿಕವಾಗಿ ನಿಮ್ಮ ಸ್ಥಾನ ಹೆಚ್ಚಿ ಒಬ್ಬ ಉತ್ತಮ ಅಧಿಕಾರಿ ಎನಿಸಿಕೊಳ್ಳುವಿರಿ. ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳುವ ಬಗ್ಗೆ ಗಮನವಿರಲಿ.

ಮಕರ: ದಂಪತಿಗಳಲ್ಲಿ ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಯಲಿದೆ. ಮಡದಿಯಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ, ಸ್ವ ಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗ್ಗಿ. ಹೊಸ ಜೀವನ ಪ್ರಾರಂಭವಾಗುವುದು.

ಕುಂಭ: ನಿಮ್ಮ ಕಲಾತ್ಮಕವಾದ ಮತ್ತು ಸೃಜನಶೀಲವಾಗಿ ಹೊಂದಿರುವ ವ್ಯಕ್ತಿತ್ವ ಮುಂದಿನ ದಿನಗಳಲ್ಲಿ ಇನ್ನಷ್ಟು ವರ್ಧಿಸಲಿದೆ. ಇನ್ನಷ್ಟು ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದು.


ಮೀನ: ಹತ್ತಾರು ವಿಷಯದಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟವಾದ ಒಂದು ಗುರಿ ತಲುಪವ ಪ್ರಯತ್ನವನ್ನು ಮಾಡಿ. ಅನಾಯಾಸದಿಂದ ಧನಾದಾಯವಿದ್ದರೂ ಅನಾವಶ್ಯಕ ಖರ್ಚು-ವೆಚ್ಚಗಳು ಬಿಕ್ಕಟ್ಟಿನ ಕಡೆಗೆ ಕಂಡೊಯ್ಯಲಿದೆ.

ಪದಬಂಧ 5001

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಒಪ್ಪವಾಗಿ ಬಂದಿರುವ ಬಿಂದು ರೂಪದ ವರ್ಣ (4)
3. ಮಿತಿ ಮೀರಿದ ಕೋಪವಿದು (3)
4. ಕಂಠೀಹಾರದ ಹತ್ತಿರ ಗರ್ಜಿಸುವ ಪ್ರಾಣಿಇದೆ (4)
6. ನ್ಯೂನತೆ ಅಥವಾ ಕಂಡಿ ಎಂದರೂ ಸರಿ! (2)
7. ನೆಮ್ಮದಿ ಹೀಗೆ ಬಂದಿದೆ (4)
8. ಪಚನಾಂಗ ಇಲ್ಲಿದೆ (3)
9. ಕೊನೆಗೆ ಹಣ್ಣೆಟ್ಟರ ಮಾಡಿದ ಕೆಲಸಕ್ಕೆ ದೊರೆತ ಲಾಭ! (4)
12. ಅಭಾವ ಕಾಲದಲ್ಲಿ ಅಕ್ಕನ ಗಂಡ ಬಂದಿರುವನಲ್ಲಾ! (2)
13. ಮಲಗುವ ಮನೆಯಿದು (4)
15. ಒಳ್ಳೆಯ ಗುಣಗಳಿಂದ ಕೂಡಿದ ಮನುಷ್ಯ (3)
16. ಎಳೆತನದಿಂದಲೂ ಬೆಳೆಸಿಕೊಂಡು ಬಂದಿರುವ ಸ್ನೇಹ (4)

ಮೇಲಿಂದ ಕೆಳಕ್ಕೆ
1. ಅಪರಿಚಿತನ ಹತ್ತಿರ ಚೊಕ್ಕ ಚಿನ್ನವಿದೆಯೇ? (4)
2. ಕಂದಾಚಾರದಲ್ಲೇ ಬೆಲೆಯನ್ನು ಹುಡುಕಿ! (2)
3. ಮೂವತ್ತೆರಡನೇ ಸಂವತ್ಸರ (3)
5. ವನದಲ್ಲಿ ಮಾತನಾಡುವುದು! (3)
7. ಸರೋವರದಲ್ಲಿ ಸಿಕ್ಕಿರುವ ಮಾಲೆ (2)
8. ಜಟಿಲತೆಯಿಂದ ಸಂಗ್ರಹಿಸಿರುವ ನೀರು (2)
9. ವೇಷ ಧರಿಸಿಕೊಂಡು ಒಳಹೋಗುವಿಕೆ (3)
10. ಅವನ ಸಾವು ಹೀಗೆ ಬಂದಿದೆ! (4)
11. ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
14. ಹಲಗೆಗಾಗಿ ಬೆಳೆದಿರುವ ವೈರ! (2)



5000ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ತಾರಾಪುಂಜ 5.ನಗದು 6.ಮಾವಟಿಗ 8.ಗಡಿಪಾರು 12.ಪ್ರಕರಣ 14.ಅನುವಾದ 15.ವರಾಹ 16.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಸ್ಥಾನಬದ್ಧತೆ 2.ಮದುಮಗ 3.ತಾರುಮಾರು 4.ಕಡಗ 7.ಟಿಕ್ಕೆ 9.ವಾಚಕ 10.ಛಾಯಾಗ್ರಹಣ 11.ಜೇನು 12.ಪ್ರದರ್ಶನ 13.ಣಗುವಅ 14.ಅಡವಿ

ಸುಡೊಕು 5387

	7	9			3		8	
				8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5386 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಸುಲಲಿತ ವಹಿವಾಟು: 30ಕ್ಕೆ ರಾಜ್ಯಗಳ ಶ್ರೇಯಾಂಕ ವರದಿ

ನವದೆಹಲಿ (ಪಿಟಿಐ): ಸುಲಲಿತ ಉದ್ದಿಮೆ ವಹಿವಾಟಿಗೆ ಸಂಬಂಧಿಸಿದಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಶ್ರೇಯಾಂಕದ ವಿವರವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಇದೇ 30ರಂದು ಬಿಡುಗಡೆ ಮಾಡಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2020ರ ವಹಿವಾಟು ಸುಧಾರಣಾ ಕ್ರಿಯಾ ಯೋಜನೆಯ (ಬಿಆರ್‌ಎಪಿ) ಅಡಿಯಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಾರ್ಷಿಕ ಸುಧಾರಣಾ ಕ್ರಮಗಳ ಪರಿಶೀಲನಾ ವರದಿಯನ್ನು ಜೂನ್ 30ರಂದು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ನಿರ್ಮಾಣ ಪರವಾನಗಿ, ಕಾರ್ಮಿಕರ ನಿಯಂತ್ರಣ ಕಾಯ್ದೆ, ಪರಿಸರ ಪರವಾನಗಿ, ಭೂಮಿ ಲಭ್ಯತೆ ಮತ್ತು ಏಕ ಗವಾಕ್ಷಿ ವ್ಯವಸ್ಥೆ ಸೇರಿದಂತೆ ಇನ್ನೂ ಹಲವು ಅಂಶಗಳನ್ನು ಪರಿಗಣಿಸಲಾಗುತ್ತದೆ. ಕೈಗಾರಿಕಾ ಉತ್ತೇಜನೆ ಮತ್ತು ಆಂತರಿಕ ವ್ಯಾಪಾರ ಇಲಾಖೆಯು (ಡಿಪಿಐಐಟಿ) ಬಿಆರ್‌ಎಪಿ ಅಡಿಯಲ್ಲಿ ರಾಜ್ಯಗಳು ಕೈಗೊಂಡಿರುವ ವಾರ್ಷಿಕ ಸುಧಾರಣಾ ಕ್ರಮಗಳನ್ನು ಪರಿಶೀಲನೆ ನಡೆಸಿ ಸ್ಥಾನಮಾನ ನೀಡುತ್ತದೆ.

2020ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಮಾಡಿದ್ದ ವರದಿಯ ಪ್ರಕಾರ, ಶ್ರೇಯಾಂಕದಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನ ಪಡೆದಿತ್ತು. ಕರ್ನಾಟಕ 17ನೇ ಸ್ಥಾನ ಪಡೆದುಕೊಂಡಿತ್ತು.

ಈವರೆಗೆ 2015, 2016,2017–18 ಮತ್ತು 2019ಕ್ಕೆ ಸಂಬಂಧಿಸಿದಂತೆ ರಾಜ್ಯಗಳ ಶ್ರೇಯಾಂಕ ವರದಿ ಬಿಡುಗಡೆ ಮಾಡಲಾಗಿದೆ.

ಕ್ಯಾಸಿನೊ, ಕುದುರೆ ರೇಸ್‌ಗೆ ಶೇ 28ರಷ್ಟು ಜಿಎಸ್‌ಟಿ?

ನವದೆಹಲಿ (ಪಿಟಿಐ): ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸುವ ಕುರಿತು ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಪರಿಶೀಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಇದೇ 28 ಮತ್ತು 29ರಂದು ಜಿಎಸ್‌ಟಿ ಮಂಡಳಿ ಸಭೆ ನಡೆಯಲಿದೆ. ಶೇ 28ರಷ್ಟು ತೆರಿಗೆ ವಿಧಿಸುವ ಕುರಿತು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನೇತೃತ್ವದ ಸಮಿತಿಯು ಈ ಶಿಫಾರಸು ಮಾಡಿದೆ. ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಈಗ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡುವ ವ್ಯವಸ್ಥೆಯು ಇದೇ ತಿಂಗಳಿಗೆ ಅಂತ್ಯವಾಗಲಿದ್ದು, ಬಿಜೆಪಿಯ ವಿರೋಧ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳು ಬಲವಾಗಿ ಆಗ್ರಹಿಸುತ್ತಿವೆ. ಹೀಗಾಗಿ ಈ ಕುರಿತು ಸಭೆಯಲ್ಲಿ ಬಿರುಸಿನ ಚರ್ಚೆ ನಡೆಯುವ ನಿರೀಕ್ಷೆ ಇದೆ. ಅಲ್ಲದೆ, ಕೆಲವು ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ದರದಲ್ಲಿ ಬದಲಾವಣೆ ಹಾಗೂ ಜಿಎಸ್‌ಟಿ ವ್ಯವಸ್ಥೆಯನ್ನು ಇನ್ನಷ್ಟು ಸರಳಗೊಳಿಸುವ ಬಗ್ಗೆಯೂ ಚರ್ಚೆ ನಡೆಯುವ ಸಾಧ್ಯತೆ ಇದೆ.

₹ 45,841 ಕೋಟಿ ವಿದೇಶಿ ಬಂಡವಾಳ ಹಿಂತೆಗೆತ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಯಿಂದ ಜೂನ್‌ನಲ್ಲಿ ಈವರೆಗೆ ₹ 45,841 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಅಮೆರಿಕ ಮತ್ತು ಭಾರತದ ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿ ಬಿಗಿಗೊಳಿಸಿರುವುದು, ತೈಲ ದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ರೂಪಾಯಿ ಮೌಲ್ಯ ಇಳಿಕೆಯಿಂದ 2022ರಲ್ಲಿ ಈವರೆಗೆ ಒಟ್ಟಾರೆ ₹2.13 ಲಕ್ಷ ಕೋಟಿ ಬಂಡವಾಳ ಹೊರಹರಿವು ಆಗಿದೆ.

‘ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಮತ್ತು ಬಾಂಡ್ ಗಳಿಕೆಯು ಇದೇ ರೀತಿ ಮುಂದುವರಿದಲ್ಲಿ ಇನ್ನೂ ಹೆಚ್ಚಿನ ಬಂಡವಾಳ ಹೊರಹರಿವು ಆಗಲಿದೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಏನಿದು ಸಾವರಿನ್ ಗೋಲ್ಡ್ ಬಾಂಡ್?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಭಾರತೀಯರಿಗೆ ಚಿನ್ನ ಅಂದ್ರೆ ಪ್ರಂಚಪ್ರಾಣ. ಹಬ್ಬದ ಸೀಸನ್ ಶುರುವಾದರಂತೂ ಮುಗೀತು, ತಮ್ಮ ಶಕ್ತಿಗನುಗುಣವಾಗಿ ಎಲ್ಲರೂ ‘ಚಿನ್ನದ ಬೇಟೆ’ಗೆ ನಿಲ್ಲುತ್ತಾರೆ. ಇಂತಹ ಸಂದರ್ಭದಲ್ಲಿ ಆಭರಣ ಚಿನ್ನ ಖರೀದಿಯೋ, ಇಲ್ಲ ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಹೂಡಿಕೆಯೋ ಎನ್ನುವ ಪ್ರಶ್ನೆ ಹೂಡಿಕೆದಾರರಿಗೆ ಎದುರಾಗುತ್ತದೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲೇ ಗೊಂದಲಕ್ಕೆ ಬಿದ್ದು ಬಹುತೇಕ ಹೂಡಿಕೆದಾರರು ಆಭರಣ ಚಿನ್ನ ಖರೀದಿಗೆ ಮುಂದಾಗುತ್ತಾರೆ. ಬನ್ನಿ, ಈ ಸಂಚಿಕೆಯಲ್ಲಿ ಸಾವರಿನ್ ಗೋಲ್ಡ್ ಬಾಂಡ್ ಬಗ್ಗೆ ಪೂರ್ಣ ಮಾಹಿತಿ ತಿಳಿಯೋಣ.

ಏನಿದು ಸಾವರಿನ್ ಗೋಲ್ಡ್ ಬಾಂಡ್: ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡುವ ಬಾಂಡ್‌ಗಳನ್ನು ಸಾವರಿನ್ ಗೋಲ್ಡ್ ಬಾಂಡ್ ಎಂದು ಕರೆಯಬಹುದು. ಈ ಬಾಂಡ್‌ಗಳನ್ನು ಸರ್ಕಾರದ ಪರವಾಗಿ ಆರ್‌ಬಿಐ ವಿತರಿಸುತ್ತದೆ. ಘನರೂಪದ ಚಿನ್ನಕ್ಕೆ ಪ್ರತಿಯಾಗಿ ಬಾಂಡ್‌ಗಳನ್ನು ವಿತರಿಸಲಾಗುತ್ತದೆ. ಪ್ರತಿ ಬಾಂಡ್ ಒಂದು ಗ್ರಾಂ ಚಿನ್ನಕ್ಕೆ ಸಮಾನವಾದ ಮೌಲ್ಯವನ್ನು ಪ್ರತಿನಿಧಿಸುತ್ತದೆ.

ಯಾರು ಹೂಡಿಕೆ ಮಾಡಬಹುದು, ಮಿತಿ ಎಷ್ಟು: ಭಾರತದ ಪ್ರಜೆಗಳು, ಹಿಂದೂ ಅವಿಭಕ್ತ ಕುಟುಂಬಗಳು, ಟ್ರಸ್ಟ್‌ಗಳು, ಚಾರಿಟೆಬಲ್ ಸಂಸ್ಥೆಗಳು ಹೂಡಿಕೆ ಮಾಡಬಹುದು. ವ್ಯಕ್ತಿಗಳು ಮತ್ತು ಅವಿಭಕ್ತ ಕುಟುಂಬಗಳು ಕನಿಷ್ಠ 1 ಗ್ರಾಂ ಮತ್ತು ಗರಿಷ್ಠ 4 ಕೆ.ಜಿ. ವರೆಗೆ ಹೂಡಿಕೆ ಮಾಡಬಹುದು. ಟ್ರಸ್ಟಿಗಳಿಗೆ 20 ಕೆ.ಜಿ. ವರೆಗೆ ಹೂಡಿಕೆಗೆ ಅವಕಾಶವಿದೆ.

ಮೆಚ್ಯೂರಿಟಿ ಮತ್ತು ತೆರಿಗೆ: ಬಾಂಡ್ 8 ವರ್ಷಗಳ ನಂತರ ಮೆಚ್ಯೂರಿಟಿಗೆ ಒಳಪಡುತ್ತದೆ. ಐದೂವರೆ ವರ್ಷಗಳ ನಂತರ ಮೆಚ್ಯೂರಿಟಿ ಅವಧಿಗೆ ಮುನ್ನ ಬಾಂಡ್ ನಗದೀಕರಣಕ್ಕೆ ಅವಕಾಶವಿದೆ.

ಆಭರಣ ಚಿನ್ನ-ಗೋಲ್ಡ್ ಬಾಂಡ್ ಹೂಡಿಕೆ; ಯಾವುದು ಉತ್ತಮ?

ಗೋಲ್ಡ್ ಬಾಂಡ್‌ನಲ್ಲಿ ಡಬಲ್ ಲಾಭ: ಆಭರಣ ಚಿನ್ನದ ಮೇಲೆ ಹೂಡಿಕೆ ಮಾಡಿದಾಗ ಚಿನ್ನದ ಬೆಲೆ ಹೆಚ್ಚಳವಾದಾಗ ಮಾತ್ರ ಗಳಿಕೆ ಸಾಧ್ಯವಾಗುತ್ತದೆ. ಆದರೆ ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಹೂಡಿಕೆ ಮಾಡಿದಾಗ ಚಿನ್ನದ ಬೆಲೆ ಹೆಚ್ಚಳವಾದಾಗ ಅದರ ಲಾಭ ಸಿಗುವ ಜೊತೆಗೆ ವಾರ್ಷಿಕ ಶೇ 2.5 ರಷ್ಟು ಬಡ್ಡಿ ಲಾಭಾಂಶವೂ ಲಭಿಸುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ಪಾವತಿಯಾಗುತ್ತದೆ.

ಮೇಕಿಂಗ್ ಚಾರ್ಜಸ್‌ನ ಹೊರೆ ಇಲ್ಲ: ಆಭರಣ ಚಿನ್ನ ಖರೀದಿಸಿದಾಗ ಶೇ 10 ರಿಂದ ಶೇ 30 ರ ವರೆಗೆ ಮೇಕಿಂಗ್ ಚಾರ್ಜಸ್ ನೀಡಬೇಕಾಗುತ್ತದೆ. ಸಾವರಿನ್ ಗೋಲ್ಡ್ ಬಾಂಡ್ ಖರೀದಿಸಿದರೆ ಈ ಹೊರೆ ಇರುವುದಿಲ್ಲ.

ಗೋಲ್ಡ್ ಬಾಂಡ್‌ಗೆ ಶೇ 100 ರಷ್ಟು ಖಾತ್ರಿ: ಆಭರಣ ಚಿನ್ನ ಖರೀದಿಸುವಾಗ ಅದರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ನೀವೇ ತಲೆಕೆಡಿಸಿಕೊಳ್ಳಬೇಕು. ಸಾವರಿನ್ ಗೋಲ್ಡ್ ಬಾಂಡ್ ಅನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿವುದರಿಂದ ಗುಣಮಟ್ಟ ಮತ್ತು ಸುರಕ್ಷತೆ ಬಗ್ಗೆ ಶೇ 100 ರಷ್ಟು ಖಾತ್ರಿ ಇರುತ್ತದೆ.

ಜಿಎಸ್‌ಟಿ ಹೊರೆ ಇಲ್ಲ: ಆಭರಣ ಚಿನ್ನ ಖರೀದಿಸಿದಾಗ ಜಿಎಸ್‌ಟಿ ಕಟ್ಟುವ ಜೊತೆಗೆ, ಬಂಗಾರ ಸುರಕ್ಷಿತವಾಗಿಡಲು ಬ್ಯಾಂಕ್ ಲಾಕರ್ ವೆಚ್ಚ ಭರಿಸಬೇಕಾಗುತ್ತದೆ. ಸಾವರಿನ್ ಗೋಲ್ಡ್ ಬಾಂಡ್ ಖರೀದಿಸಿದರೆ ಜಿಎಸ್‌ಟಿಯೂ ಇಲ್ಲ, ಲಾಕರ್ ಶುಲ್ಕದ ಗೊಡವೆಯೂ ಇಲ್ಲ.

ಕನಿಷ್ಠ 1 ಗ್ರಾಂ ಹೂಡಿಕೆಯೂ ಸಾಧ್ಯ: ಸಾವರಿನ್ ಗೋಲ್ಡ್ ಬಾಂಡ್ ನಲ್ಲಿ ಕನಿಷ್ಠ 1 ಗ್ರಾಂ ನಿಂದಲೂ ಹೂಡಿಕೆಗೆ ಅವಕಾಶವಿದೆ. ಆಭರಣದ ಉದ್ದೇಶಕ್ಕಾದರೆ ಒಂದೆರಡು ಗ್ರಾಂ ಚಿನ್ನ ಖರೀದಿಯಿಂದ ಲಾಭವಿಲ್ಲ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಅನಿಶ್ಚಿತತೆ ನಡುವೆಯೂ ಸೂಚ್ಯಂಕಗಳ ಗಳಿಕೆ

ಷೇರುಪೇಟೆ

ಸತತ ಎರಡು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಅನಿಶ್ಚಿತತೆಯ ನಡುವೆಯೂ ಗಳಿಕೆಯ ಲಯಕ್ಕೆ ಮರಳಿವೆ. ಜೂನ್ 24 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಶೇ 2.66 ರಷ್ಟು ಜಿಗಿದಿದೆ. ನಿಫ್ಟಿ(50) ಶೇ 2.65 ರಷ್ಟು ಹೆಚ್ಚಳ ಕಂಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಚೇತರಿಕೆ, ಕಚ್ಚಾ ತೈಲ ಬೆಲೆಯಲ್ಲಿ ಇಳಿಕೆ, ಹಣದುಬ್ಬರ ನಿಯಂತ್ರಣದ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಸಕಾರಾತ್ಮಕ ಹೇಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಸುಧಾರಣೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ವಾಹನ ಸೂಚ್ಯಂಕ ಶೇ 7 ರಷ್ಟು ಜಿಗಿದಿದೆ. ಎಫ್‌ಎಂಸಿಜಿ, ಟೆಲಿಕಾಂ, ಮಾಹಿತಿ ತಂತ್ರಜ್ಞಾನ ಮತ್ತು ಆರೋಗ್ಯ ವಲಯದ ಸೂಚ್ಯಂಕಗಳು ತಲಾ ಶೇ 3 ರಷ್ಟು ಗಳಿಕೆ ದಾಖಲಿಸಿವೆ. ಲೋಹ ಸೂಚ್ಯಂಕ ಶೇ 4.9 ರಷ್ಟು ಕುಸಿದಿದೆ. ಇನ್ನು ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.6 ರಷ್ಟು ಹೆಚ್ಚಳ ಕಂಡರೆ. ಮಿಡ್ ಕ್ಯಾಪ್ ಶೇ 2.3 ಮತ್ತು ಲಾರ್ಜ್ ಕ್ಯಾಪ್ ಶೇ 2.6 ರಷ್ಟು ಸುಧಾರಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹11,511.77 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 11,670.62 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಐಷರ್ ಮೋಟರ್ಸ್ ಶೇ 10, ಹಿಂದೂಸ್ಥಾನ್ ಯುನಿಲಿವರ್ ಶೇ 9, ಮಾರುತಿ ಸುಜುಕಿ ಶೇ 9, ಮಹೀಂದ್ರ ಅಂಡ್ ಮಹೀಂದ್ರ ಶೇ 7.5, ಏಷಿಯನ್ ಪೇಂಟ್ಸ್ ಶೇ 7 , ಟೈಟಾನ್ ಶೇ 6 ಮತ್ತು ಟಿಸಿಎಸ್ ಶೇ 6 ರಷ್ಟು ಹೆಚ್ಚಳ ಕಂಡಿವೆ. ಯುಪಿಎಲ್ ಶೇ 4, ರಿಲಯನ್ಸ್ ಶೇ 3.5 ಮತ್ತು ಹಿಂಡಾಲ್ಕೋ ಶ್ 3.5 ರಷ್ಟು ತಗ್ಗಿವೆ.

ಮುನ್ನೋಟ: ಜಾಗತಿಕವಾಗಿ ಎಲ್ಲ ದೇಶಗಳನ್ನು ಹಣದುಬ್ಬರ ಕಾಡುತ್ತಿರುವುದು ನಿಜ. ಆದರೆ ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಗಳು ಹಣದುಬ್ಬರಕ್ಕಿಂತ ಹೆಚ್ಚಾಗಿ ಆರ್ಥಿಕ ಪ್ರಗತಿ ಕುಂಠಿತವಾಗುವ ಬಗ್ಗೆ ಆತಂಕದಲ್ಲಿವೆ. ಕಳೆದ ವಾರ ಷೇರುಪೇಟೆ ಪ್ರಗತಿ ಸಾಧಿಸಿದ್ದರೂ ಅನಿಶ್ಚಿತ ವಾತಾವರಣ ಮುಂದುವರಿಯಲಿದೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳು ಮತ್ತಷ್ಟು ಇಳಿಕೆ ಕಾಣುವ ಸಾಧ್ಯತೆ ಇದೆ. ಇದಲ್ಲದೆ ಜಾಗತಿಕ ವಿದ್ಯಮಾನಗಳು, ಜಿಎಸ್‌ಟಿ ಮಂಡಳಿಯ ಸಭೆ ಸೇರಿ ಇನ್ನಿತರ ಬೆಳವಣಿಗೆಗಳು ಷೇರುಪೇಟೆ ಮೇಲೆ ಪ್ರಭಾವ ಬೀರಲಿವೆ.

ರಿಲಯನ್ಸ್ ಕ್ಯಾಪಿಟಲ್ ದಿವಾಳಿ ಪ್ರಕ್ರಿಯೆ: ಗಡುವು ಮತ್ತೆ ವಿಸ್ತರಣೆ

ನವದೆಹಲಿ (ಪಿಟಿಐ): ರಿಲಯನ್ಸ್ ಕ್ಯಾಪಿಟಲ್ ಲಿಮಿಟೆಡ್‌ನ (ಆರ್‌ಸಿಎಲ್) ದಿವಾಳಿ ಪ್ರಕ್ರಿಯೆ ಪೂರ್ಣಗೊಳಿಸುವ ಕಾಲಮಿತಿಯನ್ನು ಮತ್ತೆ ಎರಡು ತಿಂಗಳವರೆಗೆ ವಿಸ್ತರಿಸಲು ಸಾಲಗಾರರ ಸಮಿತಿಯು (ಸಿಒಸಿ) ನಿರ್ಧರಿಸಿದೆ.

ದಿವಾಳಿ ಪ್ರಕ್ರಿಯೆಯನ್ನು ಎರಡನೇ ಬಾರಿಗೆ ವಿಸ್ತರಿಸಲಾಗುತ್ತಿದೆ. ಈ ಮೊದಲು ಜೂನ್ 3ಕ್ಕೆ ಇದ್ದ ಕಾಲಮಿತಿಯನ್ನು ಸೆಪ್ಟೆಂಬರ್ 2ರವರೆಗೆ ವಿಸ್ತರಣೆ ಮಾಡಲಾಗಿತ್ತು. ಇದೀಗ ಎರಡನೇ ಬಾರಿಗೆ ಅಂದರೆ ನವೆಂಬರ್ 2ರವರೆಗೆ ವಿಸ್ತರಣೆ ಮಾಡಲಾಗಿದೆ.

ಅರ್ಹ ಬಿಡ್‌ದಾರರು ಹೆಚ್ಚಿನ ಕಾಲಾವಧಿ ನೀಡುವಂತೆ ಆಡಳಿತಾಧಿಕಾರಿಗೆ ಪತ್ರ ಬರೆದಿದ್ದಾರೆ. ಹೀಗಾಗಿ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಿವಾಳಿ ಸಂಹಿತೆಯ (ಐಬಿಸಿ) ನಿಯಮದ ಪ್ರಕಾರ, ಆಡಳಿತಾಧಿಕಾರಿಯು ಕಂಪನಿಯ ದಿವಾಳಿ ಪ್ರಕ್ರಿಯೆಯನ್ನು 180 ದಿನಗಳ ಒಳಗಾಗಿ ಅಂದರೆ ಜೂನ್ 3ರ ಒಳಗಾಗಿ ಪೂರ್ಣಗೊಳಿಸಬೇಕು.

ಅರ್ಹ ಬಿಡ್‌ದಾರರಿಗೆ ಪುನಶ್ಚೇತನ ಯೋಜನೆಯನ್ನು ಸಲ್ಲಿಸಲು ನೀಡಿದ್ದ ಗಡುವನ್ನು ಜೂನ್ 20 ರಿಂದ ಜುಲೈ 11ರವರೆಗೆ ವಿಸ್ತರಿಸಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹350-588
ದ್ವಿತಳಿ (ಬಿ.ವಿ)	₹268-782

ಹೊಸೂರು ಎಂಎಸ್‌ಎಂಇ: ಜುಲೈನಲ್ಲಿ 2 ದಿನ ಮುಷ್ಕರ

ಪ್ರಜಾವಾಣಿ ವಾರ್ತೆ

ಚೆನ್ನೈ: ಹೊಸೂರಿನ ಕೈಗಾರಿಕಾ ಕೇಂದ್ರದಲ್ಲಿ ಇರುವ 2 ಸಾವಿರಕ್ಕೂ ಅಧಿಕ ಎಂಎಸ್‌ಎಂಇಗಳು ಜುಲೈ 13 ಮತ್ತು 14ರಂದು ಮುಷ್ಕರಕ್ಕೆ ಕರೆ ನೀಡಿವೆ. ಉತ್ಪನ್ನಗಳ ವೆಚ್ಚ ಮತ್ತು ಬೆಲೆಗೆ ಸಂಬಂಧಿಸಿದ ಹೊಸ ನೀತಿಗಳನ್ನು ಒಪ್ಪಿಕೊಳ್ಳುವಂತೆ ಕಂಪನಿಗಳಿಗೆ ಆಗ್ರಹಿಸಿ ಈ ಮುಷ್ಕರಕ್ಕೆ ಕರೆ ನೀಡಿವೆ.

‘ನಾವು ಮಾಡುವ ಕೆಲಸಕ್ಕೆ ತಕ್ಕ ಬೆಲೆ ಸಿಗುತ್ತಿಲ್ಲ ಎಂದು ಅನ್ನಿಸುತ್ತಿದೆ. ಜಿಎಸ್‌ಟಿ ವ್ಯವಸ್ಥೆ ಮತ್ತು ಕೋವಿಡ್ ನಿಯಂತ್ರಿಸಲು ಜಾರಿಗೆ ತಂದ ಲಾಕ್‌ಡೌನ್‌ಗಳಿಂದಾಗಿ ಐದು ವರ್ಷಗಳಿಂದ ನಷ್ಟ ಆಗಿದ್ದು, ಒತ್ತಡದಲ್ಲಿ ಇದ್ದೇವೆ’ ಎಂದು ಹೊಸೂರಿನ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಸಂಘದ (ಎಚ್‌ಒಎಸ್‌ಟಿಐಎ) ಅಧ್ಯಕ್ಷ ಕೆ. ವೇಲುಮುರುಗನ್ ತಿಳಿಸಿದ್ದಾರೆ.

‘ದೊಡ್ಡ ಕಂಪನಿಗಳಿಗೆ ಮಾಡಿ ಕೊಡುವ ಕೆಲಸ ಮತ್ತು ಉತ್ಪನ್ನಗಳ ದರ ಪಟ್ಟಿಯು ಬೆಂಗಳೂರಿನಂತಹ ನಗರಗಳಲ್ಲಿ ಇರುವುದಕ್ಕಿಂತಲೂ ಬಹಳಷ್ಟು ಕಡಿಮೆ ಇದೆ’ ಎಂದು ಅವರು ಹೇಳಿದ್ದಾರೆ.



ಜಿ–7 ಶೃಂಗಸಭೆಯಲ್ಲಿ ಭಾಗವಹಿಸಲು ಜರ್ಮನಿಯ ಮ್ಯೂನಿಕ್‌ಗೆ ಭೇಟಿ ನೀಡಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಬಾಲಕನೊಂದಿಗೆ ಮಾತನಾಡಿದರು –ಪಿಟಿಐ ಚಿತ್ರ

4ನೇ ಕೈಗಾರಿಕೆ ಕ್ರಾಂತಿಯಲ್ಲೂ ಭಾರತ ಹಿಂದೆ ಬಿದ್ದಿಲ್ಲ: ಮೋದಿ

ಮ್ಯೂನಿಕ್ (ಪಿಟಿಐ): ‘ಪ್ರಸ್ತುತ, ಜಗತ್ತಿನಲ್ಲಿ 4ನೇ ಕೈಗಾರಿಕಾ ಕ್ರಾಂತಿಯನ್ನು ಕಾಣುತ್ತಿದ್ದೇವೆ. ಈ ಕ್ಷೇತ್ರದಲ್ಲಿಯೂ ಭಾರತ ಹಿಂದೆ ಬಿದ್ದಿಲ್ಲ’ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಹೇಳಿದರು.ಜರ್ಮನಿ ಪ್ರವಾಸದಲ್ಲಿರುವ ಅವರು ಭಾನುವಾರ ಇಲ್ಲಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದರು.

‘ಐಟಿ. ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಅದ್ಭುತ ಸಾಧನೆ ಮಾಡಿದೆ. ಜಾಗತಿಕವಾಗಿ ನಡೆಯುವ ಡಿಜಿಟಲ್ ವ್ಯವಹಾರದಲ್ಲಿ ಭಾರತದ ಪಾಲು ಶೇ 40ರಷ್ಟಿದೆ. ಇಂಟರ್‌ನೆಟ್ ಡೇಟಾ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ಭಾರತ, ವಿಶ್ವದಲ್ಲಿಯೇ ಅತ್ಯಂತ ಕಡಿಮೆ ದರದಲ್ಲಿ ಇಂಟರ್‌ನೆಟ್ ಸೇವೆ ನೀಡುವ ದೇಶವಾಗಿದೆ’ ಎಂದರು.

‘ದೇಶದ ಶೇ 99ರಷ್ಟು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ಪ್ರತಿ ಗ್ರಾಮವೂ ಬಯಲು ಶೌಚದಿಂದ ಮುಕ್ತವಾಗಿದೆ. ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ 2 ವರ್ಷಗಳಿಂದ ದೇಶದ 80 ಕೋಟಿ ಬಡವರಿಗೆ ಉಚಿತವಾಗಿ ಪಡಿತರ ನೀಡಲಾಗುತ್ತಿದೆ’ ಎಂದರು.

‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಾಡಿರುವ ಸಾಧನೆಗಳನ್ನು ಹೇಳುತ್ತಾ ಹೋದರೆ, ದೊಡ್ಡ ಪಟ್ಟಿಯೇ ಆಗುತ್ತದೆ. ಅವುಗಳನ್ನು ವಿವರಿಸುತ್ತಾ ಹೋದರೆ, ನಿಮ್ಮ ಊಟದ ಸಮಯ ಮುಗಿದರೂ, ನನ್ನ ಮಾತು ಮುಗಿಯುವುದಿಲ್ಲ’ ಎಂದು ನಗೆಬೀರಿದರು.

‘ನವಭಾರತ ತನ್ನ ಕನಸುಗಳನ್ನು ನನಸು ಮಾಡಲು, ಆ ಮೂಲಕ ಅಭಿವೃದ್ಧಿ ಸಾಧಿಸಲು ಸನ್ನದ್ಧವಾಗಿದೆ. ತನ್ನ ಸಾಮರ್ಥ್ಯಗಳಲ್ಲಿ ಭಾರತಕ್ಕೆ ನಂಬಿಕೆ ಇದೆ. ಹೀಗಾಗಿಯೇ ನಾವು ಹಳೆಯ ದಾಖಲೆಗಳನ್ನು ಮುರಿಯುವ ಜೊತೆಗೆ ಹೊಸ ಗುರಿಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗುತ್ತಿದ್ದೇವೆ’ ಎಂದು ಹೇಳಿದರು.

ರಷ್ಯಾದಿಂದ ಚಿನ್ನ ಆಮದಿಗೂ ನಿರ್ಬಂಧ

ಎಲ್ಮೌ, ಜರ್ಮನಿ (ಪಿಟಿಐ): ಅಮೆರಿಕ ಮತ್ತು ಜಿ–7 ಶೃಂಗದ ಏಳು ಪ್ರಮುಖ ದೇಶಗಳು ರಷ್ಯಾದಿಂದ ಚಿನ್ನ ಆಮದು ಮಾಡಿಕೊಳ್ಳುವುದರ ಮೇಲೆ ನಿರ್ಬಂಧ ಹೇರಲಿವೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಉಕ್ರೇನ್‌ನಲ್ಲಿ ಯುದ್ಧದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿದೆ. ಇದು ರಷ್ಯಾದ ಮೇಲೆ ಆರ್ಥಿಕವಾಗಿ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಆಶಿಸಲಾಗಿದೆ. ಜಿ–7 ಶೃಂಗದ ವಾರ್ಷಿಕ ಸಭೆಯು ಮಂಗಳವಾರ ನಡೆಯಲಿದ್ದು, ಈ ಕುರಿತ ಔಪಚಾರಿಕ ಪ್ರಕಟಣೆಯು ಅಂದೇ ಹೊರಬೀಳುವ ನಿರೀಕ್ಷೆಯಿದೆ. ಈಗಾಗಲೇ ಬ್ರಿಟನ್, ಅಮೆರಿಕ, ಕೆನಡಾ, ಜಪಾನ್ ರಷ್ಯಾದಿಂದ ಚಿನ್ನ ಆಮದು ಮಾಡಿಕೊಳ್ಳಲು ನಿರ್ಬಂಧ ಹೇರಲು ಸಹಮತ ವ್ಯಕ್ತಪಡಿಸಿವೆ.

ತೈಲದ ನಂತರ ರಷ್ಯಾ ಹೆಚ್ಚು ರಫ್ತು ಮಾಡುವ ವಸ್ತು ಚಿನ್ನ. ಚಿನ್ನ ಆಮದಿನ ಮೇಲಿನ ನಿರ್ಬಂಧದಿಂದ ಜಾಗ ತಿಕ ಮಾರುಕಟ್ಟೆಯಲ್ಲಿ ರಷ್ಯಾದ ಭಾಗವಹಿಸುವಿಕೆಗೂ ಹಿನ್ನಡೆಯಾಗಲಿದೆ.

ಸಂಕ್ಷಿಪ್ತ ಸುದ್ದಿ

ಕೀವ್ ಅತಿಕ್ರಮಣಕ್ಕೆ ರಷ್ಯಾ ಸೇನೆ ಯತ್ನ

ಕೀವ್ (ಎ.ಪಿ): ಉಕ್ರೇನ್‌ನ ರಾಜಧಾನಿ ಕೀವ್ ಮೇಲೆ ರಷ್ಯಾ ಭಾನುವಾರ ಬೆಳಿಗ್ಗೆ ಕ್ಷಿಪಣಿ ದಾಳಿ ನಡೆಸಿದೆ. ಕನಿಷ್ಠ ಎರಡು ವಸತಿ ಸಂಕೀರ್ಣಗಳನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆದಿದೆ ಎಂದು ಕೀವ್‌ನ ಮೇಯರ್ ತಿಳಿಸಿದ್ದಾರೆ.

ಜಿ–7 ಶೃಂಗಸಭೆಯು ಆರಂಭಗೊಳ್ಳುವ ಮುನ್ನ ಈ ಕ್ಷಿಪಣಿ ದಾಳಿ ನಡೆದಿದೆ. ಬೆಂಕಿ ಹೊತ್ತಿಕೊಂಡಿದ್ದ ಕಟ್ಟಡಗಳಿಂದ ನಾಗರಿಕರ ರಕ್ಷಣೆ ಕಾರ್ಯದಲ್ಲಿ ಸಿಬ್ಬಂದಿ ತೊಡಗಿದ್ದು, ಬೆಂಕಿಯಿಂದ ನಾಲ್ವರಿಗೆ ಸುಟ್ಟಗಾಯವಾಗಿದ್ದು, ಬಾಲಕಿಯನ್ನು ರಕ್ಷಿಸಲಾಗಿದೆ.

ಕ್ಷಿಪಣಿ ದಾಳಿಯ ಮೂಲಕ ಕೀವ್ ಅನ್ನು ಪಶ್ಚಿಮ ಭಾಗದಿಂದ ಅತಿಕ್ರಮಿಸುವ ಯತ್ನಕ್ಕೆ ರಷ್ಯಾದ ರಕ್ಷಣಾ ಪಡೆಗಳು ಮುಂದಡಿ ಇಟ್ಟಿವೆ. ಪ್ರಾಥಮಿಕ ಮಾಹಿತಿ ಪ್ರಕಾರ, ಕೀವ್ ವಲಯದ ಮೇಲೆ ಕನಿಷ್ಠ 14 ಕ್ಷಿಪಣಿಗಳನ್ನು ಪ್ರಯೋಗಿಸಲಾಗಿದೆ ಎಂದು ಉಕ್ರೇನ್‌ನ ಸಂಸದ ಒಲೆಕ್ಸಿ ಗೊಂಚರೆಂಕೊ ಟ್ವೀಟ್ ಮಾಡಿದ್ದಾರೆ. ಜೂನ್ 5ರ ನಂತರ ನಡೆದ ಮೊದಲ ಕ್ಷಿಪಣಿ ದಾಳಿ ಇದಾಗಿದೆ.

ಮ್ಯಾಡ್ರಿಡ್‌ನಲ್ಲಿ ಇದೇ ವಾರ ನಡೆಯಲಿರುವ ನ್ಯಾಟೊ ಸಭೆಯ ಹಿನ್ನೆಲೆಯಲ್ಲಿ ನಡೆದಿರುವ ಸಾಂಕೇತಿಕ ದಾಳಿ ಇದಾಗಿರಹುದು ಎಂದು ಹೇಳಲಾಗಿದೆ. ಅಲ್ಲದೆ, ಎರಡು ಕಡೆ ಸ್ಫೋಟದ ಸದ್ದು ಕೇಳಿದ್ದು, ಇದರಿಂದ ಆಗಿರುವ ಹಾನಿಯ ಮಾಹಿತಿ ಸದ್ಯಕ್ಕೆ ಗೊತ್ತಾಗಿಲ್ಲ.

ಶನಿವಾರವೂ ರಷ್ಯಾದ ಸೇನೆ ವಿವಿಧೆಡೆ ಕ್ಷಿಪಣಿ ದಾಳಿ ನಡೆಸಿತ್ತು. ಮೊದಲ ಬಾರಿಗೆ ಟು–22 ಬಾಂಬರ್‌ಗಳನ್ನು ಪ್ರಯೋಗಿಸಿತ್ತು ಎಂದು ಉಕ್ರೇನ್‌ನ ವಾಯುಪಡೆ ಮುಖ್ಯಸ್ಥರು ಹೇಳಿದ್ದಾರೆ. ಉಕ್ರೇ ನ್‌ನ ಸೀವಿರೋಡೋನೆಟ್ಸ್ಕ್, ಇತರೆ ಪ್ರದೇಶಗಳ ಮೇಲೆ ರಷ್ಯಾ ನಿಯಂತ್ರಣ ಸಾಧಿಸಿದೆ. ಈಗ ಲೈಸಿಚಾನ್ಸ್ಕ ಮೇಲೆ ಹಿಡಿತ ಸಾಧಿಸಲು ಯತ್ನಿಸಲಾಗುತ್ತಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಇಗೋರ್ ಕೊನಶೆಂಕೋವ್ ಹೇಳಿದರು.

ಹಡಗಿಗೆ ಬೆಂಕಿ: ಒಬ್ಬ ಸಾವು, ಒಬ್ಬ ನಾಪತ್ತೆ

ಮನಿಲಾ (ಎಎಫ್‌ಪಿ): ಫಿಲಿಪ್ಪೀನ್ಸ್‌ನ ಕಡಲಿನಲ್ಲಿ ಭಾನುವಾರ ಹಡಗಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ಹಲವರು ಸಮುದ್ರಕ್ಕೆ ಹಾರಿದ್ದು, ಒಬ್ಬರು ನಾಪತ್ತೆಯಾಗಿದ್ದಾರೆ.

ಹಡಗಿನಲ್ಲಿ 15 ಮಕ್ಕಳು ಸೇರಿದಂತೆ 157 ಪ್ರಯಾಣಿಕರು ಹಾಗೂ ಎಂಟು ಮಂದಿ ಸಿಬ್ಬಂದಿ ಇದ್ದರು. ಮಾಮಾ ಮೇರಿ ಕ್ಲೋಯ್ ಹೆಸರಿನ ಈ ಹಡಗು ಬೋಹೋಲ್‌ನಿಂದ ಬ್ಯಾಟೊಗೆ ತೆರಳುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅತಿಯಾದ ಮದ್ಯಪಾನ 20 ಸಾವು

ಈಸ್ಟ್ ಲಂಡನ್, ದಕ್ಷಿಣ ಆಫ್ರಿಕಾ (ಎಎಫ್‌ಪಿ): ಇಲ್ಲಿನ ಸೆನೆರಿ ಪಾರ್ಕ್ ಪ್ರದೇಶದಲ್ಲಿರುವ ತಾತ್ಕಾಲಿಕ ನೈಟ್ ಕ್ಲಬ್‌ವೊಂದರಲ್ಲಿ ಕನಿಷ್ಠ 20 ಮಂದಿ ಯುವಜನರು ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

ಶೀಬೆನ್ ಎಂದು ಹೇಳಲಾಗುವ ತಾತ್ಕಾಲಿಕ ನೈಟ್‌ಕ್ಲಬ್‌ಗಳು ಇಲ್ಲಿ ಸಾಮಾನ್ಯವಾಗಿದ್ದು, ಮದ್ಯಪಾನಕ್ಕೂ ಅವಕಾಶವಿದೆ. ಮಿತಿಮೀರಿದ ಮದ್ಯ ಪಾನವೇ ಸಾವಿಗೆ ಕಾರಣ ಇರಬಹುದು ಎಂದು ಸ್ಥಳೀಯ ಸರ್ಕಾರದ ಸುರಕ್ಷತಾ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

41 ಸಲದ ಚಾಂಪಿಯನ್ ಮುಂಬೈ ತಂಡಕ್ಕೆ ಮುಖಭಂಗ: ಶುಭಂ ಶರ್ಮಾ, ಕುಮಾರ್ ಕಾರ್ತಿಕೇಯ ಮಿಂಚು

ಮಧ್ಯಪ್ರದೇಶಕ್ಕೆ ಚೊಚ್ಚಲ ರಣಜಿ ಕಿರೀಟ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಣಜಿ ಟ್ರೋಫಿ ಗೆದ್ದ ಮಧ್ಯಪ್ರದೇಶ ಕ್ರಿಕೆಟ್ ತಂಡ —ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಬೆಂಗಳೂರು: ಆದಿತ್ಯ ಶ್ರೀವಾಸ್ತವ ನಾಯಕತ್ವದ ಮಧ್ಯಪ್ರದೇಶ ತಂಡ ಮೊದಲ ಬಾರಿ ರಣಜಿ ಟ್ರೋಫಿ ಗೆದ್ದುಕೊಂಡಿತು.

ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಲಿಷ್ಠ ಮುಂಬೈ ಎದುರು 6 ವಿಕೆಟ್‌ಗಳಿಂದ ಜಯಿಸಿತು. ರಣಜಿ ಟೂರ್ನಿಯಲ್ಲಿ ಎರಡನೇ ಬಾರಿ ಫೈನಲ್ ಪ್ರವೇಶಿಸಿದ್ದ ಮಧ್ಯಪ್ರದೇಶ ಈ ಸಾಧನೆ ಮಾಡಿತು. ತಂಡದ ಎಲ್ಲ ಆಟಗಾರರ ಕಂಗಳೂ ತೇವಗೊಂಡಿದ್ದವು. ಕೋಚ್ ಚಂದ್ರಕಾಂತ್ ಪಂಡಿತ್ ಕೂಡ ಭಾವುಕರಾಗಿದ್ದರು. ಪಿ3 ಗ್ಯಾಲರಿಯಲ್ಲಿ ಸೇರಿದ್ದ ಪ್ರೇಕ್ಷಕರತ್ತ ಸಾಗಿದ ಆಟಗಾರರು, ಟ್ರೋಫಿ ತೋರಿಸಿ ಕೃತಜ್ಞತೆ ಸಲ್ಲಿಸಿದರು. 300ಕ್ಕೂ ಹೆಚ್ಚು ಪ್ರೇಕ್ಷಕರು ಕೂಡ ಚಪ್ಪಾಳೆ ತಟ್ಟಿ ಅಭಿನಂದಿಸಿದರು.

1998–99ರಲ್ಲಿ ಬೆಂಗಳೂರಿನಲ್ಲಿಯೇ ಫೈನಲ್ ಆಡಿತ್ತು. ಆಗ ಕರ್ನಾಟಕದ ಎದುರು ಸೋಲನುಭವಿಸಿತ್ತು. ಆದರೆ, ಈ ಬಾರಿ ಶಿಸ್ತು, ಯೋಜನಾಬದ್ಧ ಮತ್ತು ಛಲದ ಆಟದ ಮೂಲಕ ಟ್ರೋಫಿಗೆ ಮುತ್ತಿಡುವಲ್ಲಿ ಮಧ್ಯಪ್ರದೇಶ ಯಶಸ್ವಿಯಾಯಿತು. ಮೊದಲ ಇನಿಂಗ್ಸ್‌ನಲ್ಲಿ ಮುಂಬೈ ತಂಡವು ಗಳಿಸಿದ್ದ 374 ರನ್‌ಗಳಿಗೆ ಉತ್ತರವಾಗಿ ಮಧ್ಯಪ್ರದೇಶ 536 ರನ್ ಗಳಿಸಿ 162 ರನ್‌ಗಳ ಮುನ್ನಡೆ ಗಳಿಸಿತ್ತು.

ಶನಿವಾರ ಮಧ್ಯಾಹ್ನ ಎರಡನೇ ಇನಿಂಗ್ಸ್ ಆರಂಭಿಸಿದ ಮುಂಬೈ ಕೂಡ ದಿಟ್ಟ ಹೋರಾಟ ನಡೆಸಿತು. ಭಾನುವಾರ ಊಟದ ವಿರಾಮದ ವೇಳೆಗೆ 57.3 ಓವರ್‌ಗಳಲ್ಲಿ 269 ರನ್ ಗಳಿಸಿ ಆಲೌಟ್ ಅಯಿತು. ಆದರೆ, ಮಧ್ಯಪ್ರದೇಶ ತಂಡದ ಕುಮಾರ್ ಕಾರ್ತಿಕೇಯ ಸಿಂಗ್ ನಾಲ್ಕು ವಿಕೆಟ್ ಗಳಿಸಿದರು. ಯುವ ಆಟಗಾರ ಸುವೇದ್ ಪಾರ್ಕರ್ (51ರನ್) ಮತ್ತು ಸರ್ಫರಾಜ್ (45; 48ಎ) ಕಾಣಿಕೆ ನೀಡಿದರು. ಆದರೆ, ಯಶಸ್ವಿ ಜೈಸ್ವಾಲ್ ಮತ್ತು ಕೆಳಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದರಿಂದ ದೊಡ್ಡ ಗುರಿ ನೀಡುವುದು ಸಾಧ್ಯವಾಗಲಿಲ್ಲ.

ಇದರಿಂದಾಗಿ 108 ರನ್‌ಗಳ ಗುರಿ ಬೆನ್ನಟ್ಟಿದ ಮಧ್ಯಪ್ರದೇಶಕ್ಕೆ ಒತ್ತಡ ಹೇರುವ ಪ್ರಯತ್ನವನ್ನು ಮುಂಬೈ ಬೌಲರ್‌ಗಳು ಮಾಡಿದರು. ಅದರಲ್ಲೂ ಎಡಗೈ ಸ್ಪಿನ್ನರ್ ಶಮ್ಸ್ ಮಲಾನಿ (41ಕ್ಕೆ3) ಪ್ರಯತ್ನ ಫಲ ನೀಡಲಿಲ್ಲ.

ಆದರೆ, ಆರಂಭಿಕ ಬ್ಯಾಟರ್ ಹಿಮಾಂಶು ಮಂತ್ರಿ (37), ಶುಭಂ ಶರ್ಮಾ (30) ಮತ್ತು ರಜತ್ ಪಾಟೀದಾರ್ (ಔಟಾಗದೆ 30) ತಂಡವನ್ನು ಸುರಕ್ಷಿತವಾಗಿ ಗೆಲುವಿನ ದಡ ಸೇರಿಸಿದರು.

₹ 2 ಕೋಟಿ: ಮಧ್ಯಪ್ರದೇಶ ತಂಡ ₹ 2 ಕೋಟಿ ಹಾಗೂ ಮುಂಬೈ ₹1 ಕೋಟಿ ಬಹುಮಾನ ಪಡೆದುಕೊಂಡವು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಮುಂಬೈ: 374 (127.4 ಓವರ್‌ಗಳಲ್ಲಿ)
ಮಧ್ಯಪ್ರದೇಶ 536 (177.2 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್
ಮುಂಬೈ 269 (57.3 ಓವರ್‌ಗಳಲ್ಲಿ)
(ಶನಿವಾರ:22 ಓವರ್, 2 ವಿಕೆಟ್‌ಗೆ 113)
ಅರ್ಮಾನ್ ಬಿ ಗೌರವ್ 37 (40ಎ, 4X3),ಸುವೇದ್ ಬಿ ಕುಮಾರ್ 51 (58ಎ, 4X3, 6X1), ಸರ್ಫರಾಜ್ ಸಿ ಅನುಭವ್ ಬಿ ಪಾರ್ಥ್ 45 (48ಎ, 4X2, 6X1), ಜೈಸ್ವಾಲ್ ಸಿ ರಜತ್ ಬಿ ಕುಮಾರ್ 1 (2ಎ), ಶಮ್ಸ್ ಮಲಾನಿ ರನ್‌ಔಟ್/ಸಾರಾಂಶ್ 17 (24ಎ, 4X1), ತನುಷ್ ಸಿ ಹಿಮಾಂಶು ಬಿ ಕುಮಾರ್ 11 (24ಎ), ತುಷಾರ್ ರನ್‌ಔಟ್ 7 (25ಎ), ಮೋಹಿತ್ ಎಲ್‌ಬಿಡಬ್ಲ್ಯು ಬಿ ಪಾರ್ಥ್ 15 (25ಎ, 6X1), ಧವಳ್ ಔಟಾಗದೆ 2 (15ಎ)
ಇತರೆ: 14 (ಬೈ 4, ಲೆಗ್‌ಬೈ 4, ವೈಡ್ 6)
ವಿಕೆಟ್ ಪತನ: 3–139 (ಅರ್ಮಾನ್ ಜಾಫರ್; 25.6), 4–192 (ಸುವೇದ್ ಪಾರ್ಕರ್; 34.1), 5–198 (ಯಶಸ್ವಿ ಜೈಸ್ವಾಲ್; 34.5), 6–232 (ಶಮ್ಸ್ ಮಲಾನಿ;41.5), 7–236 (ಸರ್ಫರಾಜ್ ಖಾನ್; 43.3), 8–250 (ತನುಷ್ ಕೋಟ್ಯಾನ್; 50.1), 9–252 (ತುಷಾರ್ ದೇಶಪಾಂಡೆ; 52.1), 10–269 (ಮೋಹಿತ್ ಅವಸ್ತಿ; 57.3)
ಬೌಲಿಂಗ್: ಕುಮಾರ್ ಕಾರ್ತಿಕೇಯ ಸಿಂಗ್ 25–3–98–4, ಅನುಭವ್ ಅಗರವಾಲ್ 9–0–53–0, ಗೌರವ್ ಯಾದವ್ 10–0–53–2, ಪಾರ್ಥ್ ಸಹಾನಿ 7.3–0–43–2, ಸಾರಾಂಶ್ ಜೈನ್ 6–0–14–0.
ಮಧ್ಯಪ್ರದೇಶ 4ಕ್ಕೆ 108 (29.5 ಓವರ್)
ಹಿಮಾಂಶು ಬಿ ಶಮ್ಸ್ 37 (55ಎ, 4X3), ಯಶ್ ಬಿ ಕುಲಕರ್ಣಿ 1 (3ಎ), ಶುಭಂ ಸಿ ಅರ್ಮಾನ್ ಬಿ ಶಮ್ಸ್ 30 (75ಎ, 4X1, 6X1), ಪಾರ್ಥ್ ಸಿ ತನುಷ್ ಬಿ ಶಮ್ಸ್ 5 (7ಎ), ರಜತ್ ಔಟಾಗದೆ 30 (37ಎ, 4X4), ಆದಿತ್ಯ ಔಟಾಗದೆ 1 (2ಎ)
ಇತರೆ: 4 (ಬೈ 4)
ವಿಕೆಟ್ ಪತನ: 1–2 (ಯಶ್ ದುಬೆ; 1.2), 2–54 (ಹಿಮಾಂಶು ಮಂತ್ರಿ; 16.3), 3–66 (ಪಾರ್ಥ್ ಸಹಾನಿ;18.6), 4–101 (ಶುಭಂ ಶರ್ಮಾ; 28.1)
ಬೌಲಿಂಗ್: ಶಮ್ಸ್ ಮಲಾನಿ 13–0–41–3, ಧವಳ್ ಕುಲಕರ್ಣಿ 3–0–7–1, ತುಷಾರ್ ದೇಶಪಾಂಡೆ 3–1–3–0, ತನುಷ್ ಕೋಟ್ಯಾನ್ 8–0–29–0, ಮೋಹಿತ್ ಅವಸ್ತಿ 2–0–19–0, ಸರ್ಫರಾಜ್ ಖಾನ್ 0.5–0–5–0.
ಪಂದ್ಯಶ್ರೇಷ್ಠ: ಶುಭಂ ಶರ್ಮಾ
ಸರಣಿಶ್ರೇಷ್ಠ: ಸರ್ಫರಾಜ್ ಖಾನ್
ಫಲಿತಾಂಶ:ಮಧ್ಯಪ್ರದೇಶಕ್ಕೆ 6 ವಿಕೆಟ್ ಜಯ ಮತ್ತು ಪ್ರಶಸ್ತಿ

ಬಿದ್ದ ಅಂಗಣದಲ್ಲೇ ಗೆದ್ದ ಪಂಡಿತ್!

• ಗಿರೀಶ ದೊಡ್ಡಮನಿ


ಚಂದ್ರಕಾಂತ್ ಪಂಡಿತ್ ಮತ್ತು ಸುನಿಲ್ ಜೋಶಿ

ಬೆಂಗಳೂರು: ಭಾನುವಾರ ಮಧ್ಯಾಹ್ನ ಚಿನ್ನಸ್ವಾಮಿ ಕ್ರೀಡಾಂಗಣದ ಡಗ್‌ಔಟ್‌ನಲ್ಲಿದ್ದ ಮಧ್ಯಪ್ರದೇಶ ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಕಂಗಳಿಂದ ಆನಂದಭಾಷ್ಪ ಧಾರೆಯಾಗಿ ಹರಿದಿತ್ತು.

ಖಡಕ್ ಕೋಚ್ ಎಂದೇ ಕರೆಸಿಕೊಳ್ಳುವ 'ಚಂದು ಸರ್' ಭಾವುಕರಾಗಲು ಕಾರಣವೂ ಇದೆ. 23 ವರ್ಷಗಳ ಹಿಂದೆ ಮಧ್ಯಪ್ರದೇಶ ತಂಡದ ನಾಯಕರಾಗಿದ್ದ ಪಂಡಿತ್ ಇದೇ ಕ್ರೀಡಾಂಗಣದಲ್ಲಿ ಸುನೀಲ್ ಜೋಶಿ ನಾಯಕತ್ವದ ಕರ್ನಾಟಕದ ಎದುರು ಸೋಲುಂಡಿತ್ತು. ಅದಾದ ನಂತರ ರಣಜಿ ಕ್ರಿಕೆಟ್‌ನಲ್ಲಿ ಮಧ್ಯಪ್ರದೇಶವು ಈಗಲೇ ಫೈನಲ್ ಪ್ರವೇಶಿಸಿದ್ದು.

ನಾಕೌಟ್ ಪಂದ್ಯಗಳು ಬೆಂಗಳೂರಿನಲ್ಲಿಯೇ ನಡೆಯಲಿವೆ ಎಂದು ಗೊತ್ತಾದಗಿನಿಂದಲೇ ಪಂಡಿತ್ ಮನಸಲ್ಲಿ ಛಲ ಹರಳುಗಟ್ಟಿತ್ತು. ಬಿದ್ದ ಅಂಗಳದಲ್ಲಿ ಪುಟಿದೇಳುವ ಗಟ್ಟಿ ನಿರ್ಧಾರ ಅವರದ್ದಾಗಿತ್ತು. ಅದಕ್ಕೆ ತಕ್ಕಂತೆ ಆದಿತ್ಯ ಶ್ರೀವಾಸ್ತವ ನಾಯಕತ್ವದ ಬಳಗವೂ ಅಮೋಘ ಆಟ ಆಡಿತು.

ಫೈನಲ್‌ನಲ್ಲಿ 41 ಬಾರಿಯ ಚಾಂಪಿಯನ್ ಮುಂಬೈನ ಬಲಾಢ್ಯ ಸವಾಲನ್ನು ಕೂಡ ತಾಳ್ಮೆ ಮತ್ತು ಯೋಜನಾಬದ್ಧ ಆಟದಿಂದ ಮೆಟ್ಟಿನಿಂತು ಗೆದ್ದಿತು. ಮೂಲತಃ ಮುಂಬೈನ ಪಂಡಿತ್ ಅವರ ಯೋಜನೆ ಮತ್ತು ಬಹುವರ್ಷಗಳ ಆಸೆ ಈಡೇರಿತು. 1998–99ರಲ್ಲಿ ಇಲ್ಲಿ ನಡೆದಿದ್ದ ಫೈನಲ್‌ನಲ್ಲಿ 247 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮಧ್ಯಪ್ರದೇಶಕ್ಕೆ ಕರ್ನಾಟಕದ ಸಾಂದರ್ಭಿಕ ಬೌಲರ್ ವಿಜಯ್ ಭಾರದ್ವಾಜ್ (24ಕ್ಕೆ6) ಅಡ್ಡಗೋಡೆಯಾಗಿ ನಿಂತರು. ಅಮೋಘ ಬೌಲಿಂಗ್ ಮೂಲಕ ಕರ್ನಾಟಕಕ್ಕೆ ಜಯ ತಂದುಕೊಟ್ಟರು. ಮೊದಲ ಇನಿಂಗ್ಸ್‌ನಲ್ಲಿ ವೇಗಿ ದೊಡ್ಡಗಣೇಶ್ ಕೂಡ ಐದು ವಿಕೆಟ್ ಗೊಂಚಲು ಗಳಿಸಿದ್ದರು.

'ಅಂದು ಇಲ್ಲಿಯೇ ನನ್ನ ತಂಡ ಸೋತಿತ್ತು. ಆಗಿನಿಂದಲೂ ಮಧ್ಯಪ್ರದೇಶ ತಂಡಕ್ಕೆ ಕಾಣಿಕೆ ಕೊಡುವ ಛಲ ಇತ್ತು. ಇವತ್ತು ಕಾಲ ಕೂಡಿಬಂತು. ಅದೃಷ್ಟ, ಶ್ರಮ ಮತ್ತು ತಂಡದ ಆಟಗಾರರ ಪರಿಪೂರ್ಣ ಪರಿಶ್ರಮದಿಂದ ಇದು ಸಾಧ್ಯವಾಗಿದೆ' ಎಂದು 60 ವರ್ಷದ ಪಂಡಿತ್ ಸಂತಸ ಹಂಚಿಕೊಂಡರು.

ವಿಶೇಷವೆಂದರೆ; ಬಿಸಿಸಿಐ ಆಯ್ಕೆ ಸಮಿತಿ ಸದಸ್ಯರಾಗಿರುವ ಸುನೀಲ್ ಜೋಶಿ ಈ ಪಂದ್ಯ ವೀಕ್ಷಿಸಿದರು. ಪಂದ್ಯದ ನಂತರ ಪಂಡಿತ್ ಅವರನ್ನು ತಬ್ಬಿಕೊಂಡು ಅಭಿನಂದಿಸಿದರು. ಭಾರತ ತಂಡದ ಮಾಜಿ ವಿಕೆಟ್‌ಕೀಪರ್ ಬ್ಯಾಟರ್ ಪಂಡಿತ್, ಮುಂಬೈ ಮತ್ತು ಮಧ್ಯಪ್ರದೇಶ ತಂಡಗಳನ್ನು ದೇಶಿ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ್ದಾರೆ. ಕೋಚ್ ಆಗಿಯೇ ಅವರು ಹೆಚ್ಚು ಯಶಸ್ವಿಯಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಮುಂಬೈ ಮೂರು ಸಲ, ವಿದರ್ಭ ಎರಡು ಬಾರಿ ಮತ್ತು ಈಗ ಮಧ್ಯಪ್ರದೇಶ ಮೊದಲ ಬಾರಿ ಚಾಂಪಿಯನ್ ಆಗಿದೆ.

ಅವರ ಯಶಸ್ಸಿನ ಹಿಂದಿರುವ ಗುಟ್ಟಿನ ಬಗ್ಗೆ ಕೇಳಿದಾಗ, 'ಈ ರಹಸ್ಯ ನನಗೆ ನಿಜಕ್ಕೂ ಗೊತ್ತಿಲ್ಲ. ದೇವರನ್ನು ಅಪಾರವಾಗಿ ನಂಬುತ್ತೇನೆ. ಆಟದ ಬಗ್ಗೆ ಪ್ರೀತಿಯಿದೆ. ಎಂದಿಗೂ ಕ್ರಿಕೆಟ್‌ಗಿಂತ ದೊಡ್ಡವನೆಂದು ಭಾವಿಸಿಲ್ಲ' ಎಂದರು.


ಕಂಠೀರವ ಕ್ರೀಡಾಂಗಣದಲ್ಲಿ ಕೆಒಎ 'ವಿಶ್ವ ಒಲಿಂಪಿಕ್ ದಿನಾಚರಣೆ' ಅಂಗವಾಗಿ ಭಾನುವಾರ ಆಯೋಜಿಸಿದ್ದ ಓಟದಲ್ಲಿ ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜು, ಬೆಂಗಳೂರು ನಗರ ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ತಮಿಳುನಾಡು ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಧವ್ ಅರ್ಜುನ್, ಕ್ರೀಡಾಪಟುಗಳು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ರೋಹಿತ್ ಶರ್ಮಾಗೆ ಕೋವಿಡ್


ರೋಹಿತ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಅವರನ್ನು ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ತಿಳಿಸಿದೆ.

ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಜುಲೈ 1ರಂದು 'ಐದನೇ ಟೆಸ್ಟ್' ಆಡಲಿದೆ. ರೋಹಿತ್ ಅವರಿಗೆ ಆರು ದಿನಗಳ ಕಾಲ ಪ್ರತ್ಯೇಕವಾಸ ಇರುವುದರಿಂದ ವೇಗಿ ಜಸ್‌ಪ್ರೀತ್ ಬೂಮ್ರಾ ಅಥವಾ ವಿಕೆಟ್ ಕೀಪರ್ ರಿಷಭ್ ಅವರು ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ.

ಭಾರತ ಮತ್ತು ಇಂಗ್ಲೆಂಡ್ ತಂಡಗಳು ಕಳೆದ ವರ್ಷ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಮುಖಾಮುಖಿಯಾಗಿದ್ದವು. ನಾಲ್ಕು ಪಂದ್ಯಗಳು ಮುಕ್ತಾಯವಾಗಿದ್ದು, ಭಾರತ 2–1ರಲ್ಲಿ ಮುನ್ನಡೆ ಸಾಧಿಸಿದೆ. ಐದನೇ ಪಂದ್ಯವನ್ನು ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು.

ಫೈನಲ್‌ಗೆ ಕೋಲಾರ

ಬೆಂಗಳೂರು: ಕೋಲಾರ ತಂಡವು ಕೆಎಸ್‌ಎಫ್‌ಎ ಆಯೋಜಿಸಿರುವ ಅಂತರಜಿಲ್ಲಾ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಅಂತಿಮ ಲೀಗ್ ಪಂದ್ಯದಲ್ಲಿ ಕೋಲಾರ 2–2ರಿಂದ ಕಲಬುರಗಿ ತಂಡದೊಂದಿಗೆ ಡ್ರಾ ಸಾಧಿಸಿತು. ಹೆಚ್ಚು ಪಾಯಿಂಟ್ಸ್ ಗಳಿಸಿದ ಆಧಾರದ ಮೇಲೆ ಕೋಲಾರ ಫೈನಲ್‌ಗೆ ಲಗ್ಗೆಯಿಟ್ಟಿತು.

ಕೋಲಾರ ತಂಡದ ಪರ ಎರಡೂ ಗೋಲುಗಳನ್ನು ಸುನಿಲ್ ಕುಮಾರ್ (9 ಮತ್ತು 55ನೇ ನಿಮಿಷ) ಗಳಿಸಿದರು. ಕಲಬುರಗಿ ತಂಡಕ್ಕಾಗಿ ಮೊಹಮ್ಮದ್ ರೆಹಾನ್ ಖಾನ್ (13ನೇ ನಿಮಿಷ) ಮತ್ತು ಮಿರ್ಜಾ ಸಫ್ದರ್ ಬೇಗ್ (13ನೇ ನಿಮಿಷ) ಗೋಲು ಹೊಡೆದರು.


ಇಂಗ್ಲೆಂಡ್ ಗೆಲುವಿಗೆ 296 ರನ್ ಗುರಿ

ಲೀಡ್ಸ್ (ಎಪಿ): ನ್ಯೂಜಿಲೆಂಡ್ ಎದುರಿನ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯ ಗೆದ್ದು ಸರಣಿ ಕ್ಲೀನ್‌ಸ್ವೀಪ್ ಮಾಡುವ ಹಾದಿಯಲ್ಲಿ ಇಂಗ್ಲೆಂಡ್ ಇದೆ.

ಗೆಲುವಿಗೆ 296 ರನ್ ಗುರಿ ಪಡೆದಿರುವ ಇಂಗ್ಲೆಂಡ್ ನಾಲ್ಕನೇ ದಿನದಾಟದ ಅಂತ್ಯಕ್ಕೆ 2 ವಿಕೆಟ್ ಕಳೆದುಕೊಂಡು 183 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 329; ಇಂಗ್ಲೆಂಡ್: 360. ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 105.2 ಓವರ್‌ಗಳಲ್ಲಿ 326 (ಟಾಮ್ ಲಥಾಮ್ 76, ಡೆರಿಲ್ ಮಿಚೆಲ್ 56, ಟಾಮ್ ಬ್ಲಂಡೆಲ್ 88; ಜಾಕ್ ಲೀಚ್ 66ಕ್ಕೆ 5). ಇಂಗ್ಲೆಂಡ್: 39 ಓವರ್‌ಗಳಲ್ಲಿ 2ಕ್ಕೆ 183 (ಒಲಿ ಪೋಪ್ ಬ್ಯಾಟಿಂಗ್ 81, ಜೊ ರೂಟ್ ಬ್ಯಾಟಿಂಗ್ 55).

ಕಿಚ್ಚನಿಗೆ ಮಂಗೂಸ್ ಬ್ಯಾಟ್ ಕಾಣಿಕೆ ನೀಡಿದ ಕಪಿಲ್



ಕಿಚ್ಚ ಸುದೀಪ್‌ಗೆ ಕ್ರಿಕೆಟಿಗ ಕಪಿಲ್ ದೇವ್ ಕಾಣಿಕೆ ನೀಡಿದ ಬ್ಯಾಟ್ —ಟ್ವಿಟರ್ ಚಿತ್ರ

ಬೆಂಗಳೂರು: ಚಿತ್ರನಟ ಕಿಚ್ಚ ಸುದೀಪ್ ಅವರಿಗೆ ಭಾನುವಾರ ವಿಶೇಷ ದಿನವಾಗಿದೆ. 1983ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕ ಕಪಿಲ್ ದೇವ್ ಅವರು ತಮ್ಮ ಮಂಗೂಸ್ ಬ್ಯಾಟ್ ಅನ್ನು ಸುದೀಪ್‌ಗೆ ಕಾಣಿಕೆ ನೀಡಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಕಪಿಲ್ ಅಜೇಯ 175 ರನ್ ಗಳಿಸಿದ್ದರು. ಅದೊಂದು ಅವಿಸ್ಮರಣೀಯ ಮತ್ತು ಐತಿಹಾಸಿಕ ಇನಿಂಗ್ಸ್ ಆಗಿ ಕ್ರಿಕೆಟ್ ದಾಖಲಾಗಿದೆ. ಇತ್ತೀಚೆಗೆ ಕಪಿಲ್ ಬಯೋಪಿಕ್ '83' ಸಿನಿಮಾದ ಕನ್ನಡ ಅವತರಣಿಕೆಯನ್ನು ಸುದೀಪ್ ಅವರ ಫ್ಯಾಂಟಮ್ ಫಿಲ್ಮ್ಸ್ ಸಂಸ್ಥೆ ಮೂಲಕ ನಿರ್ಮಾಕ ಜಾಕ್ ಮಂಜು ವಿತರಣೆ ಮಾಡಿದ್ದು.

'ಇದು ಅದ್ಭುತ ಭಾನುವಾರ. ಕಪಿಲ್ ಸರ್ ದೊಡ್ಡ ಅಚ್ಚರಿಯ ಕಾಣಿಕೆ ನೀಡಿದ್ದೀರಿ. ಇಂತಹ ಐತಿಹಾಸಿಕ ಮಹತ್ವದ ಕಾಣಿಕೆಯನ್ನು ನನಗೆ ನೀಡಿದ್ದೀರಿ. ಇವತ್ತು ಜಗತ್ತಿನ ಉತ್ತುಂಗದಲ್ಲಿರುವಂತೆ ನನಗೆ ಭಾಸವಾಗುತ್ತಿದೆ. ತುಂಬಾ ತುಂಬಾ ಧನ್ಯವಾದಗಳು..' ಎಂಬ ಸಂದೇಶದೊಂದಿಗೆ ಸುದೀಪ್ ಬ್ಯಾಟ್ ಚಿತ್ರ ಟ್ವೀಟ್ ಮಾಡಿದ್ದಾರೆ.

ಕ್ರಿಕೆಟ್: ಶುಭಮನ್ ಗಿಲ್ ಅರ್ಧಶತಕ; ಪಂದ್ಯ ಡ್ರಾ

ಲೆಸ್ಟರ್‌ಶೈರ್: ಶುಭಮನ್ ಗಿಲ್ ಮತ್ತು ಲೂಯಿಸ್ ಕಿಂಬರ್ ಅವರ ಅರ್ಧಶತಕಗಳ ಬಲದಿಂದ ಲೆಸ್ಟರ್‌ಶೈರ್ ತಂಡವು ಭಾರತದ ಎದುರಿನ ಅಭ್ಯಾಸ ಪಂದ್ಯದಲ್ಲಿ ಡ್ರಾ ಸಾಧಿಸಿತು.

367 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ್ದ ತಂಡವು ಕೊನೆಯ ದಿನದಾಟದ ಮುಕ್ತಾಯಕ್ಕೆ 66 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 219 ರನ್ ಗಳಿಸಿತು. ಗಿಲ್ (62; 77ಎ, 4X8, 6X2) ಮತ್ತು ಲೂಯಿಸ್ (58; 86ಎ, 4X10) ಅವರು ತಂಡದ ಕುಸಿತಕ್ಕೆ ತಡೆಯೊಡ್ಡಿ ಸೋಲು ತಪ್ಪಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ 8ಕ್ಕೆ246, ಲೆಸ್ಟರ್‌ಶೈರ್ 244, ಎರಡನೇ ಇನಿಂಗ್ಸ್ ಭಾರತ 9ಕ್ಕೆ364 ಡಿಕ್ಲೆರ್, ಲೆಸ್ಟರ್‌ಶೈರ್: 4ಕ್ಕೆ219 (ಶುಭಮನ್ ಗಿಲ್ 62, ಸ್ಯಾಮ್ ಇವಾನ್ಸ್ 26, ಹನುಮವಿಹಾರಿ 26, ಲೂಯಿಸ್ ಕಿಂಬರ್ 58, ಆರ್. ಅಶ್ವಿನ್ 31ಕ್ಕೆ2) ಫಲಿತಾಂಶ: ಡ್ರಾ

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ ಇಂದಿನಿಂದ: ಸೆರೆನಾ ವಿಲಿಯಮ್ಸ್ ಕಣಕ್ಕೆ

ನಡಾಲ್, ಜೊಕೊವಿಚ್ 'ಫೇವರಿಟ್'

ಹುಲ್ಲಿನಂಕಣದಲ್ಲಿ ಟೆನಿಸ್ ಹಬ್ಬ

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಗೆ ವೇದಿಕೆ ಸಜ್ಜುಗೊಂಡಿದೆ. ಆಲ್ ಇಂಗ್ಲೆಂಡ್ ಕ್ಲಬ್‌ನ ಹುಲ್ಲಿನ ಅಂಕಣದಲ್ಲಿ ಮುಂದಿನ ಎರಡು ವಾರ ವಿಶ್ವದ ಪ್ರಮುಖ ಆಟಗಾರರು ಪೈಪೋಟಿ ನಡೆಸಲಿದ್ದಾರೆ. ಪುರುಷರ ವಿಭಾಗದಲ್ಲಿ ಸರ್ಬಿಯದ ನೊವಾಕ್ ಜೊಕೊವಿಚ್ ಮತ್ತು ಸ್ಪೇನ್‌ನ ರಫೆಲ್ ನಡಾಲ್ ಅವರು ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರು ಎನಿಸಿಕೊಂಡಿದ್ದಾರೆ.

₹ 400 ಕೋಟಿ ಒಟ್ಟು ಬಹುಮಾನ ಮೊತ್ತ

ಗೆದ್ದವರಿಗೆ ಎಷ್ಟು ಹಣ?

₹ 19.19 ಕೋಟಿ ಸಿಂಗಲ್ಸ್ ಚಾಂಪಿಯನ್

₹ 10.07 ಕೋಟಿ ರನ್ನರ್ ಅಪ್

₹ 5.13 ಕೋಟಿ ಸೆಮಿಫೈನಲಿಸ್ಟ್





ಅಗ್ರಶ್ರೇಯಾಂಕ	
ಪುರುಷರ ಸಿಂಗಲ್ಸ್	ನೊವಾಕ್ ಜೊಕೊವಿಚ್ (ಸರ್ಬಿಯ)
ಮಹಿಳೆಯರ ಸಿಂಗಲ್ಸ್	ಇಗಾ ಸ್ವೆಟೆಕ್ (ಪೋಲೆಂಡ್)
ಕಳೆದ ಬಾರಿಯ ವಿಜೇತರು	
ಪುರುಷರು	ನೊವಾಕ್ ಜೊಕೊವಿಚ್
ಮಹಿಳೆಯರು	ಆ್ಯಷ್ಲಿ ಬಾರ್ಟಿ
ಹೆಚ್ಚು ಪ್ರಶಸ್ತಿ	
ಪುರುಷರು	ರೋಜರ್ ಫೆಡರರ್ (8 ಸಲ)
ಮಹಿಳೆಯರು	ಮಾರ್ಟಿನಾ ನವ್ರಾಟಿಲೊವಾ (9 ಸಲ)



ಲಂಡನ್ (ಎಎಫ್‌ಪಿ): ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ ಸೋಮವಾರ ಆರಂಭವಾಗಲಿದ್ದು, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ನೊವಾಕ್ ಜೊಕೊವಿಚ್ ಮತ್ತು ರಫೆಲ್ ನಡಾಲ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ.

ಅಗ್ರಶ್ರೇಯಾಂಕ ಹೊಂದಿರುವ ಸರ್ಬಿಯದ ಜೊಕೊವಿಚ್, ಇಲ್ಲಿ ಏಳನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ಕಳೆದ ಬಾರಿಯ ಫೈನಲ್‌ನಲ್ಲಿ ಅವರು ಇಟಲಿಯ ಮಾಟಿಯೊ ಬೆರೆಟಿನಿ ಮಣಿಸಿ ಕಿರೀಟ ಮುಡಿಗೇರಿಸಿಕೊಂಡಿದ್ದರು.

ಫ್ರೆಂಚ್ ಓಪನ್ ಗೆದ್ದಿರುವ ನಡಾಲ್, ಇಲ್ಲಿ ಪ್ರಶಸ್ತಿ ಗೆದ್ದಿರುವುದು ಎರಡು ಸಲ ಮಾತ್ರ. 2008 ರಲ್ಲಿ ಚೊಚ್ಚಲ ಕಿರೀಟ ಜಯಿಸಿದ್ದ ಅವರು 2010 ರಲ್ಲಿ ಕೊನೆಯದಾಗಿ ಗೆದ್ದಿದ್ದರು. ಒಂದು ದಶಕದ ಬಿಡುವಿನ ಬಳಿಕ ಇಲ್ಲಿ ಚಾಂಪಿಯನ್ ಅಗುವುದು ಅವರ ಗುರಿ.

ವೃತ್ತಿಜೀವನದಲ್ಲಿ 20 ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಜೊಕೊವಿಚ್ ಅಥವಾ ದಾಖಲೆಯ 22 ಗ್ರ್ಯಾನ್‌ಸ್ಲಾಮ್ ಜಯಿಸಿರುವ ನಡಾಲ್ ಎಡವಿದರೆ, ಇಲ್ಲಿ ಪ್ರಶಸ್ತಿ ಗೆಲ್ಲುವ ಸಾಧ್ಯತೆಯಿರುವ ಇನ್ನೊಬ್ಬ ಆಟಗಾರನೆಂದರೆ ಮಾಟಿಯೊ ಬೆರೆಟಿನಿ. ಹುಲ್ಲುಹಾಸಿನ ಅಂಕಣದಲ್ಲಿ ನಡೆದ ಸತತ ಎರಡು ಟೂರ್ನಿಗಳಲ್ಲಿ (ಸ್ಟಟ್‌ಗರ್ಟ್ ಮತ್ತು ಕ್ವೀನ್ಸ್ ಕ್ಲಬ್) ಪ್ರಶಸ್ತಿ ಗೆದ್ದು ಅವರು ಇಲ್ಲಿಗೆ ಬಂದಿದ್ದಾರೆ.

ಫೆಡರರ್ ಗೈರು: ಪುರುಷರ ಸಿಂಗಲ್ಸ್‌ನಲ್ಲಿ ಇಲ್ಲಿ ಅತಿಹೆಚ್ಚು ಸಲ ಪ್ರಶಸ್ತಿ ಗೆದ್ದಿರುವ ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಈ ಬಾರಿ ಆಡುತ್ತಿಲ್ಲ. 1999 ರಲ್ಲಿ ಅವರು ಮೊದಲ ಬಾರಿ ಆಡಿದ್ದರು. ಅಂದಿನಿಂದ ಪ್ರತಿ ಟೂರ್ನಿಯಲ್ಲೂ ಪಾಲ್ಗೊಂಡಿದ್ದರು. ಎರಡು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಅವರ ಅನುಪಸ್ಥಿತಿ ಕಾಡಲಿದೆ.

ಸೆರೆನಾ ಆಕರ್ಷಣೆ: ಅಮೆರಿಕದ ಸೆರೆನಾ ವಿಲಿಯಮ್ಸ್ ಆಡಲು ಸಜ್ಜಾಗಿರುವುದು ಟೆನಿಸ್ ಪ್ರೇಮಿಗಳ ಕುತೂಹಲಕ್ಕೆ ಕಾರಣವಾಗಿದೆ. ಕಳೆದ ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಗಾಯಗೊಂಡು ಹೊರನಡೆದಿದ್ದ ಅವರು 12 ತಿಂಗಳಲ್ಲಿ ಯಾವುದೇ ಟೂರ್ನಿಯಲ್ಲೂ ಆಡಿಲ್ಲ. ಇದರಿಂದ ರ‍್ಯಾಂಕಿಂಗ್‌ನಲ್ಲಿ 1,204ನೇ ಸ್ಥಾನಕ್ಕೆ ಕುಸಿತ ಕಂಡಿದ್ದಾರೆ.

ರಷ್ಯಾದ ಸ್ಪರ್ಧಿಗಳು ಇಲ್ಲ

ಉಕ್ರೇನ್ ಮೇಲಿನ ಯುದ್ಧದ ಕಾರಣ ರಷ್ಯಾ ಮತ್ತು ಬೆಲಾರಸ್‌ನ ಸ್ಪರ್ಧಿಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಘಟಕರು ಅವಕಾಶ ನೀಡಿಲ್ಲ. ಆದ್ದರಿಂದ ಪುರುಷರ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ ಡೇನಿಯಲ್ ಮೆಡ್ವೆಡೆವ್ ಮತ್ತು ಎಂಟನೇ ರ‍್ಯಾಂಕ್‌ನ ಆಟಗಾರ ಆಂಡ್ರೆ ರುಬ್ಲೆವ್ ಅವರು ಆಡುತ್ತಿಲ್ಲ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಗ್ರ 20ರೊಳಗಿನ ರ‍್ಯಾಂಕ್ ಹೊಂದಿರುವ ಅರ್ಯಾನ ಸಬಲೆಂಕಾ, ದರಿಯಾ ಕಸಟ್ಕಿನಾ ಮತ್ತು ವಿಕ್ಟೋರಿಯಾ ಅಜರೆಂಕಾ ಅವರೂ ಆಡುವ ಅವಕಾಶ ಕಳೆದುಕೊಂಡಿದ್ದಾರೆ.

ಕ್ರಿಕೆಟ್: ಐರ್ಲೆಂಡ್ ನೆರವಿಗೆ ಟೆಕ್ಟರ್

ಡಬ್ಲಿನ್: ಹ್ಯಾರಿ ಟೆಕ್ಟರ್ ಅವರ ಬಿರುಸಿನ ಅರ್ಧಶತಕದ (64) ನೆರವಿನಿಂದ ಐರ್ಲೆಂಡ್ ತಂಡ ಮೊದಲ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತದ ಗೆಲುವಿಗೆ ಸವಾಲಿನ ಗುರಿ ನೀಡಿದೆ.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲ ಬ್ಯಾಟ್ ಮಾಡಿದ ಐರ್ಲೆಂಡ್ ನಿಗದಿತ 12 ಓವರ್‌ಗಳಲ್ಲಿ 4 ವಿಕೆಟ್‌ಗೆ 108 ರನ್ ಗಳಿಸಿತು. ಮಳೆಯ ಕಾರಣ ಪಂದ್ಯ ತಡವಾಗಿ ಆರಂಭವಾಯಿತು. ಇದರಿಂದ ಓವರ್‌ಗಳ ಸಂಖ್ಯೆಯನ್ನು 12ಕ್ಕೆ ಇಳಿಸಲಾಯಿತು.

ಐರ್ಲೆಂಡ್ ತಂಡ 22 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡು ಕುಸಿತ ಅನುಭವಿಸಿತು. ಈ ಹಂತದಲ್ಲಿ ಜತೆಯಾದ ಟೆಕ್ಟರ್ ಮತ್ತು ಲಾರ್ಸನ್ ಟಕರ್ ತಂಡಕ್ಕೆ ಆಸರೆಯಾದರು.

ಭಾರತದ ಬೌಲಿಂಗ್ ದಾಳಿಯನ್ನು ದಿಟ್ಟವಾಗಿ ಎದುರಿಸಿದ ಟೆಕ್ಟರ್ 33 ಎಸೆತಗಳಲ್ಲಿ 64 ರನ್ ಗಳಿಸಿದರು. ಆರು ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸಿದರು. ಟಕರ್ 16 ಎಸೆತಗಳಲ್ಲಿ ಎರಡು ಬೌಂಡರಿಗಳ ನೆರವಿನಿಂದ 18 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ 4ಕ್ಕೆ 108 (12 ಓವರ್) ಹ್ಯಾರಿ ಟೆಕ್ಟರ್ 64, ಲಾರ್ಸನ್ ಟಕರ್ 18, ಭುವನೇಶ್ವರ್ ಕುಮಾರ್ 16ಕ್ಕೆ 1, ಹಾರ್ದಿಕ್ ಪಾಂಡ್ಯ 26ಕ್ಕೆ 1, ಆವೇಶ್ ಖಾನ್ 22ಕ್ಕೆ 1, ಯಜುವೇಂದ್ರ ಚಾಹಲ್ 11ಕ್ಕೆ 1)

ಐರ್ಲೆಂಡ್ ವಿರುದ್ಧದ ಪಂದ್ಯ

ಆರ್ಚರಿ: ಬೆಳ್ಳಿ ಗೆದ್ದ ದೀಪಿಕಾ ಬಳಗ

ಪ್ಯಾರಿಸ್ (ಪಿಟಿಐ): ಭಾರತ ಮಹಿಳಾ ರಿಕರ್ವ್ ವಿಭಾಗದ ತಂಡವು ಆರ್ಚರಿ ವಿಶ್ವಕಪ್ ಸ್ಟೇಜ್ 3 ಟೂರ್ನಿಯಲ್ಲಿ ಬೆಳ್ಳಿ ಪದಕ ಜಯಿಸಿದೆ.

ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಸಿಮ್ರನ್‌ಜೀತ್ ಕೌರ್ ಅವರನ್ನೊಳಗೊಂಡ ತಂಡವು ಫೈನಲ್‌ನಲ್ಲಿ 1–5 ಪಾಯಿಂಟ್ಸ್‌ನಿಂದ ಚೀನಾ ತೈಪೆ ಆಟಗಾರ್ತಿಯರ ಎದುರು ಎಡವಿತು.


ಭಾನುವಾರ ಕೊನೆಗೊಂಡ ಟೂರ್ನಿಯಲ್ಲಿ ಭಾರತ ಒಟ್ಟು ಒಂದು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ತನ್ನದಾಗಿಸಿಕೊಂಡಿತು.

ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತ ಲಿ ಚೆನ್ ಯಿಂಗ್ ಅವರನ್ನೊಳಗೊಂಡ ಚೀನಾ ತೈಪೆ, ಮೂರು ಸೆಟ್‌ಗಳ ಹಣಾಹಣಿಯಲ್ಲಿ ಭಾರತದ ಆಟಗಾರ್ತಿಯರಿಗೆ ಸೋಲುಣಿಸಿತು.

ಮೊದಲ ಸೆಟ್‌ಅನ್ನು 53–56ರಿಂದ ಕೈಚೆಲ್ಲಿದ ದೀಪಿಕಾ ಬಳಗ ಎರಡನೇ ಸೆಟ್‌ಅನ್ನು 56–56ರಿಂದ ಸಮಬಲಗೊಳಿಸಿತು. ಆದರೆ ಸ್ಥಿರ ಪ್ರದರ್ಶನದ ಮೂಲಕ ಗಮನಸೆಳೆದ ಚೀನಾ ತೈಪೆ, ಮೂರನೇ ಸೆಟ್‌ನಲ್ಲಿ 56–53ರಿಂದ ಗೆದ್ದು ಚಿನ್ನದ ಪದಕಕ್ಕೆ ಮುತ್ತಿಟ್ಟಿತು.

ಟೋಕಿಯೊ ಒಲಿಂಪಿಕ್ಸ್ ಬಳಿಕ ಮಂಕಾಗಿದ್ದ ದೀಪಿಕಾ ಇಲ್ಲಿ ಬೆಳ್ಳಿ ಪದಕ ಜಯಿಸುವ ಮೂಲಕ ಲಯ ಕಂಡುಕೊಂಡರು.

ಅಭಿಷೇಕ್ ವರ್ಮ ಮತ್ತು ಜ್ಯೋತಿ ಸುರೇಖಾ ವೆನ್ನಂ ಶನಿವಾರ ಕಾಂಪೌಂಡ್ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದರು.



ಭಾರತದ ಸಿಮ್ರನ್‌ಜೀತ್ ಕೌರ್, ದೀಪಿಕಾ ಕುಮಾರಿ ಮತ್ತು ಅಂಕಿತಾ ಭಕತ್ – ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಈಜು: ಶರಣ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಣ್ ಶ್ರೀಧರ್ 38ನೇ ರಾಷ್ಟ್ರೀಯ ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕಕ್ಕೆ ಚಿನ್ನದ ಪದಕ ತಂದುಕೊಟ್ಟರು.

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಈಜುಪಟುಗಳು ಐದು ಚಿನ್ನ, ಎಂಟು ಬೆಳ್ಳಿ, ಹತ್ತು ಕಂಚು ಸೇರಿ ಒಟ್ಟು 23 ಪದಕ ಗೆದ್ದು ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸಿದರು. ಮಹಾರಾಷ್ಟ್ರ 10 ಚಿನ್ನ, ಮೂರು ಬೆಳ್ಳಿ ಮತ್ತು ನಾಲ್ಕು ಕಂಚು (ಒಟ್ಟು 17) ಜಯಿಸಿ ಅಗ್ರಸ್ಥಾನ ಪಡೆಯಿತು.

ಭಾನುವಾರ ಬಾಲಕರ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಶರಣ್ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಅವರು 4 ನಿಮಿಷ 47.14 ಸೆಕೆಂಡುಗಳಲ್ಲಿ ಗುರಿ ತಲುಪಿದರು. 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ (ಕಾಲ: 1 ನಿ. 14.63 ಸೆ.) ಕಂಚು ತಮ್ಮದಾಗಿಸಿಕೊಂಡರು.

50 ಮೀ. ಬಟರ್‌ಫ್ಲೈ (32.80 ಸೆ.) ವಿಭಾಗದಲ್ಲಿ ರೆಯಾಂಶ್ ಕಾಂತಿ ಬೆಳ್ಳಿ ಗೆದ್ದರು. ಅಲ್ಲದೆ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ (40.48 ಸೆ.) ಕಂಚು ಜಯಿಸಿದರು.

50 ಮೀ. ಬಟರ್‌ಫ್ಲೈ ಸ್ಪರ್ಧೆಯ ಬಾಲಕಿಯರ ವಿಭಾಗದಲ್ಲಿ ಅಲಿಸ್ಸಾ ಸ್ವೀಡಲ್ ರೆಗೊ ಕೂಡ ಬೆಳ್ಳಿ ಜಯಿಸಿದರು. ಅವರು 33.98 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 50 ಮೀ. ಫ್ರೀಸ್ಟೈಲ್‌ನಲ್ಲಿ (30.90 ಸೆ.) ಬೆಳ್ಳಿ ಗೆದ್ದರು.

ಡೈವಿಂಗ್‌ನಲ್ಲಿ ರಾಜ್ಯದ ಪೂರ್ವಿಕಾ ವೆಂಕಟೇಶ್ ಮೂರು ಕಂಚು ಜಯಿಸಿದರು.